(b) the reasons for such cancellation ;

(c) whether it has came to the notice of Government that this bus is very frequently cancelled or is run very unpunctually ;

(d) if so, the reasons for the Same ?

Sri MOHAMED ALI (Minister for Transport).—

(a) 4 days during the month of March 1970 and three days during the month of April 1970.

(b) For waut of vehicles.

(c) No. The service is not frequently cancelled. It is being operated to the scheduled timings but on a few occasions it has been cancelled for want of good running vehicles.

(d) *Vide* reply to clause (c) above.

Presentation of the Sixth Report of the Committee on Public Accounts

Sri S. SIVAPPA.—I beg to present the Sixth Report of the Committee of Public Accounts on the Appropriation and Finance Accounts 1967-68 and the Audit Report 1969,

Mr. SPEAKER.—The Sixth Report of the Committee on Public Accouuts on the Appropriation and Finance Accounts 1967-68 and the Audit Report 1969 is presented.

City of Bangalore Municipal Corporation (Amendment) Bill 1970 :

(1) Resolution to disapprove the ordinance.

(2) Motion to consider the Bill.

Mr. SPEAKER.—Hon. Member Sri M. Nagappa may move his statutory Resolution.

Sri M. NAGAPPA (Raichur).—I beg to move :

That this Assembly disapproves Ordinance No. 3 of 1970.

" The City of Bangalore Municipal Corporation (Amendment) Ordinance, 1970' issued by the Governor of Mysore on 9th June 1970"

Mr. SPEAKER.—Resolution moved:

" That this Assembly disapproves Ordinance No. 3 of 1970. 'The City of Bangalore Municipal Corporation (Amendment) Ordinance 1970 issued by the Governor of Mysore on 9th June 1970."

Now, the Hon. Minister for Municipal Administration may move the Bill for consideration.

Sri B. M. PATIL (Minister of State for Municipal Administration).—I beg to move:

" That the City of Bangalore Municipal Corporation (Amendment) Bill 1970, be taken into consideration."

Mr. SPEAKER.—Motion moved:

" That the City of Bangalore Municipal Corporation (Amendment) Bill, 1970 be taken into consideration."

† **Sri B. M. PATIL.**—Sir, it has been made very clear in the Statement of objects and reasons as to why this Bill is brought before this House.

Under this proposed Bill, certain provisions of the existing Corporation Act are to be amended and amongst them, the important Sections are Section 99, 104 and Schedule VIII of the Corporation Act.

According to the existing provisions in the Act, the Corporation was required to have its own electoral roll for conducting the elections to the Corporation which was required to be revised once in four years. This system involved several complications of administrative nature and inconvenience to the public, To overcome the complications, this Bill provides for making use of the electoral rolls meant for Assembly elections for conducting Corporation Elections also.

The existing provisions in Section 99 distinguish between Land and Building and the tax on building was levied permitting only 3 times the plinth area in excess as appurtenant to the building and any land in excess of the above was taxed as excess vacant land tax on the market value. Any land without a structure was taxed at 0.4 per cent of the market value of the land. When a Building was taxed, the value of the land is also taken and the levy of excess vacant land tax is an additional burden on the Tax payer. By experience it is found that the owners of vast lands in order to avoid payment of excess vacant land tax, parcelled about appurtenant land and broke up the vast enjoyable land and sold by bits, thus spoiling the beauty of the City by overcrowding the buildings and preventing more beneficial enjoyment of the property. To avoid this, the distinction between the vacant land and the building is being removed and land and building included in the property. While arriving at the rental value of the building, the value of the land that

is appurtenent to the building is also taken along with the value of the building to arrive at the rental value and the property. Thus the excess vacant land tax is removed and the market value of land wherever it existed for the determination of land tax is also removed.

In Section 104, the tax is payable by the tax payer and hence the word 'leviable' wherever it occurs is deleted and the word 'payable' is substituted. The onus of payment of tax is shifted on to the tax payer and he cannot escape payment by deferring payment on the plea that bills or demand notices are not served and later claiming that the same is time-barred.

In Section 104(3), it was felt that some more time should be allowed to the tax payer to pay up the tax without penalty, grace time of 30 days after commencement of any half year is being extended to 60 days.

The existing provisions in the Corporation Act have no reference to the provisions of the Mysore Town and Country Planning Act, 1961 and also the Outline Development Plan and the Regulations thereunder. This is mainly because the Mysore Town and Country Planning Act 1961 and the Outline Development Plan came into force recently whereas the Corporation Act is an old one. In the circumstances, we have to take care to see that the provisions in the two Acts relating to any common subject do not conflict with each other. With this object in views the present amendments are proposed so as to incorporate provision in the Bangalore City Corporation Act to take notice of the provisions in the Town and Country Planning Act 1961, when dealing with any subject governed by that Act and the Outline Development Plan so that the Town may develop in a co-ordinated and orderly way.

(MR. DEPUTY SPEAKER in the Chair)

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ),—ಪ್ರೊಸೀಜರ್ ವಿಚಾರ ಸ್ವಲ್ಪ ತಿಳಿದುಕೊಳ್ಳಬೇಕಾಗಿದೆ. ಆರ್ಡಿನೆನ್ಸ್ ಮತ್ತು ಬಿಲ್ಲು ಎರಡರ ಮೇಲೂ ಮಾತನಾಡಲು ಅವಕಾಶ ಕೊಡುತ್ತೀರಾ ? ಬಿಲ್ ತಂದಿರುವುದು ಸರಿಯಲ್ಲವೆಂಬ ಆಧಾರದಮೇಲೆ ನಾಗಪ್ಪನವರು ನಿರ್ಣಯ ತಂದಿದ್ದಾರೆ, ಈ ಎರಡರಮೇಲೂ ಮಾತನಾಡಬಹುದೇ ?

ಉಪಾಧ್ಯಕ್ಷರು :—ಮಾತನಾಡಬಹುದು.

ಶ್ರೀ ಎಂ. ನಾಗಪ್ಪ.—ಸ್ವಾಮಿ ಅಧ್ಯಕ್ಷರೇ, ನಾನು ರಾಜ್ಯಪಾಲರು ತಂದ ಆಜ್ಞೆಯನ್ನು ಈ ಸಭೆ ಒಪ್ಪಬಾರದು, ಅದನ್ನು ನಿರಾಕರಿಸಬೇಕು ಎಂಬ ಸೂಚನೆಯನ್ನು ಸಭೆಯ ಮುಂದೆ ಮಂಡಿಸಿದ್ದೇನೆ. ಅದಕ್ಕೆ ಕಾರಣಗಳೇನೆಂಬುದು ವಿಚಾರಮಾಡಿದರೆ, ಈ ಆರ್ಡಿನೆನ್ಸ್‌ನ ಕೆಲವು ಕ್ಲಾಜುಗಳನ್ನು ನೋಡಿದರೆ ಸ್ಪಷ್ಟವಾಗುತ್ತದೆ. ಮೊದಲನೆಯ ಕ್ಲಾಜು ಟೈಟಲ್ ಬಗ್ಗೆ ಇದೆ. ಆದರೆ ಎರಡನೆಯ ಕ್ಲಾಜನ್ನು ನೋಡಿದರೆ ಸೆಕ್ಷನ್ 50 ಮತ್ತು 52 ಸೇರಿಸಬೇಕು, ಚುನಾವಣೆ ಯಾವ ಪ್ರಕಾರ ನಡೆಸಬೇಕು ಎಂದು ತಿಳಿಸಲಾಗಿದೆ. 4,5,6 ನೆಯ ಕ್ಲಾಜುಗಳನ್ನು ನೋಡಿದರೆ ಸರಕಾರ ತಂದ ರೀಪ್ಲೇಸಿಂಗ್ ಬಿಲ್ ಏನಿದೆ ಆದರಲ್ಲಿ ಆ ಕ್ಲಾಜುಗಳನ್ನು ಆ ಆಜ್ಞೆಯಲ್ಲಿ ಬಂದಿಲ್ಲ ಎಂಬ ರೀತಿ ಪರಿಗಣಿಸಬೇಕೆಂದು ಹೇಳಿದೆ. ಇದನ್ನು ಕ್ಲಾಜು 24 ರಲ್ಲಿ ನೋಡಬಹುದು.

" *24. Certain provisions of Mysore Ordinance No. 3 of 1970 not to have effect.*—Amendments to sub-section (2) of

(ಶ್ರೀ ಎಂ. ನಾಗಪ್ಪ)

Section 99, Sub-section (2) of Section 100, Section 101, sub-sections (1) and (2) of section 104, of the Principal Act by the City of Bangalore Municipal Corporation (Amendment) Ordinance, 1970 (Mysore Ordinance No. 3 of 1970) shall be deemed never to have been made and the provisions of sub-section (2) of section 99, sub-section (2) of Section 100, Section 101, sub-sections (1) and (2) of Section 104, of the principal Act as they stood prior to the said amendments shall and shall be deemed to continue to be in force."

ಎಂದರೆ ಈ ಆರ್ಡಿನೆನ್ಸ್ ಮೂಲಕ ಸೆಕ್ಷನ್ 99, 100, 101 ಮತ್ತು 104 ಏನಿವೆ ಅವನ್ನು ತಿದ್ದುಪಡಿ ಮಾಡಬೇಕು ಎಂಬ ಉದ್ದೇಶದಿಂದ ಈ ಆಜ್ಞೆಯನ್ನು ರಾಜ್ಯಪಾಲರು ಹೊರಡಿಸಿದ್ದಾರೆ. ಆದರೆ ಈ ರೀಪ್ಲೇಸಿಂಗ್ ಬಿಲ್ಲಿನಲ್ಲಿ ಈಗ ನಮ್ಮ ಸರಕಾರದವರು ಈ ಆಜ್ಞೆಯನ್ನು ರದ್ದುಮಾಡಬೇಕು, ಈ ಆಜ್ಞೆ ಬಂದಿಲ್ಲ ಎಂದು ಈ ಸಭೆ ಒಪ್ಪಬೇಕು ಎಂಬ ವಿಷಯವನ್ನು ಹೇಳಿದ್ದಾರೆ. ಇದನ್ನು ಆಜ್ಞೆ ಮತ್ತು ಬಿಲ್ ಈ ಎರಡರಲ್ಲೂ ಹೇಳಿದ್ದಾರೆ. ಈ ಎರಡು ವಿಷಯಗಳನ್ನೂ ಗಮನಿಸಿದರೆ ರಾಜ್ಯಪಾಲರು ಇಂಥ ಒಂದು ಆಜ್ಞೆಯನ್ನು ಹೊರಡಿಸಲು ಕಾರಣಗಳೇನೂ ಇರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇಂಥ ಆಜ್ಞೆ ಹೊರಡಿಸಬೇಕಾದರೆ ರಾಜ್ಯಪಾಲರು ರಾಜ್ಯಾಂಗದ ಆರ್ಟಿಕಲ್ 213ರ ಪ್ರಕಾರ ಹೊರಡಿಸಬೇಕು. ಆರ್ಟಿಕಲ್ 213ರ ಸಬ್-ಆರ್ಟಿಕಲ್ (1) ಈ ರೀತಿ ಇದೆ :

"213 (1) If at any time, except when the Legislative Assembly of a State is in session, or where there is a Legislative Council in a State, except when both Houses of the Legislature are in session, the Governer is satisfied that circumstances exist which render it necessary for him to take immediate action, he may promulgate such Ordinances as the circumstances appear to him to require."

ಇದರಲ್ಲಿ ಗಮನಿಸಬೇಕಾದ ಮುಖ್ಯ ಪದಗಳು ಎಂದರೆ :

"Circumstances exist which render it necessary for him to take immediate action."

ಈ ಪದಗಳು ಬಹಳ ಗಮನಾರ್ಹವಾದಂಥವುಗಳು. ಇಂತಹ ಒಂದು ಪರಿಸ್ಥಿತಿ ಇದ್ದರೆ ಮಾತ್ರ ರಾಜ್ಯಪಾಲರು ಆರ್ಟಿಕಲ್ 213ರಲ್ಲಿ ಕೊಟ್ಟಂಥ ಅಧಿಕಾರಗಳನ್ನು ಉಪಯೋಗಿಸತಕ್ಕ ಅರ್ಹತೆ ಅವರಿಗೆ ಇದೆ. ಇಂತಹ ಒಂದು ಪರಿಸ್ಥಿತಿ ಇರದೇ ಇದ್ದರೆ ಅವರು ಈ ಅಧಿಕಾರಗಳನ್ನು ಚಲಾಯಿಸಲಿಕ್ಕೆ ಅವರಿಗೆ ಹಕ್ಕು ಇಲ್ಲ. ಇಂತಹ ಒಂದು ಆಜ್ಞೆಯನ್ನು ಈ ಸಭೆ ತಿರಸ್ಕರಿಸತಕ್ಕದ್ದು ಎಂದು ಹೇಳಿ ನನ್ನ ಅಭಿಪ್ರಾಯ. ಹೆಚ್ಚು ಹೇಳುವುದು ಬೇಕಾಗಿಲ್ಲ, ಕ್ಲಾಸ್ 24ನ್ನು ಓದಿ ತೋರಿಸಿದ್ದೇನೆ. Clauses 4, 5 and 6 of the Ordinance are not deemed to have come into existence on that day and the original section is to be deemed to be in existence.

3-00 P.M.

ಅನ್ನತಕ್ಕ ಶಬ್ದಗಳು ಅಲ್ಲಿ ಇವೆ. ಆಂದಮೇಲೆ ಸರ್ಕಾರದವರು ಇಷ್ಟು ಒತ್ತಡದಿಂದ ಮಾಡಬೇಕಾದ್ದಕ್ಕೆ ಸಕಾರಣವಿರಲಿಲ್ಲ. ಗೌವರ್ನರಿಗೆ ಇಮೀಡಿಯೆಟ್ ಆಗಿ ಇಂತಹ ಒಂದು ಆಜ್ಞೆಯನ್ನು ಹೊರಡಿಸಬೇಕೆಂಬ ಒಂದು ಸೂಚನೆಯನ್ನು ಅವರು ಮಾಡಿದ್ದಾರೆ, ಅದು ಸಕಾರಣವಾಗಿಲ್ಲ. ಅದಕ್ಕೇ ರಾಜ್ಯಪಾಲರು ಮಾಡಿದಂತಹ ಆರ್ಡಿನೆನ್ಸನ್ನು ದಯವಿಟ್ಟು ತಾವೆಲ್ಲರೂ ತಿರಸ್ಕರಿಸಬೇಕೆಂಬ ಮಾತನ್ನು ಹೇಳುತ್ತೇನೆ.

ಅದೂ ಅಲ್ಲದೆ ಇದರಲ್ಲಿ ಇನ್ನೂ ಕೆಲವು ಕ್ಲಾಸುಗಳು ಇವೆ, ಎಲೆಕ್ಟೋರಲ್ ರೋಲ್ ಯಾವುದು ಒಪ್ಪಬೇಕು, ಯಾವ ಪ್ರಕಾರ ಎಲೆಕ್ಷನ್ ಮಾಡಬೇಕೆನ್ನುವುದು ಇದೆ. ಮಾನ್ಯ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಕೂತಿದ್ದಾರೆ. ಅವರು ಹಿಂದೆ ಇದೇ ಒಂದು ಬಿಲ್ಲಿನ ಮೇಲೆ ತಿದ್ದುಪಡಿ ತಂದಾಗ ಹೊಸ ನಿಯಮಾವಳಿಗಳನ್ನು ಮಾಡಿ Schedu'e ನಲ್ಲಿ ಸೇರಿಸಬೇಕೆಂದು ಹೇಳುವಂತಹ ಒಂದು ತಿದ್ದುಪಡಿಯನ್ನು ಮಾನ್ಯ ಸಭೆಯಲ್ಲಿ ಮಂಡಿಸಿದ್ದರು. ಆಗ ನಾನು ಒಂದು ತಿದ್ದುಪಡಿಯನ್ನು ಅದಕ್ಕೆ ಇಟ್ಟಿದ್ದೆ. Schedule VIII ರ ಪ್ರಕಾರ ನೀವು ಮಾಡಿದರೆ ಎಲೆಕ್ಷನ್ ಈ ವರ್ಷ ಅಲ್ಲ, ಇನ್ನೂ 5 ವರ್ಷವಾದರೂ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದೆ. ತಾವು ದಯವಿಟ್ಟು ನಾನು ಹಿಂದೆ ತಂದ ತಿದ್ದುಪಡಿಯನ್ನು ನೋಡಬಹುದು. ಆಗ ನಾನು ಮಂಡಿಸಿದ್ದ ತಿದ್ದುಪಡಿಯನ್ನು ಗಮನಿಸಬೇಕು. Schedule ಪ್ರಕಾರ ತಾವು ತಂದ ತಿದ್ದುಪಡಿ, ನಿಯಮಾವಳಿ ಮಾಡಬೇಕೆನ್ನುವುದು ಅಸಮಂಜಸವಾದದ್ದು, ಅದರ ಪ್ರಕಾರ ತಾವು ಬೆಂಗಳೂರು ಕಾರ್ಪೋರೇಷನ್ ಎಲೆಕ್ಷನ್ ಮಾಡಲ್ಲಿಕ್ಕೆ ಸಾಧ್ಯವಿಲ್ಲ, ಅದಕ್ಕೆ ತಾವು ನನ್ನ ತಿದ್ದುಪಡಿಯನ್ನು ಒಪ್ಪಬೇಕೆಂದು ಹೇಳಿದ್ದೆ. ಅವತ್ತು ನಾವು ತಂದಂತಹ ತಿದ್ದುಪಡಿಯಾದರೂ ಏನು ! ಈ ಲೆಜಿಸ್ಲೇಟಿವ್ ಅಸೆಂಬ್ಲಿಗೆ ಹೊಂದಿಕೊಂಡಂತಹ ಮತದಾರರ ಪಟ್ಟಿಯನ್ನೇ ಒಪ್ಪಬೇಕು ಎಂದರೆ ಮಾತ್ರ ತೀವ್ರವಾಗಿ ಎಲೆಕ್ಷನ್ ಮಾಡಲಿಕ್ಕೆ ಸಾಧ್ಯವಾಗುತ್ತದೆ, ತಾವು ಕೊಟ್ಟಂತಹ ಸಮಯದಲ್ಲಿ, ಬೇರೆ ಒಂದು ಮಾರ್ಗ ಮಾಡಿ, ಬೇರೆ ಒಂದು ಪಟ್ಟಿಯನ್ನು ಮಾಡಿ ಎಲೆಕ್ಷನ್ ಮಾಡುತ್ತೇವೆ ಎಂದರೆ, ನಿರ್ದಿಷ್ಟವಾದ ಸಮಯದಲ್ಲಿ ಮಾಡುವುದು ಅಸಾಧ್ಯ ಎಂಬ ಮಾತನ್ನು ಈ ಸಭೆಯಲ್ಲಿ ಹೇಳಿದ್ದೆ. ಆ ದಿವಸ ಆ ಪಕ್ಷದಲ್ಲಿ ಕುಳಿತಂತಹ ಸರ್ವ ಸದಸ್ಯರೂ ಸಹ ಮಾನ್ಯ ಮಂತ್ರಿಗಳ ಹೇಳಿಕೆಯನ್ನು ಕೇಳಿ ಆ ತಿದ್ದುಪಡಿಯನ್ನು ನಿರಾಕರಿಸಿದರು. ಇವತ್ತು ಅಂತಹದೇ ಆದ ಒಂದು ತಿದ್ದುಪಡಿಯನ್ನೇ ಸಭೆಯ ಎದುರಿಗೆ ತಂದಿದ್ದಾರೆ. ನಾನು ತಮ್ಮನ್ನು ಕೇಳುತ್ತೇನೆ, ಇದಕ್ಕೆ ಅಂತಹ ಒಂದು ಇಮೀಡಿಯಟ್ ಪರ್ಪಸ್ ಏನಿತ್ತು ? ಒಂದು ಸಾರಿ ಹಿಂದೆ ಇಂಥದ್ದೇ ತಿದ್ದುಪಡಿಯನ್ನು ತಂದಾಗ ಅದನ್ನು ಒಪ್ಪದೇ ಇವತ್ತಿನ ದಿವಸ ಗೌವರ್ನರ್ ರವರಿಂದ ಆಜ್ಞೆ ಮಾಡಿಸಬೇಕಾದ ಪರಿಸ್ಥಿತಿ ಏನಿತ್ತು ? ಅವರು ಆಜ್ಞೆಯನ್ನು ಹೊರಡಿಸಲಿಕ್ಕೆ ಇವತ್ತು ಏಕೆ ಉತ್ತೇಜನ ಕೊಟ್ಟಿದ್ದೀರಿ ? ಆದ್ದರಿಂದ ಆರ್ಟಿಕಲ್ 213ರ ಪ್ರಕಾರ ಗೌರ್ನರ್ ರವರು ತಮ್ಮ ಅಧಿಕಾರವನ್ನು ಸರಿಯಾಗಿ ಉಪಯೋಗಿಸಿಲ್ಲ ಎಂದು ನಾನು ಹೇಳುತ್ತೇನೆ. ಇಂತಹ ಒಂದು ಒತ್ತಡ ತರತಕ್ಕ ಸಮಯ ಇರಲಿಲ್ಲ, ಆರ್ಟಿಕಲ್ 213ರ ಪ್ರಕಾರ ಅವರು ತಮ್ಮ ಅಧಿಕಾರವನ್ನು ಸರಿಯಾಗಿ ಚಲಾಯಿಸಿಲ್ಲ ಎಂದು ನಾನು ಭಾವಿಸುತ್ತೇನೆ. ಇಂತಹ ನಾಲ್ಕು ವಿಷಯಗಳನ್ನು ತಮ್ಮ ಮುಂದೆ ಇಟ್ಟನಂತರ 3ನೇ ಕ್ಲಾಜು 2ನೇ ಕ್ಲಾಜು—ಇವುಗಳನ್ನು ಬಿಟ್ಟರೆ, ಮತ್ತೆ ಬೇರೆ ಯಾವ ಕ್ಲಾಸೂ ಇಲ್ಲ, Town planning ಡಿಪಾರ್ಟ್‌ಮೆಂಟ್‌ನ್ನು ಸೇರಿಸಬೇಕು, ಅವರ ಪರ್ಮಿಷನ್ ತೆಗೆದುಕೊಳ್ಳಬೇಕು ಎಂದು ಇದೆ. ಇದು ಮುಖ್ಯವಲ್ಲ. ತಮಗೆ ಬೇಕಾಗಿರುವುದು ಕ್ಲಾಜ್ ಎರಡರಲ್ಲಿ, 99, 100, 101, 104ರ ಅಮೆಂಡ್‌ಮೆಂಟ್ ಆಗಬೇಕಾಗುತ್ತದೆ. ಈಗಾಗಲೇ ಹೇಳಿದಂತೆ ಅನೇಕ ಸಲ ಈ ಮಾನ್ಯ ಸಭೆಯ ಮಾನ್ಯ ಸದಸ್ಯರು ಹೇಳುತ್ತಾ ಬಂದಿದ್ದಾರೆ. ಈಗಿರತಕ್ಕ ಪರಿಸ್ಥಿತಿಯಲ್ಲಿ ಎಲೆಕ್ಷನ್ ಆಗಲಿಕ್ಕೆ ಸಾಧ್ಯವಿಲ್ಲ ಎಂಬುದನ್ನು ತಿಳಿಸಿದ್ದಾರೆ. ಆದ್ದರಿಂದ ಆರ್ಟಿಕಲ್ 213ರ ಪ್ರಕಾರ ಗವರ್ನರ್‌ರವರು ತಮ್ಮ ಅಧಿಕಾರವನ್ನು ಸರಿಯಾಗಿ ಚಲಾಯಿಸಿಲ್ಲ, ಚಲಾಯಿಸುವುದಕ್ಕೆ ಅಂತಹ ಸಕಾರಣಗಳು ಇರಲಿಲ್ಲ. ಆದ್ದರಿಂದ ಇದನ್ನು ಸಂಪೂರ್ಣವಾಗಿ ನಿರಾಕರಿಸಬೇಕು. ಸಾಧಾರಣ ಬಿಲ್ಲನ್ನು ಸಭೆಯ ಮುಂದೆ ತಂದು ಒಪ್ಪಿಗೆ ಪಡೆಯಲಿಕ್ಕೆ ಏನು ಯೋಚನೆ ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ. ಅದಕ್ಕೆ ಬದಲಾಗಿ ಆರ್ಡಿನೆನ್ಸನ್ನು ಹೊರಡಿಸಿದ್ದಾರೆ. ಈಗ ಮುಖ್ಯವಾಗಿ ನಮ್ಮ ಸರ್ಕಾರದವರು ಇಂತಹ ಆರ್ಡಿನೆನ್ಸ್ ಮೇಲೆ ರಾಜಕೀಯ ನಡೆಸುತ್ತಾ ಇದ್ದಾರೆ. 1969ರಲ್ಲಿ ಸಾಧಾರಣ 8 ಆರ್ಡಿನೆನ್ಸ್‌ಗಳನ್ನು ತಂದಿದ್ದಾರೆ ಮತ್ತು ಈ ವರ್ಷ 1970ರಲ್ಲಿ 7 ಆರ್ಡಿನೆನ್ಸ್‌ಗಳು ಇವೆ, ಇನ್ನೂ 6 ತಿಂಗಳ ಸಮಯ ಇದೆ, ಎಷ್ಟು ಆರ್ಡಿನೆನ್ಸ್‌ಗಳನ್ನು ಹೊರಡಿಸುತ್ತಾರೋ ಗೊತ್ತಿಲ್ಲ. ಪ್ರಜಾತಂತ್ರ ರಾಜಕೀಯದಲ್ಲಿ ತಾವು ಆರ್ಡಿನೆನ್ಸ್ ಮೂಲಕ ರಾಜಕೀಯವನ್ನು ಆಳಬೇಕೆಂದು ತಮ್ಮ ಇಚ್ಛೆ ಇದ್ದರೆ ಈ ಮಾನ್ಯ ಸಭೆ ಏಕೆ ಇರಬೇಕು ? ಅಗತ್ಯ ಇಲ್ಲ. ಇಂತಹ ವಿಷಯಗಳನ್ನು ಚರ್ಚಿಸಬೇಕಾದ ಅಗತ್ಯ ಇಲ್ಲ. ಆದ್ದರಿಂದ ಮುಂದೆ ಸರ್ಕಾರದವರು ಆದಷ್ಟು ಇಂತಹ ಆರ್ಡಿನೆನ್ಸ್‌ಗಳನ್ನು ತರದೆ ಬೇಕಾದಂತಹ ತಿದ್ದುಪಡಿಗಳನ್ನು ಆಲೋಚನೆ ಮಾಡಬೇಕು. ತಮಗೆ ಸೆಕ್ರೆಟೇರಿಯಟ್ ಇದೆ, ಸಹಾಯ ಇದೆ, ಸಿಬ್ಬಂದಿ ಇದೆ, ಅವರ ಸಹಕಾರ ತೆಗೆದುಕೊಂಡು ತಿದ್ದುಪಡಿಗಳನ್ನು ಮುಂಚಿತವಾಗಿ ಆಲೋಚನೆ ಮಾಡಿ, ಪಕ್ಷಾತೀತವಾಗಿ ತೀರ್ಮಾನ ಮಾಡಿದ್ದರೆ ಇಂತಹ ಒಂದು ಆರ್ಡಿನೆನ್ಸ್ ಹೊರಡಿಸತಕ್ಕ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಆದ್ದರಿಂದ ದಯವಿಟ್ಟು ಮುಂದೆ ಪಕ್ಷದ ಒಂದು ಬಲೆಗೆ ಬೀಳದೆ ತಾವು ಪಕ್ಷಾತೀತರಾಗಿ ಕಾಯಿದೆಗಳನ್ನು ಮಾಡಲು ಯೋಚನೆ ಮಾಡಬೇಕೆಂಬ ಒಂದು ವಿಷಯವನ್ನು ಹೇಳಲು ಇಚ್ಛಿಸುತ್ತೇನೆ.

(ಶ್ರೀ ಎಂ. ನಾಗಪ್ಪ)

ಇನ್ನು ಈ ತಿದ್ದುಪಡಿ ಮಸೂದೆಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಈಗಲಾದರೂ ಕನಿಷ್ಟ ಒಂದು ಹೇಳಿಕೆಯನ್ನು ಈ ಸಭೆಯೊಳಗೆ ಈ ಸರ್ಕಾರದವರು ಕೊಡಲೇಬೇಕಾಗುತ್ತದೆ. ಈಗ ತಂದಿರತಕ್ಕ ತಿದ್ದುಪಡಿಯನ್ನಾದರೂ ಒಪ್ಪಿ ಎಲೆಕ್ಷನ್ ಮಾಡುತ್ತೇವೆ, ಇಂತಿಷ್ಟು ಅವಧಿಯಲ್ಲಿ ಮಾಡುತ್ತೇವೆ, ಅಲ್ಲಿ ನಿರ್ಮಾಣವಾಗಿರತಕ್ಕ ನಿರಂಕುಶ ಅಧಿಕಾರವನ್ನು ತೆಗೆದು ಹಾಕುತ್ತೇವೆ ಎಂಬ ವಿಶ್ವಾಸವನ್ನು ಈ ಸಭೆಗೆ ಕೊಡಬೇಕಾಗುತ್ತದೆ. ಏಕೆಂದರೆ ಬರೀ ತಿದ್ದುಪಡಿ ಮೋಜಿನಲ್ಲೇ ದಿನಗಳನ್ನು ಕಳೆಯುತ್ತಾ ಹೋದರೆ ಬೆಂಗಳೂರಿನಲ್ಲಿರತಕ್ಕ ನಾಗರೀಕರಿಗೆ ಎಷ್ಟು ತೊಂದರೆಯಾಗಿದೆ ಎಂದರೆ ಬೇರೆ ಜಿಲ್ಲೆಗಳಿಂದ ಬರತಕ್ಕ ನಮಗೆ ಅಷ್ಟು ಗೊತ್ತಾಗಲಿಕ್ಕಿಲ್ಲ. ಮುಂದೆ ಮಾತನಾಡತಕ್ಕ ಮಾನ್ಯ ಸದಸ್ಯರು ಶ್ರೀಮಾನ್ ಕೃಷ್ಣನ್‌ರವರು ಮತ್ತು ಶಾಮಣ್ಣನವರು ಅವರಿಗೆ ಆಗಿರತಕ್ಕ ತೊಂದರೆಗಳನ್ನು ಹೆಚ್ಚು ಸಮಂಜಸವಾಗಿ ಹೇಳುತ್ತಾರೆ. ಇದರಲ್ಲಿ ತಾವು ಕೆಲವು ತಿದ್ದುಪಡಿಗಳನ್ನು ತಂದಿದ್ದೀರಿ, ಕ್ಲಾಸ್ (6)ನ್ನು ನೋಡಬೇಕು. ಇದು ಬಹಳ ಮುಖ್ಯ ತಿದ್ದುಪಡಿ. ಇದರ ಪ್ರಾವಿಜೋ ಬಗ್ಗೆ ನನಗೆ ಬಹಳ ಆಲೋಚನೆ ಆಗಿದೆ. ದಯವಿಟ್ಟು ಈ ಪ್ರಾವಿಜೋವನ್ನು ನೋಡಬೇಕು. ಸಬ್‌ಕ್ಲಾಸ್ 2 ತಿದ್ದುಪಡಿಯಲ್ಲಿ ಹೀಗಿದೆ:

"Provided that the percentage so fixed may be different in different areas and for different classes of buildings and lands."

ಕಮಿಷನರೋ ಅಥವಾ ಬೇರೆ ಯಾರಾದರೂ ಅಸೆಸ್‌ಮೆಂಟ್ ಮಾಡತಕ್ಕ ಅಧಿಕಾರಿಗಳ ಕೈಗೆ, ಮುನಿಸಿಪಲ್ ಇಲಾಖೆ ಕೌನ್ಸಿಲರ ಕೈಗೆ ಅಥವಾ ತಮ್ಮ ನಿರಂಕುಶ ಅಧಿಕಾರ ನಡೆಸತಕ್ಕ ಅಡ್‌ಮಿನಿಸ್ಟ್ರೇಟರ ಕೈಗೆ ಈ ಅಧಿಕಾರ ಕೊಟ್ಟರೆ, ಅವರು ಈ ಕಾಯಿದೆಯನ್ನು ಅನುಸರಿಸಿ ಟ್ಯಾಕ್ಸುಗಳನ್ನು ಬೇಕಾದಂಥ ಪರಿಸ್ಥಿತಿ ಬಂದಾಗ ಬೇರೆ ಬೇರೆ ಓಣಿಗಳಿಗೆ ಅಥವಾ ಸ್ಟ್ರೀಟುಗಳಿಗೆ ಬೇರೆ ಬೇರೆ ಟ್ಯಾಕ್ಸ್‌ಗಳನ್ನು ಹಾಕತಕ್ಕಂಥ ಪರಿಸ್ಥಿತಿ ಬಂದೀತು. ಬೇರೆ ಬೇರೆ ಬಿಲ್ಡಿಂಗುಗಳಿಗೆ ಬೇರೆ ಬೇರೆ ರೀತಿಯ ತೆರಿಗೆಗಳನ್ನು ಹಾಕತಕ್ಕಂಥ ಪರಿಸ್ಥಿತಿ ಇಲ್ಲಿ ಬರುತ್ತದೆ. ಸಬ್‌ಸೆಕ್ಷನ್ 2ಕ್ಕೆ ಪ್ರಾವಿಸೋ ಆಡ್ ಮಾಡುತ್ತಾ ಇದ್ದಾರೆ. ಸಬ್ ಸೆಕ್ಷನ್ ಎರಡು ಈ ರೀತಿ ಇದೆ.

"6 (2) The property tax shall be levied at such percentage not being less than fifteen per cent and not more than 25 per cent of the annual value of buildings and lands as may be fixed by the Corporation."

ಎಂದರೆ ಈ ಪ್ರಾವಿಜೋವನ್ನು ಇಲ್ಲಿ ಸೇರಿಸಿದರೆ ಒಂದು ಮನೆಗೆ 15 ಪರ್ಸೆಂಟ್, ಇನ್ನೊಂದು ಮನೆಗೆ 25 ಪರ್ಸೆಂಟ್, ಮತ್ತೊಂದು ಮನೆಗೆ 20 ಪರ್ಸೆಂಟ್ ಹಾಕತಕ್ಕಂಥ ಒಂದು ಅಧಿಕಾರವನ್ನು ತಾವು ಕೊಟ್ಟಂತಾಗುತ್ತದೆ. 1956 ಮೊದಲು ಇರತಕ್ಕ ಬೆಂಗಳೂರಿಗೂ, 1970ರಲ್ಲಿ ಇರುವ ಬೆಂಗಳೂರಿಗೂ ಸಾಕಷ್ಟು ವ್ಯಾಪಾರ್ಡು ಆಗಿದೆ. 56 ಹಳ್ಳಿಗಳನ್ನು ಬೆಂಗಳೂರು ಕಾರ್ಪೊರೇಷನ್ನಿಗೆ ಸೇರಿಸಿದ್ದೀರಿ. ತಾವು ಈ ಹಳ್ಳಿಗಳಿಗೆ ಹಾಕಿರತಕ್ಕ ಟ್ಯಾಕ್ಸುಗಳಿಗೂ ಮೊದಲು ಬೆಂಗಳೂರಿಗೆ ಹಾಕಿರತಕ್ಕಂಥ ಟ್ಯಾಕ್ಸುಗಳಿಗೂ ಬಹಳ ತಾರತಮ್ಯ ಇರಬಹುದು, ಅದನ್ನು ನಾನು ಒಪ್ಪುತ್ತೇನೆ. ಇದನ್ನು ಕ್ಲಾರಿಫೈ ಮಾಡಿ ಬೆಂಗಳೂರಿಗೆ ಸೇರಿಸಿರತಕ್ಕಂಥ ಹಳ್ಳಿಗಳಿಗೆ ಮಾತ್ರ ಇದು ಅಪ್ಲೈ ಆಗತಕ್ಕದ್ದು ಎಂದು ಹೇಳಿದರೆ ಸರಿ ಹೋಗುತ್ತದೆ. ಇಲ್ಲದಿದ್ದರೆ ಇದರ ದುರುಪಯೋಗ ಎಷ್ಟರ ಮಟ್ಟಿಗೆ ಆಗುತ್ತಿದೆ ಎಂದು ತಾವು ಆಲೋಚಿಸಬೇಕು. ಇದನ್ನು ಸರ್ಕಾರದವರು ಆಲೋಚಿಸದೆ ಇದ್ದರೆ, ನಾಳೆ, ಕೌನ್ಸಿಲ್ ಎಲೆಕ್ಷನ್ ಆಗಿ ಹೊಸ ಕಾರ್ಪೊರೇಷನ್ ಬಂದ ಮೇಲೆ, ತಾವು ಮಾಡಿದಂಥ ಕಾಯಿದೆ ಪ್ರಕಾರ, ನಿರ್ಣಯವನ್ನು ಮಾಡಿ ತಮಗೆ ಬೇಕಾದಂಥ ಜನಗಳಿಗೆ ಬೇಕಾದಂಥ ಟ್ಯಾಕ್ಸ್ ಹಾಕಿದ್ದಾರೆ, ಅಧಿಕಾರ ದುರುಪಯೋಗ ಮಾಡಿದ್ದಾರೆ; ಅವರಿಗೆ ಒಂದು ಟ್ಯಾಕ್ಸ್, ಇವರಿಗೆ ಒಂದು ಟ್ಯಾಕ್ಸ್ ಹಾಕಿದ್ದಾರೆ ಎಂದು ತಾವೇ ಹೇಳುತ್ತೀರಿ. ಚುನಾಯಿತರಾದ ಕೌನ್ಸಿಲರುಗಳು ಸರಿಯಾದ ರೀತಿಯಲ್ಲಿ ಕಾರ್ಯ ಮಾಡಕೂಡದು ಎಂದು ಈ ಕ್ಲಾಜನ್ನು ಇದರಲ್ಲಿ ಹಾಕಿದ್ದಾರೋ ಅಥವಾ ಒಂದು ಸದುದ್ದೇಶದಿಂದ ಹಾಕಿದ್ದಾರೋ ಎನ್ನುವುದು ಅನುಮಾನಾಸ್ಪದವಾದ ವಿಷಯ ಆದುದರಿಂದ ತಾವು ದಯವಿಟ್ಟು ಇದನ್ನು ಪುನರಾಲೋಚಿಸಿ ಯಾವ ರೀತಿ ತಿದ್ದುಪಡಿ ಮಾಡಬೇಕೋ ಅದನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಿ ಈ ಸಭೆಗೆ ಉತ್ತರ ಕೊಡತಕ್ಕ ಸಮಯದಲ್ಲಿ ತಿಳಿಸಬೇಕೆಂದು ನಾನು ಅವರನ್ನು ಬೇಡಿಕೊಳ್ಳುತ್ತೇನೆ.

ಸ್ವಾಮಿ, ಇನ್ನು 23ನೇ ಕ್ಲಾಜನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಅದು ಈ ರೀತಿ ಇದೆ

23. Provisions relating to collection of property tax on lands: Notwithstanding anything contained in the Principal Act or any other law in respect of the year commencing on the first day of April 1970:

(i) in the areas other than those in which a lower rate of property tax has been levied by the Corporation under sub-clause (ii) of clause (a) of Section 434-D, the property tax shall be levied and collected at the rate of fifteen per cent of the annual value of every land.''

ಅಂದರೆ ತಾವು ಇಲ್ಲಿ 15 ಪರ್ಸೆಂಟ್ ಎಂದು ಮಾಡಿದ್ದೀರಿ. ಇಲ್ಲಿ ಯಾವ ಪರಿಮಿತಿಯನ್ನೂ ಇಟ್ಟಿಲ್ಲ. ಮ್ಯಾಕ್ಸಿಮಂ ಮತ್ತು ಮಿನಿಮಂ ಅಂತ ಏನು ಹೇಳುತ್ತೇವೆ, ಹೆಚ್ಚು ಟ್ಯಾಕ್ಸ್ ಎಷ್ಟು ಹಾಕಬೇಕು, ಕಡಿಮೆ ಎಷ್ಟು ಹಾಕಬೇಕು ಎಂದು ನಿರ್ದಿಷ್ಟವಾಗಿ ಹೇಳದೆ ಎಲ್ಲಾ ಲ್ಯಾಂಡ್ಸ್‌ಗೂ 15 ಪರ್ಸೆಂಟ್ ಹಾಕಲೇಬೇಕು ಎನ್ನತಕ್ಕಂಥ ಮಿತಿಯನ್ನು ಹಾಕಿದ್ದೀರಿ. ಅಲ್ಲಿ ಡಿಸ್ಕ್ರಿಪ್ಷನ್ ಯಾರಿಗೂ ಇಲ್ಲ. ಇನ್ನು ಎರಡನೆಯದಾಗಿ, ಅದೇ ಲ್ಯಾಂಡ್ಸಿಗೆ 9 ಪರ್ಸೆಂಟ್ ಹಾಕಬೇಕು ಎಂದು ಮತ್ತೊಮ್ಮೆ ಹೇಳಿದ್ದೀರಿ. ಹೀಗೆ ಒಂದೇ ತರಗತಿಯ ಜಮೀನುಗಳಿಗೆ ಎರಡು ತರಹ ಟ್ಯಾಕ್ಸನ್ನು ತಾವು ಇಲ್ಲಿ ನಮೂದಿಸಿದ್ದೀರಿ. ದಯವಿಟ್ಟು ಇದನ್ನು ಪುನರಾಲೋಚಿಸಬೇಕು ಅಂತ ಹೇಳಿ ತಮಗೆ ನಾನು ಮತ್ತೊಮ್ಮೆ ಕೇಳುತ್ತೇನೆ.

ಅದಾದ ನಂತರ ಈ ಕ್ಲಾಜಿನಲ್ಲಿ ತಾವು ಒಂದು ವಿಷಯವನ್ನು ತಿದ್ದುಪಡಿ ಮೂಲಕ ತರಬೇಕು ಎಂದು ಯೋಚನೆ ಮಾಡಿದ್ದೀರಿ. ಯಾವುದೇ ಒಂದು ಮನೆ ಕಟ್ಟಡಕ್ಕೆ ಪರ್ಮಿಷನ್ ತೆಗೆದುಕೊಳ್ಳಬೇಕಾದರೆ, ಅಥವಾ ಏನಾದರೂ ಒಂದು ಅಪ್ಪಣೆಯನ್ನು ಕಾರ್ಪೊರೇಷನ್ನಿನಿಂದ ತೆಗೆದುಕೊಳ್ಳಬೇಕಾದರೆ ಟೌನ್ ಪ್ಲಾನಿಂಗ್‌ನವರ ಅಪ್ರೂವಲ್ ಅಥವಾ ಅವರಿಂದ ಸರ್ಟಿಫಿಕೇಟ್ ಅದಕ್ಕೆ ಲಗತ್ತಿಸಿರಬೇಕು ಮತ್ತು ತಾವು ಮಾಡತಕ್ಕ ಮುಂದಿನ ಪ್ಲಾನಿಗೂ ಸಹಿತ ಹೊಂದಾಣಿಕೆ ಇರಬೇಕು ಎಂದು ಕೆಲವು ತಿದ್ದುಪಡಿಗಳನ್ನು ಇದರಲ್ಲಿ ತಾವು ತಂದಿದ್ದೀರಿ. ಆದರೆ ನಾನು ತಮಗೆ ಕೇಳುತ್ತೇನೆ ಈ ಎರಡೂ ಡಿಪಾರ್ಟ್‌ಮೆಂಟ್ ಬೇರೆಬೇರೆ. ಕಾರ್ಪೊರೇಷನ್ ಬೇರೆ, ಟೌನ್ ಪ್ಲಾನಿಂಗ್ ಆಫೀಸು ಬೇರೆ. ಈ ಡೈರೆಕ್ಟರವರು ಅವರಿಗೆ ಸಬಾರ್ಡಿನೇಟಾಗಿ ಕೆಲಸ ಮಾಡುವುದಿಲ್ಲ. ಕಾರ್ಪೊರೇಷನ್ ಎಲೆಕ್ಟೆಡ್ ಬಾಡಿ ಅವರು ಮಾಡತಕ್ಕಂಥ ಕಾರ್ಯಪದ್ಧತಿ ಬೇರೆ ಮತ್ತು ಸರಕಾರದಿಂದ ನೇಮಕವಾದಂಥ ಈ ಕೆಲಸಗಾರರು ಮಾಡತಕ್ಕಂಥ ಪದ್ಧತಿ ಬೇರೆ, ಅದನ್ನು ಇಲ್ಲಿ ಸೇರಿಸಿರುವುದರಿಂದ ಟೌನ್‌ಪ್ಲಾನಿಂಗ್' ಸರ್ಟಿಫಿಕೇಟ್ ಇಲ್ಲದೆ ಯಾವ ಕಾರ್ಯಕ್ರಮವನ್ನು ಮುನಿಸಿಪಲ್ ಕೌನ್ಸಿಲ್ ನಡೆಸುವುದಕ್ಕೆ ಸಾಧ್ಯವಿಲ್ಲ. ಈ ತಿದ್ದುಪಡಿಯನ್ನು ತಂದರೆ, ಮುಂದೆ ಎರಡೂ ಡಿಪಾರ್ಟ್‌ಮೆಂಟುಗಳ ನಡುವೆ ತಿಕ್ಕಾಟ ಹುಟ್ಟಿ ಕಾರ್ಯ ಆಗುವುದಿಲ್ಲ, ಕಾರ್ಯಸಾಧನೆ ಕಡಿಮೆಯಾಗುತ್ತದೆ ಎನ್ನುವ ಮಾತು ಸ್ಪಷ್ಟವಾಗುತ್ತದೆ. ಅದಕ್ಕಾಗಿ ಅಂತಹ ಒಂದು ಟೌನ್ ಪ್ಲಾನಿಂಗ್ ಆಫೀಸರನ್ನು ತಾವು ಮುನಿಸಿಪಲ್ ಕಾರ್ಪೊರೇಷನ್ನಿನ ಅಧೀನವಾಗಿ ನೇಮಕಮಾಡಬೇಕು. ಇಂತಹ ಒಂದು ಟೌನ್‌ಪ್ಲಾನಿಂಗ್ ಆಫೀಸರು ಬೇಕು ಎಂದು ನಿಯಮ ಮಾಡಿ ಅವರಿಗೆ ಟೌನ್ ಪ್ಲಾನಿಂಗ್‌ನಲ್ಲಿ ಆದಂತಹ ನಿಯಮಗಳನ್ನು ಅವರು ತರಿಸಿಕೊಂಡು ಅದರ ಪ್ರಕಾರ ಅವರು ನಡೆಯಬೇಕು ಎನ್ನುವ ನಿಯಮವನ್ನು ಮಾಡಿದರೆ, ಸುಗಮವಾಗಿ ಮತ್ತು ಒಳ್ಳೆಯ ರೀತಿಯಲ್ಲಿ ಕೆಲಸ ಕಾರ್ಯಗಳು ಸಾಧಿಸಲಿಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಈ ಒಂದು ತಿದ್ದುಪಡಿಯಿಂದ ಎರಡೂ ಡಿಪಾರ್ಟ್‌ಮೆಂಟಿನವರಿಗೂ ತಿಕ್ಕಾಟ ಹುಟ್ಟಿ ಕೆಲಸಕಾರ್ಯಗಳಲ್ಲಿ ಹೆಚ್ಚು ತೊಂದರೆಯಾಗುತ್ತದೆ ಎನ್ನುವ ಅಭಿಪ್ರಾಯ ಬರುತ್ತದೆ. ಈ ಮಸೂದೆಯಲ್ಲಿ ಇರತಕ್ಕಂಥ ಕೆಲವು ದೋಷಗಳನ್ನು ತಮ್ಮ ಮುಂದೆ ತಂದಿದ್ದೇನೆ. ದಯವಿಟ್ಟು ಇದನ್ನು ಅಲೋಚಿಸಬೇಕೆಂದು ಹೇಳಿ ಮತ್ತೊಮ್ಮೆ ಎಲ್ಲಾ ಸದಸ್ಯರೂ ಈ ಆರ್ಡಿನೆನ್ಸ್‌ಗೆ ವಿರೋಧವಾಗಿ ಓಟು ಮಾಡಿ ಈ ಆರ್ಡಿನೆನ್ಸ್‌ನ್ನು ಕೆಡಹಬೇಕು. ಇಂತಹ ಆರ್ಡಿನೆನ್ಸ್‌ನ್ನು ಸರಕಾರ ಇನ್ನು ಮುಂದೆ ತರಕೂಡದು ಎನ್ನುವ ಮಟ್ಟಕ್ಕೆ ಹೋಗಬೇಕು ಎಂದು ನಾನು ತಮ್ಮನ್ನು ಕೋರಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷರೇ, ಇಂದು ಈ ಮಾನ್ಯ ಸಭೆಯ ಮುಂದೆ ಇಟ್ಟಿರತಕ್ಕ 1970ನೇ ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಮಸೂದೆಯನ್ನು ಪರಿಶೀಲಿಸಿ ನೋಡುವುದಾದರೆ, ಅದು ಬೆಂಗಳೂರು ನಾಗರೀಕರಿಗೆ ಬಹಳ ತೊಂದರೆಯನ್ನುಂಟು ಮಾಡತಕ್ಕ ಹಾಗೂ ಈ ಪ್ರಜಾಪ್ರಭುತ್ವದ ತತ್ವಕ್ಕೆ ಧಕ್ಕೆಯನ್ನು ತರತಕ್ಕ ನಿಯಮಾವಳಿಯುಳ್ಳ

(ಶ್ರೀ ಟಿ. ಆರ್. ಶಾಮಣ್ಣ)

ನಿಬಂಧನೆಗಳಾಗಿವೆಯೆಂದು ಹೇಳಿದರೆ ತಪ್ಪಾಗಲಾರದು. ಇದಕ್ಕೆ ಹಿನ್ನೆಲೆಯಾಗಿ ಕೆಲವು ವಿಷಯಗಳನ್ನು ಹೇಳಿದಮೇಲೆ ಇವರ ಅರ್ಥ ತಮಗೆ ಪೂರ್ಣವಾಗಿ ಅರಿವಾಗುತ್ತದೆ. ಈಗ ಬೆಂಗಳೂರು ನಗರ ಮೈಸೂರು ದೇಶದ ರಾಜಧಾನಿ ಹಾಗೂ ಇಡೀ ರಾಜ್ಯದಲ್ಲಿ ಅತಿ ದೊಡ್ಡದಾದ ಪಟ್ಟಣವಾಗಿದೆ. 15 ಲಕ್ಷ ಪ್ರಜೆಗಳುಳ್ಳ ಈ ಪ್ರದೇಶದಲ್ಲಿ ಅದರಲ್ಲಿಯೂ ಒಂದು ಅಗ್ರಸ್ಥಾನವನ್ನು ಪಡೆದಿರತಕ್ಕ ಇಂತಹ ಒಂದು ಪಟ್ಟಣದ ಜನಗಳ ಹಿತದೃಷ್ಟಿಗೆ ಸಂಬಂಧಪಟ್ಟ ವಿಚಾರವಾಗಿ ಹೇಳುವುದಾದರೆ, ಈ ಬೆಂಗಳೂರು ನಗರ ಕಾರ್ಪೊರೇಷನ್ ಈಗಾಗಲೇ ಕಳೆದ ಮೂರೂವರೆ ವರ್ಷಗಳಿಂದ ಮೂರು ಬಾರಿ ಸೂಪರ್‌ಸೀಡ್ ಮಾಡಲ್ಪಟ್ಟಿದೆ. ಮೊದಲನೆಯ ಬಾರಿ ಅದು 23-12-66ರಲ್ಲಿ ರದ್ದು ಮಾಡಲ್ಪಟ್ಟಿತು. ಹೈಕೋರ್ಟಿನಲ್ಲಿ ಕೆಲವರು ಈ ರದ್ದಿನ ಕ್ರಮ ಸರಿಯಾಗಿಲ್ಲವೆಂದು ಹೇಳಿದಾಗ ಮತ್ತೊಮ್ಮೆ ಕಾರ್ಪೊರೇಷನ್ ಅಧಿಕಾರ ಇರುವುದಕ್ಕೆ ಅವಕಾಶಕೊಡದೆ ಈ ರದ್ದಿನ ಅವಧಿಯನ್ನು ಇನ್ನೂ ಆರು ತಿಂಗಳುಗಳ ಕಾಲ ಹೆಚ್ಚಿಸಿ ಮತ್ತೊಮ್ಮೆ ಕಾರ್ಪೊರೇಷನ್ ಆಡಳಿತವನ್ನು ರದ್ದುಮಾಡಿದರು. ಆದರೆ ಮುಖ್ಯ ಮಂತ್ರಿಯಾಗಿ ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರು ಅಧಿಕಾರವನ್ನು ಸ್ವೀಕರಿಸಿದಾಗ ಬೆಂಗಳೂರು ನಗರ ಕಾರ್ಪೊರೇಷನ್ ಚುನಾವಣೆ ಸದ್ಯದಲ್ಲಿಯೇ ನಡೆಯುತ್ತದೆ ಎನ್ನುವ ಒಂದು ಭರವಸೆಯನ್ನು ಕಳೆದ ಸುಮಾರು 18 ತಿಂಗಳುಗಳ ಹಿಂದೆಯೇ ಕೊಟ್ಟರು. ಇನ್ನು ಈ ಸಭೆಯಲ್ಲಿ ಪೌರಾಡಳಿತ ಮಂತ್ರಿಗಳು ಕಾರ್ಪೊರೇಷನ್ ಚುನಾವಣೆಯನ್ನು ಆದಷ್ಟು ಜಾಗ್ರತೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ, ಆದಷ್ಟು ಬೇಗ ಚುನಾವಣೆಯಾಗುತ್ತದೆನ್ನುವ ಅಂಶವನ್ನು ಪದೇಪದೇ ನಮ್ಮ ಮುಂದೆ ಹೇಳುತ್ತಾ ಬಂದರು. ಹೀಗೆ ಜನರಿಗೆ ದೂರದಲ್ಲಿರುವ ಬಿಸಿಲ್ಗುದುರೆಯ ಆಶೆಯನ್ನು ತೋರಿಸುತ್ತಾ ಬಂದರು. ಚುನಾವಣೆ ಶೀಘ್ರವಾಗಿ ನಡೆಯುತ್ತದೆಂದು ಹೇಳುತ್ತಿದ್ದರೇ ಹೊರತು ಚುನಾವಣೆ ಯಾವತ್ತು ನಡೆಯುತ್ತದೆಂದು ಕಡ್ಡಾಯವಾಗಿ ಇಂಥ ದಿನವೆಂದು ಹೇಳಲಿಲ್ಲ. ಕಳೆದ ಒಂದೂವರೆ ವರ್ಷಗಳಿಂದಲೂ ಇದರ ಬಗ್ಗೆ ತೀರ್ಮಾನವನ್ನು ಜಾಗ್ರತೆಯಾಗಿ ತೆಗೆದುಕೊಳ್ಳದೇ ಇರುವುದು ಬಹಳ ಶೋಚನೀಯವಾದ ವಿಚಾರ. ಒಂದು ವರ್ಷದ ಕೆಳಗೆ ತಾವೇನಾದರೂ ಕಾರ್ಪೊರೇಷನ್ ಚುನಾವಣೆಯನ್ನು ಡಿಸೆಂಬರ್ ತಿಂಗಳಲ್ಲಿ ನಡೆಸಿದರೆ ನಾನು ಅಸೆಂಬ್ಲಿ ಸದಸ್ಯರಿಗೆ ಸಿಹಿ ಹಂಚುತ್ತೇನೆಂದು ಹೇಳಿದಾಗ, ಸದಸ್ಯರು ಅದು ಸಾಲುವುದಿಲ್ಲ, ಉತ್ತಮವಾದ ಉಪಾಹಾರವೇ ಆಗಬೇಕೆಂದು ಹೇಳಿದಾಗ, ನಾನು ಅದಕ್ಕೂ ಒಪ್ಪಿಕೊಂಡೆ. ಆದರೆ ಈಗ ಡಿಸೆಂಬರ್ ತಿಂಗಳು ಬರುತ್ತಿದ್ದರೂ ಇನ್ನೂ ಚುನಾವಣೆಯಾಗತಕ್ಕ ಒಂದು ಚಿಹ್ನೆಯೇ ಕಾಣುತ್ತಾ ಇಲ್ಲ. ಪ್ರತಿ ಸಂದರ್ಭದಲ್ಲಿಯೂ ಕೂಡ ಚುನಾವಣೆಯನ್ನು ಮಾಡುತ್ತೇವೆ ಎಂಬುದಾಗಿ ಒಂದೊಂದು ಹೊಸ ಹೊಸ ಬಿಲ್ಲನ್ನು ಈ ಸಭೆಯಲ್ಲಿ ತಂದು, ಬೆಂಗಳೂರು ನಾಗರೀಕರನ್ನು ತುಳಿಯುವುದಕ್ಕೆ ಎಷ್ಟೆಷ್ಟು ಬೇಕೋ ಅಷ್ಟಷ್ಟು ಅವಕಾಶವನ್ನುಂಟುಮಾಡುವ ರೀತಿಯಲ್ಲಿ ಕೆಲವಾರು ಕಾಯಿದೆಗಳನ್ನು ಸೇರಿಸಿ ನಮ್ಮ ಮುಂದಿಟ್ಟು ಚುನಾವಣೆಯ ನೆಪದಲ್ಲಿ ತಮ್ಮ ಅಧಿಕಾರವನ್ನು ಬೆಳೆಸುತ್ತಾ ಇರತಕ್ಕದ್ದನ್ನು ಈ ಸಭೆಯಲ್ಲಿ ನಾವು ನೋಡುತ್ತಿದ್ದೇವೆ. ಕಳೆದ 4 ವರ್ಷಗಳಿಂದ ಯಾವ ಇಲಾಖೆಯ ಬಿಲ್ ಬಾರದೇ ಇದ್ದರೂ ಕಾರ್ಪೊರೇಷನ್ ಅಮೆಂಡ್‌ಮೆಂಟ್ ಬಿಲ್ ಏನೋ ಬರುತ್ತಲೇ ಇದೆ. ಕಾರ್ಪೊರೇಷನ್ ಸರ್ವಾಧಿಕಾರಿಯಾಗಿರುವ ಅಡ್ಮಿನಿಸ್ಟ್ರೇಟರ್ ಒಂದು ಸೂಚನೆ ಕೊಡುವುದು, ಇವರು ಆ ಪ್ರಕಾರ ಒಂದು ತಿದ್ದುಪಡಿಯನ್ನು ಇಲ್ಲಿ ತರುವುದು ಹೀಗಾಗಿದೆ. ಸರ್ಕಾರ ತಮ್ಮ ಅಧಿಕಾರ ಹೆಚ್ಚಿಸುವ ದೃಷ್ಟಿಯಿಂದ ತಮಗೆ ಬೇಕಾದಂಥ ರೀತಿಯಲ್ಲಿ ಒಂದೊಂದು ಕಾಯಿದೆಯನ್ನು ಈ ಸಭೆಯಲ್ಲಿಟ್ಟು ನಮ್ಮ ನಾಗರೀಕರ ಹಕ್ಕುಬಾಧ್ಯತೆಗಳಿಗೆ ಚ್ಯುತಿಯನ್ನು ತರುತ್ತಾ ಇರುವುದು ಬಹಳ ಶೋಚನೀಯವಾದ ವಿಚಾರವಾಗಿದೆ. ಮೊದಲನೆಯ ಸಾರಿ ಅಮೆಂಡ್‌ಮೆಂಟ್ ಬಿಲ್ ತಂದಾಗ ಕಾರ್ಪೊರೇಷನ್ ಮೂರು ವರ್ಷಗಳ ಕಾಲ ರದ್ದುಮಾಡಿದೆ, ಆ ರದ್ದಿನ ಕಾಲಾವಧಿಯನ್ನು ಕಡಿಮೆ ಮಾಡುವುದಕ್ಕೆ ಒಂದು ಬಿಲ್ಲನ್ನು ತಂದಿದ್ದೇವೆಂದು ಹೇಳಿದರು. ಆಮೇಲೆ ಓಟರುಗಳ ಪಟ್ಟಿಯನ್ನು ತಯಾರುಮಾಡಬೇಕೆಂದು ಬೇರೆ ಒಂದು ಬಿಲ್ಲನ್ನು ತಂದರು. ಆಗ ನೀವು ತಂದಿರುವ ಬಿಲ್ ಕ್ರಮವಾಗಿಲ್ಲ, ಖಂಡಿತವಾಗಿ ಚುನಾವಣೆಯಾಗುವುದಕ್ಕೆ ಸಾಧ್ಯವಿಲ್ಲವೆಂಬುದಾಗಿ ಮಾನ್ಯ ಶ್ರೀ ಎಂ. ನಾಗಪ್ಪನವರೂ, ನಾನೂ ಮತ್ತು ಮಾನ್ಯ ಶ್ರೀ ಕೃಷ್ಣನ್ ಅವರೂ ಒತ್ತಿ ಒತ್ತಿ ಹೇಳಿದೆವು. ಆಮೇಲೆ ಬೆಂಗಳೂರು ನಗರದಲ್ಲಿ ಒಂದು ಹೊಸ ಓಟರುಗಳ ಪಟ್ಟಿಯನ್ನು ಮಾಡುವುದಕ್ಕೆ ಎರಡು ತಿಂಗಳುಗಳ ಕಾಲ ಕಾರ್ಪೊರೇಷನ್‌ನಲ್ಲಿರುವ ಪ್ರತಿಯೊಬ್ಬ ಅಧಿಕಾರಿಯನ್ನು ಬಿಟ್ಟು ಸುಮಾರು 70 ಸಾವಿರ ರೂಪಾಯಿಗಳನ್ನು ಅದಕ್ಕಾಗಿ ಖರ್ಚುಮಾಡಿ ಪ್ರಿಂಟ್ ಮಾಡಿದರು. ಇದಕ್ಕಾಗಿ ಕಾರ್ಪೊರೇಷನ್ ಸಿಬ್ಬಂದಿ ಕಾಲವೆಲ್ಲಾ ವ್ಯಯವಾಗಿ ವ್ಯರ್ಥವಾಯಿತು. ಈಗ ಓಟರುಗಳ ಪಟ್ಟಿ ಪ್ರಿಂಟ್ ಆಗಿರುವುದಕ್ಕೂ ಹಿಂದೆ ಕಾರ್ಪೊರೇಷನ್ನಿನವರೇ ಓಟರುಗಳ ಪಟ್ಟಿಯನ್ನು ಪ್ರಿಂಟ್ ಮಾಡಿರುವುದಕ್ಕೂ ಬಹಳ ವ್ಯತ್ಯಾಸವಿದೆ, ಓಟರುಗಳ ಪಟ್ಟಿ

ಸರಿಯಾಗಿಲ್ಲವೆಂಬ ಅಂಶವನ್ನು ಸರ್ಕಾರದ ಗಮನಕ್ಕೆ ತಂದಾಗ, ಕಾರ್ಪೊರೇಷನ್ನಿನವರು ಸರಿಯಾಗಿ (ರೂಲ್ಸನ್ನು) ತಯಾರುಮಾಡಿ ಕಳುಹಿಸಲಿಲ್ಲವೆಂದು ಸರ್ಕಾರದವರು ಹೇಳಿದರು. ಕಾರ್ಪೊರೇಷನ್ನಿನವರನ್ನು ಕೇಳಿದರೆ, ಸರ್ಕಾರದಿಂದ ಇನ್ನೂ ಪಾಸಾಗಿ ಬಿಲ್ ಬರಲಿಲ್ಲವೆಂದು ಅವರು ಹೇಳಿದರು. ಈಗ ಸರ್ಕಾರದವರು ಕಾರ್ಪೊರೇಷನ್ನಿನ ಆಡಳಿತವನ್ನು ವಹಿಸಿಕೊಂಡಿರುವುದರಿಂದ ಓಟರುಗಳ ಪಟ್ಟಿಗೆ ಆಗಿರತಕ್ಕ ಪ್ರಿಂಟಿಂಗ್ ಖರ್ಚು 70 ಸಾವಿರ ರೂಪಾಯಿಗಳು ಮತ್ತು ಸಿಬ್ಬಂದಿ ವೆಚ್ಚ ಸುಮಾರು 60–70 ಸಾವಿರ ರೂಪಾಯಿಗಳು—ಈ ಖರ್ಚಿಗೆ ಯಾರು ಸಂಬಂಧಪಟ್ಟಿದ್ದಾರೋ ಅವರ ತಲೆಯ ಮೇಲೆ ಅದನ್ನು ಹೊರಿಸಬೇಕು. ನಾಗರೀಕರ ಮೇಲೆ ಅದನ್ನು ಹಾಕಬಾರದು. ಓಟರುಗಳ ಪಟ್ಟಿಯನ್ನು ಪ್ರಿಂಟ್ ಮಾಡಿ ಸಾಟ್ಟು ಹಾಕುವ ಸಂದರ್ಭ ಬಂದಾಗ್ಗೆ ಅಕ್ರಮ ಮಾಡಿರತಕ್ಕ ಒಗ್ಗೆ ಒಂದು ತಿದ್ದುಪಡಿ ಮಸೂದೆಯನ್ನು ಇಲ್ಲಿ ತೆಗೆದುಕೊಂಡು ಬಂದಿದ್ದೀರಿ. ಹಿಂದೆ ಸೂಪರ್‌ಷಷನ್ ಪೀರಿಯಡ್ ಮೊದಲು 1969ರವರೆಗೆ ಇತ್ತು. ಅದನ್ನು ಮೇ 70ರವರೆಗೆ ಏರಿಸಿದಿರಿ. ಆಮೇಲೆ ಪುನಃ ಒಂದು ಆರ್ಡಿನೆನ್ಸ್‌ಮಾಡಿ ಡಿಸೆಂಬರ್‌ವರೆಗೂ ಚುನಾವಣೆಯನ್ನು ಮುಂದಕ್ಕೆ ಹಾಕುತ್ತೇವೆಂದು ಹೇಳಿದ್ದೀರಿ. ಏನೋ ದುರದ್ದೇಶವನ್ನಿಟ್ಟುಕೊಂಡು ಚುನಾವಣೆಯನ್ನು ಮುಂದಕ್ಕೆ ಹಾಕುತ್ತಿದ್ದೀರಿ. ನಾಗರೀಕರ ಹಿತದೃಷ್ಟಿಯಿಂದ ಚುನಾವಣೆಯನ್ನು ಮುಂದಕ್ಕೆ ಹಾಕಲಿಲ್ಲವೆಂದು ಹೇಳಿದರೆ ಖಂಡಿತವಾಗಿ ಸತ್ಯಾಂಶವಿದೆ. ಆದರೆ ಚುನಾವಣೆ ಈಗ ಆಗಬೇಕೆಂದು ಹೇಳಿ ಹಿಂದಿನ ಓಟರುಗಳ ಪಟ್ಟಿಯಂತೆ ಈಗಲೂ ತಯಾರುಮಾಡಿ ದುಡ್ಡು ಖರ್ಚುಮಾಡಿ ಅಕ್ರಮವಾಗಿ ಮಾಡಿದಂಥ ಓಟರುಗಳ ಪಟ್ಟಿಯನ್ನು ಪುನಃ ಕ್ರಮಬದ್ಧಪಡಿಸುತ್ತೇವೆಂದು ತಿದ್ದುಪಡಿಯನ್ನು ತೆಗೆದುಕೊಂಡು ಬಂದು ಪುನಃ ಮತ್ತೊಂದು ತಿದ್ದುಪಡಿಗೆ ರಾಜ್ಯಪಾಲರಿಂದ ಸುಗ್ರೀವಾಜ್ಞೆಯನ್ನು ಹೊರಡಿಸಿ, ರಾಜ್ಯಪಾಲರಿಂದ ಅಪ್ರೂವ್ ಆಗಿರತಕ್ಕ ಸುಗ್ರೀವಾಜ್ಞೆ ಬೇಡವೆಂದು ಹೇಳಿ ಈಗ ಒಂದು ಬಿಲ್ಲನ್ನು ತಂದಿದ್ದೀರಿ. ಈ ರೀತಿ ಆರ್ಡಿನೆನ್ಸನ್ನು ರದ್ದುಮಾಡುವಂಥಾದ್ದು, ಅದರಿಂದ ಬರತಕ್ಕ ಯಾವ್ಯಾವ ಆರ್ಡರುಗಳಿವೆಯೋ ಅವಕ್ಕೆ ಬೆಲೆಯಿಲ್ಲವೆಂದು ಹೇಳಿ ಈರೀತಿ ಅನ್ಯಾಯದ ಮಾರ್ಗದಿಂದ ನಾಗರೀಕರನ್ನು ಮೋಸಗೊಳಿಸುವಂಥಾದ್ದು ಖಂಡಿತವಾಗಿ ಸರಿಯಿಲ್ಲ. ಈ ರೀತಿಯಾಗಿ ಸರ್ಕಾರದ ಆಡಳಿತವನ್ನು ನಡೆಸತಕ್ಕದ್ದೂ ಸಹ ಸರಿಯಿಲ್ಲ. 28 ಮಂತ್ರಿಗಳು ಇರತಕ್ಕ ಈ ಮಹಾ ಸರ್ಕಾರಕ್ಕೆ ಖಂಡಿತವಾಗಿಯೂ ಇದು ಗೌರವ ತರತಕ್ಕ ವಿಚಾರವಲ್ಲ. ಕೊನೆಯದಾಗಿ ಒಂದು ವಿಚಾರವನ್ನು ಹೇಳಬೇಕಾಗಿದೆ. ಬೆಂಗಳೂರು ನಗರ ಕರ್ಪೊರೇಷನ್ನಿಗೆ ಸಂಬಂಧಪಟ್ಟ ಹಾಗೆ ಸುಮಾರು ಆರೇಳು ವರ್ಷಗಳಿಂದ ಈ ಸಭೆಯಲ್ಲಿ ತರುತ್ತಾ ಇರತಕ್ಕ ಬಿಲ್‌ಗಳನ್ನು ಗಮನಿಸಿದ್ದೇ ಆದರೆ, 15 ಲಕ್ಷ ಪ್ರಜೆಗಳು ಇರತಕ್ಕ ಹಾಗೂ ಆರು ಕೋಟಿ ವರಮಾನವಿರತಕ್ಕ ಈ ಬೆಂಗಳೂರು ಕಾರ್ಪೊರೇಷನ್ನನ್ನು ಒಂದು ಗ್ರಾಮಪಂಚಾಯತಿಗಿಂತ ಕಡಿಮೆ ದರ್ಜೆಗೆ ಇಳಿಸಿರುವುದು ಬಹಳ ಹೇಯವಾದ ವಿಚಾರವಾಗಿದೆ. ಇಲ್ಲಿ ಒಂದೊಂದು ಬಿಲ್ಲನ್ನು ತಂದು ಕರ್ಪೊರೇಟರಿಗೂ ಹಾಗೂ ಕಾರ್ಪೊರೇಷನ್ನಿಗೂ ಇರತಕ್ಕ ಅಧಿಕಾರವನ್ನು ಕಿತ್ತುಕೊಳ್ಳುತ್ತಿದ್ದೀರಿ. ಬೆಂಗಳೂರು ನಗರದಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಎಂಬುದಾಗಿ ರಚನೆ ಮಾಡಿದ್ದಾರೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ನಿಜವಾಗಿ ಈ ಬೆಂಗಳೂರು ಸಿಟಿಯನ್ನು ಇಂಪ್ರೂವ್ ಮಾಡುತ್ತಾ ಇಲ್ಲ. ಅದರಲ್ಲಿ ಟ್ರಸ್ಟ್ ಇಲ್ಲವೆಂದು ನಾನು ಹೇಳಬಹುದು.

3–30 P. M.

ನೈದರ್ ಟ್ರಸ್ಟ್ ನಾರ್ ಇಂಪ್ರೂವ್‌ಮೆಂಟ್ ಈಸ್ ಡನ್ ಬೈದಿ ಟ್ರಸ್ಟ್ ಬೋರ್ಡು. ಇವುಗಳನ್ನು ನಾನು ಅಂಕಿ ಅಂಶಗಳ ಮೂಲಕ ಸ್ಥಿರಪಡಿಸುವುದಕ್ಕೆ ಸಿದ್ಧನಾಗಿದ್ದೇನೆ. ಆಮೇಲೆ ಮುನಿಸಿಪಾಲಿಟಿಯಲ್ಲಿ ಇರಬೇಕಾದುದು ಮುಖ್ಯವಾದುದು ನೀರಿನ ಸೌಕರ್ಯ, ಬೆಳಕಿನ ಸೌಕರ್ಯ ಮತ್ತು ಆರೋಗ್ಯದ ಸೌಕರ್ಯ. ಈ ಟ್ರಸ್ಟ್ ಬೋರ್ಡು ಆದಮೇಲೆ ನಗರದ ಜನರನ್ನು ಒಂದಲ್ಲ ಒಂದು ರೀತಿಯಲ್ಲಿ ಪೀಡಿಸುತ್ತಿದ್ದಾರೆ. ನಗರದ ಜನತೆ ಬಹು ಕಷ್ಟವನ್ನು ಅನುಭವಿಸುತ್ತಿದ್ದಾರೆ. ಅದೇ ರೀತಿ 1970 ರೊಳಗೆ ಕಾವೇರಿ ನೀರನ್ನು ತಂದು ಬೆಂಗಳೂರು ನಗರದ ಜನರಿಗೆ ಕುಡಿಸುತ್ತೇವೆ, ಎಂದು ಒಂದು ವಾಟರ್ ಸಪ್ಲೈ ಬೋರ್ಡು ಮಾಡಿದರು. ಕಾಂಗ್ರೆಸ್ ಆಫೀಸಿನಿಂದ ಆರ್ಡರ್ ಬಂದ ತಕ್ಷಣ ಕಾರ್ಪೊರೇಷನಿನವರು ಅದಕ್ಕೆ 'ಅಸ್ತು' ಎಂದು ಒಂದು ವಾಟರ್ ಬೋರ್ಡು ಮಾಡಿ, ಅದಕ್ಕೆ ಈ ಕೆಲಸವನ್ನು ವಹಿಸಿದರು. ಆದರೆ 1970ಕ್ಕೆ ನೀರು ಒದಗಿಸುವವರು ಇಂದಿನವರೆಗೂ ಯಾವ ಒಂದು ಕೆಲಸವನ್ನೂ ಪ್ರಾರಂಭ ಮಾಡಿಲ್ಲ. ಮಗು ಹುಟ್ಟುವ ಮೊದಲು ಕುಲಾವಿ ಹೊಲಿಸಿದ ಹಾಗೆ, ಇವರು ಬೆಂಗಳೂರು ನಗರದಲ್ಲಿದ್ದ ರಸ್ತೆಗಳನ್ನು ತೋಡಿ, ಹಾಳು ಮಾಡಿ ಹಾಕಿದ್ದಾರೆ. ರಸ್ತೆಗಳನ್ನು ಅಗೆದು, 8–10 ಪೈಪುಗಳನ್ನು ಹಾಕಿ ಅದಕ್ಕೆ ಸಿಮೆಂಟ್ ಹಾಕಿದ್ದಾರೆ. ನೀರು ಯಾವಾಗ ಬರುವುದೋ ಏನೋ? ಆದರೆ ರಸ್ತೆಗಳನ್ನು ಮಾತ್ರ ಕುಲಗೆಡಿಸಿದ್ದಾರೆ.

(ಶ್ರೀ ಟಿ. ಆರ್. ಶಾಮಣ್ಣ)

ಅದೇ ರೀತಿ ನೀರಿನ ದರವನ್ನು ಒಂದಕ್ಕೆ ಮೂರರಷ್ಟು ಏರಿಸಿ ನಗರದ ಪ್ರಜೆಗಳಿಗೆ ತೊಂದರೆ ಕೊಡುತ್ತಿದ್ದಾರೆ. ಹೈಕೋರ್ಟಿನವರು ಇದರ ಬಗ್ಗೆ ಒಂದು ತೀರ್ಮಾನವನ್ನಿತ್ತು ನಾವು ಮಾಡಿದ ಅಪೀಲನ್ನು ತಳ್ಳಿ ಹಾಕಿದರು. ಬೆಂಗಳೂರು ನಗರದ ಒಟ್ಟು ನೀರಿನ ಬಿಲ್ ಹಿಂದೆ 35 ಲಕ್ಷವಾಗುತ್ತಿತ್ತು ಈಗ ವಾಟರ್ ಬೋರ್ಡಿನವರು 50 ಲಕ್ಷ ತೆಗೆದುಕೊಳ್ಳುತ್ತಿದ್ದಾರೆ. ಈ ರೀತಿ ವಾಟರ್ ಬೋರ್ಡ್ ರಚನೆಮಾಡಿ ನಾಗರೀಕರನ್ನು ಶೋಷಣೆ ಮಾಡುತ್ತಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡಿಗೆ ಬೆಂಗಳೂರು ನಗರದಲ್ಲಿ 5 ಕೋಟಿ ರೂಪಾಯಿ ವರಮಾನವಿದೆ. ಇವತ್ತು ಹೊರಗಿನಿಂದ ಬಂದವರಿಗೆ ಬೆಂಗಳೂರು ನಗರದಲ್ಲಿ ಬಹಳ ಸೌಕರ್ಯ ಇದೆ, ಲೈಟಿನ ವ್ಯವಸ್ಥೆ ನೀರಿನ ವ್ಯವಸ್ಥೆ ಎಲ್ಲಾ ಚೆನ್ನಾಗಿದೆ, ಮತ್ತು ಇದೊಂದು ಸ್ವರ್ಗಲೋಕದಂತೆ ಇದೆ ಎಂದು ತೋರಿಸಿಕೊಡುತ್ತಿದ್ದಾರೆ. ಆದರೆ ಬೆಂಗಳೂರು ನಗರದಲ್ಲಿರತಕ್ಕ ತಹ ಕೊಳಚೆ ಪ್ರದೇಶಗಳನ್ನು ನೋಡಿದರೆ, ಯಾರಾದರೂ ಇಂತಹ ನರಕ ಕೂಡ ಇಲ್ಲಿ ಉಂಟೋ ಎಂದು ಆಶ್ಚರ್ಯ ಪಡಬಹುದು. ಯಾರಿಗಾದರೂ ಇದರಲ್ಲಿ ಸಂಶಯ ಇದ್ದರೆ, ನಾನು ನನ್ನ ಖರ್ಚಿನಲ್ಲಿ ಅವರನ್ನು ಆ ಪ್ರದೇಶಕ್ಕೆ ಕರಕೊಂಡುಹೋಗಿ ಇಂತಹ ಉದಾಹರಣೆಗಳನ್ನು ತೋರಿಸಬಲ್ಲೆ.

ಇದರ ಜೊತೆಗೆ ಇಲ್ಲಿ ಪ್ಲಾನಿಂಗ್ ಅಥಾರಿಟೀಸ್ ಎಂದು ಬೇರೆ ಮಾಡಿದ್ದಾರೆ. ಇವರು ಅಧಿಕಾರಕ್ಕೆ ಬರುವ ಮೊದಲೇ ನಾಲ್ಕು ವರ್ಷಗಳಿಂದ ತಮ್ಮ ಅಧಿಕಾರವನ್ನು ಚಲಾಯಿಸುತ್ತಿದ್ದರು. ನಾಗರೀಕರಿಗೆ ಬೇಕಾದ ಪ್ರತಿಯೊಂದು ವಿಚಾರವೂ ಪ್ಲಾನಿಂಗ್ ಅಥಾರಿಟೀಸ್‌ಗೆ ಹೋಗುತ್ತದೆ ಅಲ್ಲಿರುವ ಅಧಿಕಾರಿಗಳೆಂದರೆ, ಯೋಗ್ಯತೆ ಇಲ್ಲದವರು, ಓಟಿಗೆ ನಿಂತರೆ ಒಂದು ನೂರು ಓಟು ಕೂಡ ಪಡೆಯಲು ಯೋಗ್ಯತೆ ಇಲ್ಲದ ವ್ಯಕ್ತಿಗಳು. ಅಂತಹ ಜನರನ್ನು ಅಲ್ಲಿ ಹಾಕಿದರೆ, ನಾಗರೀಕರಿಗೆ ಯಾವ ಕ್ಷೇಮ ಸಿಗಬಹುದು ? ಕಾರ್ಪೊರೇಷನಿನ ಪೂರ್ಣ ಅಧಿಕಾರವನ್ನು ಪ್ಲಾನಿಂಗ್ ಅಥಾರಿಟೀಸ್‌ಗೆ ಕೊಟ್ಟಿದ್ದಾರೆ. ಮಾತೆತ್ತಿದರೆ, ಪ್ಲಾನಿಂಗ್ ಅಥಾರಿಟೀಸ್‌ಗೆ ಹಾಕುತ್ತೇವೆ ಎಂದು ಹೇಳುತ್ತಾರೆ. ಹಿಂದೆ ಸರ್ಕಾರದೊಡನೆ ಮೇಯರ್ ಮುಖಾಂತರ ಏನಾದರೂ ಕಾರ್ಪರೇಷನ್ ಪತ್ರ ವ್ಯವಹಾರ ನಡೆಸಬೇಕೆಂದು ಇತ್ತು. ಈಗ ಅದನ್ನೂ ತೆಗೆದು ಕಮಿಷನರ್ ನೇರವಾಗಿ ಸರ್ಕಾರದ ಜೊತೆಯಲ್ಲಿ ಕರೆಸ್ಪಾಂಡೆನ್ಸ್ ನಡೆಸಬಹುದು ಎಂದು ತಿದ್ದುಪಡಿ ತಂದಿದ್ದಾರೆ. ಈ ರೀತಿ ಪ್ರತಿಯೊಂದು ರೀತಿಯಲ್ಲೂ ಕಾರ್ಪೊರೇಶನ್ ಅಧಿಕಾರವನ್ನು ಮೊಟಕು ಮಾಡಿಬಿಟ್ಟಿದ್ದಾರೆ. ಇವತ್ತು ಕಾರ್ಪೊರೇಷನ್ ಕೆಲಸ ಏನೆಂದರೆ, ಬೀದಿಗಳನ್ನು ಗುಡಿಸುವುದು, ರಸ್ತೆ ರಿಪೇರಿ ಮಾಡುವುದು ಮತ್ತು 5-10 ಪರ್‌ಸೆಂಟ್ ಫಲಿತಾಂಶ ಬರುವಂತಹ ದೊಡ್ಡಿಯಂತಿರುವ ಸ್ಕೂಲುಗಳನ್ನು ನಡೆಸುವುದು. ಅಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ವಿದ್ಯೆ ಶೂನ್ಯ. ಇನ್ನು ಬರತಕ್ಕ ಕಾರ್ಪೊರೇಟರುಗಳಿಗೆ ಅಲ್ಲಿ ಯಾವ ಅಧಿಕಾರವೂ ಇರುವುದಿಲ್ಲ. ಪ್ರತಿ ದಿನ ಪ್ಲಾನಿಂಗ್ ಅಥಾರಿಟೀಸ್ ಜೊತೆಯಲ್ಲಿ, ಕಮಿಷನರ್ ಜೊತೆಯಲ್ಲಿ ಮತ್ತು ಸರ್ಕಾರದ ಜೊತೆಯಲ್ಲಿ ಜಗಳವಾಡುವ ಅವಕಾಶ ಇದೆ ಅಷ್ಟೇ. ಅದಕ್ಕೆ ಯಾವ ಒಂದು ಮರ್ಯಾದೆಯೂ ಇರುವುದಿಲ್ಲ. ಇಂತಹ ಅಕ್ರಮವಾದ ಪರಿಸ್ಥಿತಿಯನ್ನು ಅಲ್ಲಿ ತಂದಿಟ್ಟಿರುವುದು ಬಹಳ ವಿವೇಕಹೀನವಾದ ಮಾತು ಎಂದು ಹೇಳಿದರೆ ತಪ್ಪಾಗಲಾರದು. ಇದಕ್ಕೆ ಮೂಲ ಕಾರಣವೇನೆಂದರೆ, ಕಳೆದ 20 ವರ್ಷಗಳಿಂದ, (ನಾನೂ ಒಬ್ಬ ಸೇರಿಕೊಂಡು,) ಕಾಂಗ್ರೆಸ್ಸಿನವರು ನಗರದ ಆಡಳಿತ ನಡೆಸುತ್ತಿದ್ದರು. ಅವರು ಮಾಡುತ್ತಿರುವ ಅನ್ಯಾಯ, ಅಕ್ರಮ ಏನಿದ್ದರೂ, ಕಾರ್ಪರೇಷನ್ ಅದಕ್ಕೆ 'ಅಸ್ತು' ಎನ್ನುತ್ತಿತ್ತು ಮತ್ತು ಅವರು ಯಾವ ಕೆಲಸವನ್ನಾದರೂ ಮಾಡಿಕೊಳ್ಳುತ್ತಿದ್ದರು. ಕಾರ್ಪೊರೇಷನ್ ಆಕ್ಟಿನಲ್ಲಿ ಸೂಪರ್‌ಸೆಶನ್ ಎಂಬ ಮಾತೇ ಇರಲಿಲ್ಲ. ಆದರೆ ನಂತರ ಬೆಂಗಳೂರು ನಾಗರೀಕರು ಇವರಿಗೆ ಓಟು ಕೊಡದೆ ಇವರನ್ನು ಪರಾಭವ ಮಾಡಿದರು. ಆಗ ಇವರಿಗೆ ಮನವರಿಕೆಯಾಯ್ತು ಏನೆಂದರೆ, ಇದರ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡು ಅಧಿಕಾರವನ್ನು ಚಲಾವಣೆ ಮಾಡಬೇಕು ಎಂದು. ಈಗಾಗಲೇ ನೀವು ಮಾಡಿರತಕ್ಕ ತಿದ್ದುಪಡಿಗಳಿಂದ ಖಂಡಿತವಾಗಿಯೂ ನಿಮಗೆ ಕೀರ್ತಿ ತರುವುದಿಲ್ಲ, ಮತ್ತು ನಿಮ್ಮ ಹೆಸರು ಚಿತ್ತುವುದಕ್ಕೆ ಕೂಡ ಸಿಗುವುದಿಲ್ಲ. ಮುಂದೆ ಖಂಡಿತವಾಗಿಯೂ ನಿಮ್ಮ 'ಒ' ಕಾಂಗ್ರೆಸ್ಸಿಗೆ ಒಂದು ಓಟೂ ಸಿಗಲಾರದು. ಕೇರಳದಲ್ಲಿ ಆದಂತೆ ಆಗಬಹುದು. ಮುಂದೆ ನೀವು ಮಾಡಿದಂತಹ ಕಾರ್ಯಗಳಿಗೆ ನೀವೇ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುತ್ತದೆ. ಆರ್. ಎಂ. ಪಾಟೀಲರು ಬೇಕಾದಷ್ಟು ಅಧಿಕಾರ ನಡೆಸಿದರು. ನಾಳೆ ನೀವೇ ಒಂದು ದಿವಸ ರೇಟ್ ಪೇಯರ್ ಆಗಿ ಈ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಇವತ್ತು ಎಷ್ಟೋ ಜನರು ನಮ್ಮಲ್ಲಿ ಬಂದು, ದಯವಿಟ್ಟು ಈ ಒಂದು ಪ್ಲಾನ್ ಸ್ಯಾಂಕ್ಷನ್ ಮಾಡಿಸಿಕೊಡಿ ಎಂದು ಕೇಳಿಕೊಳ್ಳುತ್ತಿದ್ದಾರೆ. ಆ ಸ್ಥಿತಿಗೆ ನಿಮ್ಮ ಅಧಿಕಾರ ಬಂದಿದೆ.

ಮೊದಲು ಶ್ರೀಮಾನ್ ಪುಟ್ಟಸ್ವಾಮಿಯವರು ಪೌರಾಡಳಿತ ಶಾಖೆಯ ಮಂತ್ರಿಗಳಾಗಿದ್ದರು. ಅವರು ತಂತ್ರದಲ್ಲಿ ನರೀ ತಂತ್ರಕ್ಕೆ ಸಮಾನರಾದಂತಹವರು. ಅವರು ಶಕುನಿ ಮಾವ ಇದ್ದ ಹಾಗೆ

ಇದ್ದರು. ಕಾರ್ಪೊರೇಷನ್ನಿಗೆ ಆಗಬೇಕಾದಂತಹ ಅಪಚಾರವೆಲ್ಲವೂ ಅವರಿಂದ ಆಗಿದೆ. ಅವರ ನಂತರ ಶ್ರೀಮಾನ್ ಆರ್. ಎಂ. ಪಾಟೀಲರು ಪೌರಾಡಳಿತ ಶಾಖೆಯ ಮಂತ್ರಿಗಳಾಗಿ ಬಂದರು. ಅವರು ಬಾಯಿಬಡುಕರಾಗಿದ್ದರು. ಆದರೆ ಏನೇ ತೊಡಕುಗಳು ಬಂದರೂ ಕೂಡ ಅವುಗಳನ್ನು ಧೈರ್ಯದಿಂದ ಎದುರಿಸತಕ್ಕ ಶಕ್ತಿ ಅವರಿಗೆ ಇತ್ತು. ಆರ್. ಎಂ. ಪಾಟೀಲರು ಆದಮೇಲೆ ಈಗ ಬಿ.ಎಂ. ಪಾಟೀಲರು ಪೌರಾಡಳಿತ ಶಾಖೆಯ ಮಂತ್ರಿಗಳಾಗಿದ್ದಾರೆ. ಅವರು ಸಾಧು ಪ್ರಾಣಿ. ಅವರಿಗೆ ಎಲ್ಲರಿಗೂ ಒಳ್ಳೆಯದನ್ನು ಮಾಡಬೇಕು ಎನ್ನುವ ಮನೋಭಾವನೆ ಇದೆ. ಆದರೆ ಇವರು ತಮ್ಮ ಕೈಕೆಳಗಿರತಕ್ಕ ಅಧಿಕಾರಿಗಳ ಬಗ್ಗೆ ಯಾವ ಪ್ರಭಾವವನ್ನೂ ಬೀರುವುದಕ್ಕೆ ನಿಶ್ಯಕ್ತರಾಗಿದ್ದಾರೆಂದು ಹೇಳುವುದಕ್ಕೆ ನನಗೆ ಬಹಳ ವ್ಯಸನವಾಗುತ್ತದೆ. ಇಂಥಾ ಒಳ್ಳೆಯ ಮಂತ್ರಿಗಳನ್ನು ಅಧಿಕಾರಿಗಳು ದುರುಪಯೋಗಪಡಿಸಿಕೊಂಡು ನಮಗೆ ತೊಂದರೆ ಕೊಡುತ್ತಿದ್ದಾರೆ ಎಂದು ನಾವು ವ್ಯಥೆ ಪಡಬೇಕಾಗಿದೆ.

ಸರ್ಕಾರದವರು ಜನಗಳಿಂದ ವೋಟು ತೆಗೆದುಕೊಳ್ಳುವುದಕ್ಕಾಗಿ 34 ಹಳ್ಳಿಗಳನ್ನು ಕಾರ್ಪೊರೇಷನ್ನಿಗೆ ಸೇರಿಸಿಕೊಂಡರು. ಆದರೆ ಜನಗಳು ವೋಟು ಕೊಡಲಿಲ್ಲ. ಕಾರ್ಪೊರೇಷನ್ನಿನವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಕಾರ್ಪೊರೇಷನ್ನಿಗೆ ಹೊಸದಾಗಿ ಸೇರಿಸಿಕೊಂಡ ಹಳ್ಳಿಗಳಿಗೆ ಮೊದಲು ಇದ್ದಂತಹ ಗ್ರಾಮ ಸೌಕರ್ಯಗಳೂ ಇಲ್ಲ. ಕಾರ್ಪೊರೇಷನ್ನಿನ ಸೌಕರ್ಯಗಳೂ ಇಲ್ಲ. ಈಗೇನೋ ಸರ್ಕಾರದವರು 10 ಲಕ್ಷ ಮತ್ತು ಕಾರ್ಪೊರೇಷನ್ನಿನವರು 10 ಲಕ್ಷ ರೂಪಾಯಿಗಳನ್ನು ಈ ಗ್ರಾಮಗಳಿಗೆ ಸೌಕರ್ಯಗಳನ್ನು ಒದಗಿಸುವುದಕ್ಕೋಸ್ಕರ ಮಂಜೂರು ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಮತ್ತು ಬೆಂಗಳೂರಿನ ಸುತ್ತಮುತ್ತಲೂ ರೆವಿನ್ಯೂ ಸೈಟುಗಳನ್ನು ಫಾರಂ ಮಾಡುವುದಕ್ಕೆ ಅವಕಾಶ ಕೊಟ್ಟು ಅವುಗಳನ್ನು ಜನಗಳು ಕೊಂಡುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ.

ಕಾರ್ಪೊರೇಷನ್ನಿನ ಆಡಳಿತವನ್ನು ತೆಗೆದುಕೊಂಡರೆ ಆಡ್ಮಿನಿಸ್ಟ್ರೇಟರು ಸರ್ವಾಧಿಕಾರವನ್ನು ತೆಗೆದುಕೊಂಡು ಕುಳಿತುಕೊಂಡಿದ್ದಾರೆ. ಅಡ್ಮಿನಿಸ್ಟ್ರೇಟರು ಲಂಚವನ್ನು ತೆಗೆದುಕೊಳ್ಳುತ್ತಾರೆ ಎಂದು ನಾನು ಹೇಳುವುದಿಲ್ಲ. ಅವರಿಗೆ ಅಧಿಕಾರ ಮಾಡತಕ್ಕಂಥ ಅರ್ಹತೆ ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ನಗರಾಡಳಿತದಲ್ಲಿ ಜನಗಳ ಹಿತದೃಷ್ಟಿಯಿಂದ ಬಡ ಜನಗಳ ಕ್ಷೇಮವನ್ನು ನೆನಪಿನಲ್ಲಿಟ್ಟುಕೊಂಡು ಕೆಲಸ ಮಾಡತಕ್ಕದ್ದು ಅಧಿಕಾರಿಗಳ ಒಂದು ಲಕ್ಷಣವಾಗಿದೆ. ಆದರೆ ನಾವು ಐ.ಎ.ಎಸ್. ಅಧಿಕಾರಿಗಳು ಎಂದು ದರ್ಪ ತೋರಿಸುವಂತಹ ಅಧಿಕಾರಿಗಳಾಗಿದ್ದರೆ ಹೆಚ್ಚು ಜನಗಳಿಗೆ ಒಳ್ಳೆಯದನ್ನು ಮಾಡುವುದಕ್ಕೆ ಖಂಡಿತ ಆಗುವುದಿಲ್ಲ. ಕಾರ್ಪೊರೇಷನ್ನಿಗೆ ಅಡ್ಮಿನಿಸ್ಟ್ರೇಟರ ಆಡಳಿತ ಬಂದಮೇಲೆ ಅಲ್ಲಿ ಎಸ್ಟಾಬ್ಲಿಷ್‌ಮೆಂಟ್ ಖರ್ಚು ಒಂದು ಕೋಟಿ 20 ಲಕ್ಷ ರೂಪಾಯಿಗಳು ಇದ್ದದ್ದು ಈಗ ಒಂದು ಕೋಟಿ 80 ಲಕ್ಷಕ್ಕೆ ಏರಿದೆ. ತುಕೋಳ್ ಕಮಿಷನ್ನಿನ ವರದಿಯ ಪ್ರಕಾರ ಕಾರ್ಪೊರೇಷನ್ ನೌಕರರಿಗೆ ಸಂಬಳ ಮತ್ತು ಡಿ.ಎ. ಅನ್ನು ಕೊಟ್ಟರೆ ಎರಡು ಕೋಟಿ ರೂಪಾಯಿಗಳಾಗುತ್ತದೆ. ಹಿಂದೆ ಕಾರ್ಪೊರೇಷನ್‌ನಲ್ಲಿ ಒಬ್ಬ ಇಂಜಿನಿಯರು, ಒಬ್ಬ ಡೆಪ್ಯುಟಿ ಇಂಜಿನಿಯರು, 6 ಜನ ಅಸಿಸ್ಟೆಂಟ್ ಇಂಜಿನಿಯರು ಇದ್ದರು. ಅಲ್ಲಿ ಈವೊತ್ತಿನ ದಿವಸ ಒಬ್ಬ ಇಂಜಿನಿಯರು, 6 ಜನ ಡೆಪ್ಯುಟಿ ಇಂಜಿನಿಯರು 16 ಜನ ಅಸಿಸ್ಟೆಂಟ್ ಇಂಜಿನಿಯರು ಇದ್ದಾರೆ. ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿ ಒಬ್ಬರು ಹೆಲ್ತ್ ಆಫೀಸರು, 4 ಜನ ಮೆಡಿಕಲ್ ಆಫೀಸರು ಹಿಂದೆ ಇದ್ದರು. ಈಗ ಅದನ್ನೆಲ್ಲಾ ಡಬ್ಬಲ್, ಟ್ರಿಬ್ಬಲ್ ಮಾಡಿದ್ದಾರೆ. ರೆವಿನ್ಯೂ ಆಫೀಸಿನಲ್ಲಿಯೂ ಕೂಡ ಅದೇ ರೀತಿ ಮಾಡಿದ್ದಾರೆ. ಬೆಂಗಳೂರು ನಗರ ಕಾರ್ಪೊರೇಷನ್ ಚಿನ್ನದ ಗಣಿ ಎಂದು ತಿಳಿದುಕೊಂಡು ನಗರಾಡಳಿತ ಮಂತ್ರಿಗಳ ಮೇಲೆ ಕೆಲವರು ಪ್ರಭಾವ ಬೀರಿ ಕಾರ್ಪೊರೇಷನ್ನಿನಿಂದ ಸಾವಿರಾರು ರೂಪಾಯಿಗಳನ್ನು ದೋಚಿಕೊಂಡು ಹೋಗುತ್ತಿದ್ದಾರೆ. ಅಧಿಕಾರಿಗಳು ಹಿಂದೆ ಸೈಕಲ್‌ಗಳ ಮೇಲೆ ಬರುತ್ತಿದ್ದವರು ಇವೊತ್ತು ಸ್ಕೂಟರ್ ಮತ್ತು ಕಾರುಗಳನ್ನು ಇಟ್ಟುಕೊಂಡಿದ್ದಾರೆ. ಬಂಗಲೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಕಾರ್ಪೊರೇಷನ್ನಿನ ಅಸಿಸ್ಟೆಂಟ್ ಇಂಜಿನಿಯರೊಬ್ಬರಿಗೆ ಸೇರಿದ ಒಂದು ಬಂಗಲೆಯಲ್ಲಿ ನಗರಾಡಳಿತ ಮಂತ್ರಿಗಳಾದ ಶ್ರೀಮಾನ್ ಬಿ.ಎಂ. ಪಾಟೀಲರು ಇದ್ದಾರೆ. ಆ ಬಂಗಲೆಗೆ ಸರ್ಕಾರದವರು ಒಂದು ತಿಂಗಳಿಗೆ 500 ರೂಪಾಯಿ ಬಾಡಿಗೆಯನ್ನು ಕೊಡುತ್ತಿದ್ದಾರೆ. ಇದೂ ಅಲ್ಲದೆ ಅನೇಕ ಅಧಿಕಾರಿಗಳು ಟ್ಯಾಕ್ಸಿಗಳನ್ನು ಇಟ್ಟುಕೊಂಡು ಓಡಿಸುತ್ತಿದ್ದಾರೆ. ಸಿನಿಮಾ ಮಂದಿರಗಳನ್ನು ಕಟ್ಟಿಕೊಂಡಿದ್ದಾರೆ. ಈ ರೀತಿಯಾಗಿ ನಾನಾ ರೀತಿಯಿಂದ ಹಣವನ್ನು ಸಂಪಾದನೆ ಮಾಡಿಕೊಂಡು ಲಕ್ಷಾಧೀಶ್ವರರಾಗಿದ್ದಾರೆ. ಕೆಲವರು ಕಾರ್ಪೊರೇಷನ್ನಿನ ಹಣವನ್ನು ದೋಚಿಕೊಂಡು ಹೋಗುತ್ತಿದ್ದಾರೆ. ಕಾರ್ಪೊರೇಷನ್ನಿನ ಮಾರ್ಚಿ ತಿಂಗಳ ಪ್ರೋಗ್ರಾಮ್ ಆಫ್ ವರ್ಕ್ಸನ್ನು ಅಧಿಕಾರಿಗಳು ಇನ್ನೂ ತಯಾರು ಮಾಡಿಲ್ಲ. ಬಡ್ಜೆಟ್ಟಿನ ದುಡ್ಡು ಖರ್ಚಾಗಿದೆ. ಹೆಚ್ಚು ಹಣವನ್ನು ಖರ್ಚು ಮಾಡಿ ಪ್ರತಿಯೊಬ್ಬ ಇಂಜಿನಿಯರೂ ಕೆಲಸ ಇಲ್ಲದೆ ಯಾವುದಾದರೂ ಕೆಲಸವನ್ನು ಕೊಡಿಸಿ ಸುಮ್ಮನೆ ಕುಳಿತುಕೊಂಡಿದ್ದೇವೆ

(ಶ್ರೀ ಟಿ. ಆರ್. ಶಾಮಣ್ಣ)

ಎಂದು ಹೇಳುತ್ತಿದ್ದಾರೆ. ಕೆಲವು ಅಧಿಕಾರಿಗಳು ಹೊಸದಾಗಿ ಟ್ರಾನ್ಸ್‌ಫರ್ ಆಗಿ ಬಂದಿರುವವರು ಅವರಿಗೆ ಯಾವ ಅನುಕೂಲವೂ ಇಲ್ಲದೆ ಇರುವುದರಿಂದ ಅವರು ನಮ್ಮನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಕಳುಹಿಸಿ ಎಂದು ಹೇಳುತ್ತಿದ್ದಾರೆ. ಕಾರ್ಪೊರೇಷನ್ನಿನಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಬುಡದಿಂದ ಕೊನೆಯವರೆಗೂ ಲಂಚ ಇಲ್ಲದೆ ಯಾವ ಕೆಲಸವೂ ಆಗುವುದಿಲ್ಲ. ಆದರಿಂದಾಗಿ ಬೆಂಗಳೂರಿನ ನಾಗರೀಕರು ಕಷ್ಟಪಡಬೇಕಾಗಿದೆ. ಕಾರ್ಪೊರೇಷನ್ನಿನ ಆಡಳಿತವಿದ್ದಾಗ 63 ಜನ ಕೌನ್ಸಿಲರ್‌ಗಳಲ್ಲಿ ಕೆಲವರು ಸ್ವಲ್ಪ ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದರು. ಅದು ಕೇವಲ 10 ಪರ್ಸೆಂಟ್ ಕೂಡ ಇರಲಿಲ್ಲ. ಈಗ ಕಾರ್ಪೊರೇಷನ್‌ನಲ್ಲಿ ಜವಾನನಿಂದ ಹಿಡಿದು ಕೊನೆಯ ಮೇಲಧಿಕಾರಿಯವರೆಗೂ ಲೂಟ್ ಮಾಡುವುದಕ್ಕೆ ಷುರು ಮಾಡಿದ್ದಾರೆ. ಬೇಲಿ ಎದ್ದು ಹೊಲ ಮೇಯುವ ಹಾಗೆ ಆಗಿದೆ. ಇದರಿಂದ ಜನಗಳಿಗೆ ಕಷ್ಟವಾಗಿದೆ. ಇದರ ಜೊತೆಗೆ ಈಗ ನಮ್ಮ ಮುಂದೆ ಬಂದಿರತಕ್ಕ ಈ ಮಸೂದೆಯಲ್ಲಿ ಅನೇಕ ಮುಖ್ಯವಾದ ಅಂಶಗಳು ಇವೆ. ಮೊದಲನೆಯದಾಗಿ ಆದಷ್ಟು ಬೇಗ ಕಾರ್ಪೊರೇಷನ್ ಎಲೆಕ್ಷನ್ ಮಾಡಬೇಕು. ಸರ್ಕಾರದವರು ಸಹ ಆದಷ್ಟು ಬೇಗ ಕಾರ್ಪೊರೇಷನ್ ಎಲೆಕ್ಷನ್ ಅನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ, ಮತ್ತು ಹೇಳುತ್ತಿದ್ದಾರೆ. ನಾವು ಆದಷ್ಟು ಬೇಗ ಎನ್ನುವುದನ್ನು ಗೋಡೆಯ ಮೇಲೆ ಬರೆಯಬೇಕು. ಕಾರ್ಪೊರೇಷನ್ ಎಲೆಕ್ಷನ್ ಆದಷ್ಟು ಬೇಗ ಆಗುತ್ತದೆ ಎನ್ನುವುದು ನನಗೆ ಕಾಣುವುದಿಲ್ಲ. ಈಗ ಅಸೆಂಬ್ಲಿ ವೋಟರ್ಸ್ ಲಿಸ್ಟ್ ಪ್ರಕಾರ ಎಲೆಕ್ಷನ್ ಮಾಡಬೇಕೆಂದು ಹೇಳಿದ್ದಾರೆ. ಅಸೆಂಬ್ಲಿ ವೋಟರ್ಸ್ ಲಿಸ್ಟ್ ಪ್ರಕಾರ ರಾಜಾಜಿನಗರದಲ್ಲಿ ಎರಡನೇ ಡಿವಿಜನ್‌ನಲ್ಲಿ 32 ಸಾವಿರ ಜನ ವೋಟರ್ಸ್ ಇದ್ದಾರೆ. ಮೂರನೇ ಡಿವಿಜನ್ನಿನಲ್ಲಿ 21 ಸಾವಿರ ಜನ ವೋಟರ್ಸ್ ಇದ್ದಾರೆ. 35ನೇ ಡಿವಿಜನ್‌ನಲ್ಲಿ 20 ಸಾವಿರ ಜನ ವೋಟರ್ಸ್ ಇದ್ದಾರೆ. 14 ನೇ ಡಿವಿಜನ್‌ನಲ್ಲಿ 6 ಸಾವಿರ ಜನ ವೋಟರ್ಸ್ ಇದ್ದಾರೆ. ಹೀಗೆ ಒಂದು ಡಿವಿಜನ್ನಿನಲ್ಲಿರತಕ್ಕ ವೋಟರುಗಳ ಸಂಖ್ಯೆಗೂ ಇನ್ನೊಂದು ಡಿವಿಜನ್ನಿನಲ್ಲಿರತಕ್ಕ ವೋಟರುಗಳ ಸಂಖ್ಯೆಗೂ ಎಷ್ಟೋ ವ್ಯತ್ಯಾಸ ಇರುತ್ತದೆ. 6 ಸಾವಿರ ವೋಟರುಗಳಿಂದ ಹಿಡಿದು 34 ಸಾವಿರ ವೋಟರ್‌ಗಳು ಇರತಕ್ಕಂಥ ಡಿವಿಜನ್‌ಗಳು ಇವೆ. ಒಂದು ಡಿವಿಜನ್‌ನಲ್ಲಿ 32 ಸಾವಿರ ವೋಟರ್ಸ್ ಇದ್ದು ಇನ್ನೊಂದು ಡಿವಿಜನ್‌ನಲ್ಲಿ 6 ಸಾವಿರ ಜನ ವೋಟರುಗಳು ಇರುವಂಥಾ ವೋಟರ್ಸ್ ಲಿಸ್ಟನ್ನು ಯಾರೂ ಒಪ್ಪುವುದಿಲ್ಲ. ಇದು ಇಲ್ಲೀಗಲ್. ಈ ಬಗ್ಗೆ ಯಾರಾದರೂ ಕೋರ್ಟಿಗೆ ಹೋದರೂ ಹೋಗಬಹುದು. ಏತಕ್ಕೆಂದರೆ 32 ಸಾವಿರ ಜನ ಡಿವಿಜನ್ನಿಗೂ ಒಬ್ಬರು ಸೂಪರ್‌ವೈಜರ್, ಒಬ್ಬರು ಹೆಲ್ತ್ ಇನ್‌ಸ್ಪೆಕ್ಟರು, ಒಬ್ಬರು ರೆವಿನ್ಯೂ ಆಫೀಸರು ಇರುತ್ತಾರೆ. 6 ಸಾವಿರ ಜನ ವೋಟರ್ಸ್ ಇರುವ ಡಿವಿಜನ್ನಿಗೂ ಇಷ್ಟೇ ಜನ ಅಧಿಕಾರಿಗಳು ಇರುತ್ತಾರೆ. ಆದರೆ ಡಿವಿಜನ್‌ಗಳಿಗೆ ದುಡ್ಡನ್ನು ಹಂಚುವಾಗ ನಮ್ಮ ಜನಗಳಿಗೆ ಅನ್ಯಾಯವಾಗುತ್ತದೆ ಎಂದು ಆಯಾ ಸಂಬಂಧಪಟ್ಟ ಡಿವಿಜನ್ನಿನ ಕಾರ್ಪೊರೇಟರ್ ಆಗತಕ್ಕಂಥವರು ಕೋರ್ಟಿಗೆ ಹೋದರೆ ಖಂಡಿತಾ ಎಲೆಕ್ಷನ್ ನಿಂತುಹೋಗುತ್ತದೆ. ಜನಗಳ ಕಣ್ಣಿಗೆ ಮಣ್ಣು ಎರಚಿ 1972 ನೇ ಇಸವಿಯವರೆಗೂ ಹೀಗೆಯೇ ಎಲೆಕ್ಷನ್ ಮಾಡದೇ ತಳ್ಳುತ್ತಾರೆ. ಇಂಥಾ ಒಂದು ಉದ್ದೇಶವನ್ನು ಇಟ್ಟುಕೊಂಡು ಸರ್ಕಾರದವರು ಈ ರೀತಿ ಮಾಡುತ್ತಿದ್ದಾರೆ. ಇದು ಖಂಡಿತಾ ಸರಿಯಲ್ಲ. ಜನಗಳ ಕಣ್ಣಿಗೆ ಮಣ್ಣು ಎರಚಿ ಎಲೆಕ್ಷನ್ ಮಾಡುತ್ತೇನೆ, ಮಾಡುತ್ತೇವೆ ಎಂದು ಮುಂದಕ್ಕೆ ತಳ್ಳಿಕೊಂಡು ಹೋಗಬೇಡಿ. ಡಿಸೆಂಬರ್ ತಿಂಗಳಲ್ಲಿ ಇಂಥಾ ತಾರೀಖಿನ ದಿವಸ ಕಾರ್ಪೊರೇಷನ್ ಎಲೆಕ್ಷನ್ ಮಾಡುತ್ತೇವೆ ಎಂದು ಅನೌನ್ಸ್ ಮಾಡಬೇಕು. ಇಲ್ಲದಿದ್ದರೆ ಸರ್ಕಾರದವರು ದುರುದ್ದೇಶದಿಂದ ಚುನಾವಣೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ನಾವಂತೂ ಕೋರ್ಟಿಗೆ ಹೋಗುವುದಿಲ್ಲ. ನೀವು ಬೇಕಾದರೆ ನಿಮ್ಮ ಏಜೆಂಟರ ಮುಖಾಂತರ ಕೋರ್ಟಿಗೆ ಹೋಗಬಹುದು. ನಮ್ಮ ಅಭಿಪ್ರಾಯ ಹೇಗಾದರೂ ಕಾರ್ಪೊರೇಷನ್ ಎಲೆಕ್ಷನ್ ಆಗಿ ಕಾರ್ಪೊರೇಷನ್ ಕೌನ್ಸಿಲರ್ ಆಡಳಿತ ಬರಬೇಕು ಎಂದು.

ನಾನು ಮತ್ತು ಮಾನ್ಯ ಕೃಷ್ಣನ್ ಅವರು ಕಳೆದ ಎರಡು ವರ್ಷಗಳಿಂದಲೂ ಕೂಡ ಒತ್ತಾಯಪೂರ್ವಕವಾಗಿ ಚುನಾವಣೆ ನಡೆಸಬೇಕೆಂದು ಕೇಳಿಕೊಳ್ಳುತ್ತಿದ್ದರೂ ಕೂಡ ಇನ್ನೂ ಮಾಡಲಿಲ್ಲ. ಅನೇಕ ಕಾರಣಗಳನ್ನು ಮುಂದೊಡ್ಡಿ ಚುನಾವಣೆಯನ್ನು ಮುಂದೂಡುತ್ತಿದ್ದಾರೆ. ಇದು ದುರುದ್ದೇಶದಿಂದ ಕೂಡಿದೆ ಎಂದು ಹೇಳಬಹುದು. ಅಸೆಂಬ್ಲಿ ಓಟರ್ ಲಿಸ್ಟ್ ಪ್ರಕಾರವೇ ಕಾರ್ಪೊರೇಷನ್ ಓಟರ್ಸ್ ಲಿಸ್ಟ್ ಇರಬೇಕೆಂಬ ನಿಯಮವೇನೂ ಇಲ್ಲ. ನ್ಯಾಯಬದ್ಧವಾಗಿ ಚುನಾವಣೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದ್ದಿದ್ದರೆ 30 ದಿವಸದ ನೋಟೀಸ್ ಕೊಟ್ಟು ಡಿವಿಜನ್ ವಿಂಗಡಣೆ ಮಾಡಬಹುದಾಗಿತ್ತು. ಈ ಬಗ್ಗೆ ನೋಟಿಫಿಕೇಷನ್ ಹೊರಡಿಸುವ ಅಧಿಕಾರ ವಿದ್ದರೂ ಕೂಡ ಯಾವುದೋ ಕಾರಣದಿಂದ ಚುನಾವಣೆಯನ್ನು ಮುಂದಕ್ಕೆ ಹಾಕುತ್ತಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಯಾವ ರೀತಿ ಉತ್ತರ ಕೊಡುತ್ತಾರೋ ಕೊಡಲಿ. ಈಗಾಗಲೇ

ಕಾರ್ಪೊರೇಷನ್ ಅಧಿಕಾರಿಗಳು ಓಟರ್ಸ್ ಲಿಸ್ಟ್ ತಯಾರು ಮಾಡಲು ಎರಡು ವರ್ಷಗಳ ಸಮಯ ತೆಗೆದುಕೊಂಡು ಲಕ್ಷಾಂತರ ರೂಪಾಯಿಗಳನ್ನು ಅದಕ್ಕಾಗಿ ಖರ್ಚು ಮಾಡಿದ್ದಾರೆ. ಇದಕ್ಕೆಲ್ಲಾ ಯಾರು ಕಾರಣರು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಇನ್ನು ಕಾರ್ಪೊರೇಷನ್ ಪ್ರಾಪರ್ಟಿಯ ಬಗ್ಗೆ ಹೇಳಬೇಕೆಂದರೆ ಸಂಪಂಗಿ ಟ್ಯಾಂಕ್, ಸೆಂಟ್ರಲ್ ಕಾಲೇಜ್ ಪಕ್ಕದಲ್ಲಿರುವ ಜಾಗ, ಸೆಂಟ್ರಲ್ ಜೈಲ್ ಪಕ್ಕದಲ್ಲಿರುವ ಜಾಗ ಮತ್ತು ಸುಭಾಷ್‌ನಗರದ ಜಾಗ ಕಾರ್ಪೊರೇಷನ್ನಿಗೆ ಸೇರಿದ್ದು. ಸುಭಾಷ್ ನಗರದ ಅರ್ಧ ಭಾಗವನ್ನು ಸರ್ಕಾರದವರು ರೋಡ್‌ಟ್ರಾನ್ಸ್‌ಪೋರ್ಟ್‌ನವರಿಗೆ ಒಂದು ಕೋಟಿ 45 ಲಕ್ಷಕ್ಕೆ ಮಾರಿದರು. ಉಳಿದ ಅರ್ಧ ಭಾಗವನ್ನು ಕಾಂಗ್ರೆಸ್ ವಸ್ತುಪ್ರದರ್ಶನ ನಡೆಸಲು ಕಾಂಗ್ರೆಸ್ ಪಾರ್ಟಿಯವರಿಗೆ ಕೊಡಲು ಸರ್ಕಾರದವರು ತೀರ್ಮಾನ ಮಾಡಿದ್ದರು ಮತ್ತು ಕಾಂಗ್ರೆಸ್ ಪಾರ್ಟಿಯವರು ಅಲ್ಲಿ ಅಂಗಡಿಗಳನ್ನು ಕಟ್ಟಿಸಿ ತಮ್ಮ ಬೊಕ್ಕಸವನ್ನು ತುಂಬಿಸಿಕೊಳ್ಳುವುದಕ್ಕೆ ಹೊರಟಿದ್ದರು, ಆದರೆ ಮಾನ್ಯ ಸದಸ್ಯರು ಗಲಾಟೆ ಮಾಡಿದ್ದರಿಂದ ಅದನ್ನು ಸರ್ಕಾರದವರು ತಡೆಹಿಡಿದಿದ್ದಾರೆ. ಕಾರ್ಪೊರೇಷನ್‌ಗೆ ಸೇರಿದ ಜಾಗಗಳನ್ನು ಸರ್ಕಾರಕ್ಕೆ ಬೇಕಾದರೆ ಅದನ್ನು ಉಪಯೋಗಿಸಿಕೊಳ್ಳಬಹುದೆಂದು ಒಂದು ತಿದ್ದುಪಡಿ ತಂದು ಪಾಸ್ ಮಾಡಿಸಿ ಆ ಮೂಲಕ ಕಾರ್ಪೊರೇಷನ್‌ಗೆ ಅನ್ಯಾಯ ಮಾಡಿದ್ದಾರೆ. ಕಾರ್ಪೊರೇಷನ್‌ಗೆ ಸಹಾಯ ಮಾಡುವ ಬದಲು ಸರ್ಕಾರದವರು ಅನೇಕ ರೀತಿಯಿಂದ ತೊಂದರೆ ಕೊಡುತ್ತಿದ್ದಾರೆ. ಕಾರ್ಪೊರೇಷನ್‌ವರು ರಸ್ತೆ ರಿಪೇರಿಗಾಗಿ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. 1957ನೇ ಇಸವಿಯಲ್ಲಿ ಮೋಟಾರ್ ವೆಹಿಕಲ್ಸ್‌ನಿಂದ ಬರುವ ಆದಾಯದಲ್ಲಿ 5 ಲಕ್ಷ ರೂಪಾಯಿಗಳನ್ನು ಏನು ಸರ್ಕಾರದವರು ಕಾರ್ಪೊರೇಷನ್‌ನವರಿಗೆ ಕೊಡುತ್ತಿದ್ದರೋ ಅಷ್ಟೇ ಮೊಬಲಗನ್ನು ಇವತ್ತಿಗೂ ಕೊಡುತ್ತಿದ್ದಾರೆ. ಈ ಬಾಬಿನಿಂದ ಸರಕಾರಕ್ಕೆ ಮೊದಲಿಗಿಂತ ಹತ್ತರಷ್ಟು ಹೆಚ್ಚು ಆದಾಯ ಬರುತ್ತಿದ್ದರೂ ಕೂಡ ಇವತ್ತಿಗೂ 5 ಲಕ್ಷ ರೂಪಾಯಿಗಳನ್ನೇ ಕೊಡುತ್ತಿದ್ದಾರೆ. ಇದನ್ನು ಜಾಸ್ತಿ ಮಾಡಬೇಕು. ಲೋಕಲ್ ಬಾಡೀಸ್‌ನ ನೌಕರರ ಡಿ. ಎ. ನಲ್ಲಿ ಅರ್ಧ ಭಾಗವನ್ನು ಸರ್ಕಾರದವರು ಕೊಡುತ್ತಿದ್ದಾರೆ. ಆದರೆ ಬೆಂಗಳೂರು ಕಾರ್ಪೊರೇಷನ್‌ಗೆ ಈ ಒಂದು ಅನುಕೂಲವನ್ನು ಮಾಡಿಕೊಟ್ಟಿಲ್ಲ. ಈಗ ಪ್ರಾಪರ್ಟಿ ಟ್ಯಾಕ್ಸ್ ಬಗ್ಗೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಈ ಒಂದು ತಿದ್ದುಪಡಿಯ ಪ್ರಕಾರ ಇನ್ನು ಮುಂದೆ ಬಿಲ್ಡಿಂಗ್ಸ್ ಜೊತೆಗೆ ಲ್ಯಾಂಡ್ಸ್‌ಗೂ ಕೂಡ ಟ್ಯಾಕ್ಸ್ ಕೊಡಬೇಕಾಗುತ್ತದೆ. ಇದರಿಂದ ಈಗ ಏನು ಟ್ಯಾಕ್ಸ್ ಕೊಡಲಾಗುತ್ತಿದೆಯೊ ಅದರ ಒಂದೂವರೆಯಷ್ಟು ಕೊಡಬೇಕಾಗುತ್ತದೆ. ಎಲ್ಲಿ ಕಟ್ಟಡಗಳನ್ನು ಕಟ್ಟಿಲ್ಲವೋ ಅಲ್ಲಿಯ ಜಾಗಕ್ಕೆ ಟ್ಯಾಕ್ಸ್ ಹಾಕಬಾರದು ಎಂಬುದಾಗಿ ನಾನು ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಅದನ್ನು ಮಾನ್ಯ ಪಾಟೀಲರವರು ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಈಗಿನ ತಿದ್ದುಪಡಿಯ ಪ್ರಕಾರ ಏನಾದರು ಖಾಲಿ ನಿವೇಶನದ ಮೇಲೂ ಕೂಡ ಟ್ಯಾಕ್ಸ್ ಹಾಕುವುದಾದರೆ ಆ ಬಗ್ಗೆ ನಾವು ನಮ್ಮ ಶಕ್ತಿಯಿರುವವರೆಗೂ ಕೂಡ ಹೋರಾಟ ಮಾಡುತ್ತೇವೆ ಮತ್ತು ಪ್ರತಿಭಟಿಸುತ್ತೇವೆ. ಹಿಂದೆ ಜವಹರ್‌ಲಾಲ್ ನೆಹರೂ ಅವರು ಬೆಂಗಳೂರಿಗೆ ಬಂದಾಗ ಅರ್ಬನ್ ಲ್ಯಾಂಡ್ಸ್ ಮೇಲೆ ಏತಕ್ಕೆ ಟ್ಯಾಕ್ಸ್ ಹಾಕಬಾರದು ಎಂದು ಒಂದು ಸಲಹೆ ಕೊಟ್ಟರು. ಅದನ್ನೇ ಕಾರಣವಾಗಿ ಇಟ್ಟುಕೊಂಡು ಮಾರ್ಕೆಟ್ ವ್ಯಾಲ್ಯೂ ಮೇಲೆ 4 ಪರಸೆಂಟ್‌ವರೆಗೆ ತೆರಿಗೆಯನ್ನು ಹೆಚ್ಚು ಮಾಡಿದರು. ಇದರ ಜೊತೆಗೆ ಇವತ್ತಿನ ದಿವಸ ಮತ್ತೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅದು ಈ ರೀತಿ ಇದೆ :

> "The property tax shall be levied at such percentage, not being less than fifteen per cent and not more than twenty-five per cent of the annual value of buildings and lands as may be fixed by the Corporation."

ಇದರ ಪ್ರಕಾರ ಸೌದೆ ಅಂಗಡಿ ಇಟ್ಟುಕೊಂಡಿರುವವನು ಸಹ 15 ಪರ್‌ಸೆಂಟ್ ಟ್ಯಾಕ್ಸ್ ಕೊಡಬೇಕಾಗುತ್ತದೆ. ಇದುವರೆಗೆ ಇಂತಹ ಜಾಗಗಳಿಗೆ 6 ಪರ್‌ಸೆಂಟ್ ಟ್ಯಾಕ್ಸ್ ಇತ್ತು. ಇದರಿಂದ ಬಡವರಿಗೆ ಬಹಳ ಅನ್ಯಾಯವಾಗುತ್ತದೆ. ಇದೇ ತಿದ್ದುಪಡಿಯಲ್ಲಿ ಮುಂದೆ:

> "Provided that the percentage so fixed may be different in different areas and for different classes of buildings and lands."

ಎಂದು ಹೇಳಿದ್ದಾರೆ. ಬನಶಂಕರಿಯಲ್ಲಿ ಒಂದು ಖಾಲಿ ಜಾಗ ಇರುತ್ತದೆಂದು ಇಟ್ಟುಕೊಳ್ಳೋಣ. ಆ ಜಾಗದಿಂದ ಯಾವ ಬಾಡಿಗೆಯೂ ಸಹ ಬರುವುದಿಲ್ಲವಾದರೆ ಯಾವ ರೀತಿ ಟ್ಯಾಕ್ಸ್ ಫಿಕ್ಸ್

– (ಶ್ರೀ ಟಿ. ಆರ್. ಶಾಮಣ್ಣ)

ಮಾಡುತ್ತಾರೆ? ಇಂತಹ ಜಾಗಕ್ಕೂ ಕೂಡ ಟ್ಯಾಕ್ಸ್ ಹಾಕಿದರೆ ಅದು ಲೀಗಲ್ ಆಗಿ ನಿಲ್ಲುತ್ತದೆಯೇ ಎಂಬುದನ್ನು ನೋಡಬೇಕು. ಮತ್ತು ಒಂದೊಂದು ಜಾಗಕ್ಕೆ ಒಂದೊಂದು ರೀತಿಯ ಟ್ಯಾಕ್ಸನ್ನು ಫಿಕ್ಸ್ ಮಾಡುವ ಅಧಿಕಾರ ಇರುವುದರಿಂದ ಲಂಚ ಕೊಟ್ಟರೆ ಒಂದು ರೇಟು, ಕೊಡದಿದ್ದರೆ ಇನ್ನೊಂದು ರೇಟು ಫಿಕ್ಸ್ ಮಾಡುವುದಕ್ಕೆ ಇದರಿಂದ ಅವಕಾಶವಿದೆ. ವ್ಯಾಲ್ಯೂಯೇಷನ್ ಮೆಥೆಡ್ ಸರಿಯಾಗಿ ಇಲ್ಲದಿದ್ದರೆ ಬಡಜನರಿಗೆ ಬಹಳ ತೊಂದರೆಯಾಗುತ್ತದೆ. ಇವತ್ತು ಬಡವರು ಒಡವೆಗಳನ್ನು ಮಾರಿ ಸೈಟನ್ನು ಕೊಂಡುಕೊಂಡಿದ್ದಾರೆ. ಇಂತಹ ಸೈಟ್‌ಗಳ ಮೇಲೂ ಸಹ 15 ಪರ್‌ಸೆಂಟ್ ಟ್ಯಾಕ್ಸ್ ಹಾಕಿದರೆ ಹತ್ತಾರು ವರ್ಷಗಳಲ್ಲಿ ಸೈಟಿನ ಬೆಲೆಯೆಷ್ಟು ಹಣವನ್ನು ಟ್ಯಾಕ್ಸ್ ರೂಪದಲ್ಲಿಯೇ ಕೊಡಬೇಕಾಗುತ್ತದೆ. ಇವತ್ತು ಮನೆಗಳನ್ನು ಕಟ್ಟಿಸುವುದು ಬಡವರಿಗೆ ಬಹಳ ಕಷ್ಟವಾಗಿದೆ. ಏಕೆಂದರೆ ಕಳೆದ ಒಂದು ವರ್ಷದಲ್ಲಿ ಕಬ್ಬಿಣದ ರೇಟು ಒಂದಕ್ಕೆ ಎರಡರಷ್ಟು ಹೆಚ್ಚಾಗಿದೆ. ಇಟ್ಟಿಗೆ ಬೆಲೆ ಜಾಸ್ತಿಯಾಗಿದೆ, ಮರದ ಬೆಲೆ ಜಾಸ್ತಿಯಾಗಿದೆ. ಆದ್ದರಿಂದ ಬಡಜನರಿಗೆ ಅನ್ಯಾಯವಾಗದ ರೀತಿಯಲ್ಲಿ ಟ್ಯಾಕ್ಸನ್ನು ಹಾಕಬೇಕು. ವ್ಯಾಲ್ಯೂಯೇಷನ್ ಮೆಥೆಡ್ ಸರಿಯಾಗಿಲ್ಲದಿದ್ದರೆ ಬಡ ಜನರಿಗೆ ಬಹಳ ತೊಂದರೆಯಾಗುತ್ತದೆಂದು ಹೇಳಬೇಕಾಗುತ್ತದೆ.

4-00 P. M.

ಆಮೇಲೆ ಇದರಲ್ಲಿ ಸೆಕ್ಷನ್ 10 ರಲ್ಲಿ ಜೊತೆಗೆ ಪ್ಲಾನಿಂಗು ಅಥಾರಿಟಿ ಇರಬೇಕೆಂದು ಹೇಳಿದ್ದಾರೆ. ವಾಟರು ಸಪ್ಲೈ ಬೋರ್ಡಿಗೆ, ಎಲೆಕ್ಟ್ರಿಸಿಟಿ ಬೋರ್ಡಿಗೆ ಸರಕಾರದಿಂದ ದುಡ್ಡು ಕೊಡುತ್ತಾ ಇದ್ದೇವೆ. ಅವರು ಹೇಗೆ ಮಾಡಿದರೂ ಸರಿ ಅವರಿಂದ ಕೆಲಸ ಮಾಡಿಸಿಕೊಳ್ಳಬೇಕು, ಕೆಲವು ವೇಳೆ ಅವರು ಸರಕಾರದ ಮೇಲೆಯೇ ಸವಾರಿ ಮಾಡಿಕೊಂಡು ಕೆಲಸ ಮಾಡುತ್ತಿದ್ದಾರೆ. ಇದರಿಂದ ಜನರಿಗೆ ತೊಂದರೆಗಳಾಗುತ್ತಿವೆ. ಈ ಕಷ್ಟಗಳು ಜನರಿಗೆ ಸಾಲದು ಎಂದು ಇದರ ಜೊತೆಗೆ ಈಗ ಪ್ಲಾನಿಂಗು ಅಥಾರಿಟಿಯವರು ಎಂದು ಇನ್ನೊಬ್ಬ ಅಧಿಕಾರಿಯನ್ನು ಮಧ್ಯೆ ತಂದು ಇಲ್ಲದ ತೊಂದರೆಗಳಿಗೆ ಜನರನ್ನು ಸಿಕ್ಕಿಸುತ್ತಿದ್ದಾರೆ. ಸರಕಾರ ಇಂತಹ ಪ್ಲಾನಿಂಗು ಅಥಾರಿಟಿ ಎಂದು ಇರಬೇಕು ಮಾಡಿರುವುದು ಸರಿಯಲ್ಲ. ಇಂತಹ ಅಧಿಕಾರಿಗಳನ್ನು ಖಂಡಿತ ನೇಮಕ ಮಾಡಕೂಡದು. ಇಲ್ಲಿರುವ ಸೆಕ್ಷನ್ 10 ರಲ್ಲಿ ಪ್ಲಾನಿಂಗು ಅಥಾರಿಟಿ ಇರಬೇಕೆಂದು ಹೇಳಿ ಅವರಿಗೆ ಕೆಲವು ಅಧಿಕಾರಗಳನ್ನು ಕೊಡಲಾಗಿದೆ. ಇದರಿಂದ ಜನರಿಗೆ ಇಲ್ಲದ ತೊಂದರೆಗಳಾಗುತ್ತವೆ. ಜನರಿಗೆ ಇದರಿಂದ ಸೌಕರ್ಯಗಳಾಗುತ್ತವೆ ಎಂದು ಇಂತಹ ಒಂದು ಪ್ಲಾನಿಂಗು ಅಥಾರಿಟಿ ಮಾಡುವುದು ಸರ್ವಥಾ ಸರಿಯಾದುದಲ್ಲ; ಇದರಿಂದೇನಾಗುತ್ತದೆ ಎಂದರೆ ಕಾರ್ಪೊರೇಷನ್ನಿನಲ್ಲಿ ಒಂದು ಪ್ಲಾನನ್ನು ಅಪ್ರೂವ್ ಮಾಡಿಸಿಕೊಳ್ಳಬೇಕಾದರೆ ಮೊದಲು ಪ್ಲಾನಿಂಗು ಅಥಾರಿಟಿ ಆಫೀಸಿಗೆ ಬಂದು ಅಲ್ಲಿ ಕೊಡುವವರಿಗೆಲ್ಲಾ ದುಡ್ಡು ಕೊಟ್ಟು ಅಲ್ಲಿಂದ ಭಗೀರಥ ಪ್ರಯತ್ನಮಾಡಿ ಕಾರ್ಪೊರೇಷನ್ನಿಗೆ ತಂದು ಪ್ಲಾನು ಕೊಟ್ಟು ಲೈಸನ್ಸ್ ಪಡೆಯಬೇಕಾದರೆ ಜನರಿಗೆ ಬಹಳ ಕಷ್ಟಗಳಾಗುತ್ತಿವೆ. ಇದರಲ್ಲಿ ಹೇಳಿರುವ ಹಾಗೆ ಸೆಕ್ಷನ್ ಹತ್ತರಿಂದ ಹದಿನೇಳನೇ ಸೆಕ್ಷನ್‌ವರೆಗೆ ಬರೀ ಪ್ಲಾನಿಂಗು ಅಥಾರಿಟಿ ಬಗ್ಗೆ ವಿವರವಾಗಿ ಹೇಳಿದ್ದಾರೆ. ಪ್ರತಿಯೊಂದು ಸಾರಿಯೂ ಪ್ಲಾನಿಂಗು ಅಥಾರಿಟಿಯವರಿಂದ ಸರ್ಟಿಫಿಕೇಟು ತರಬೇಕೆಂದರೆ ಜನತೆಗೆ ಬಹು ಕಷ್ಟಗಳಾಗುತ್ತವೆ. ಖಂಡಿತ ಇಂತಹ ಪ್ಲಾನಿಂಗು ಅಥಾರಿಟಿ ಬೋರ್ಡು ಎಂದು ಮಾಡಿ ಜನರನ್ನು ತೊಂದರೆಗೆ ಸಿಕ್ಕಿಸಬೇಡಿ. ಪ್ಲಾನಿಂಗು ಅಥಾರಿಟಿ ಬೋರ್ಡು ಎಂದು ಮಾಡುವುದರಿಂದ ಖಂಡಿತ ಏನೂ ಪ್ರಯೋಜನವಾಗುವುದಿಲ್ಲ. ನಿಮ್ಮ ಹೇಳಿಕೆ ಪ್ರಕಾರ ಇಂತಹ ಒಂದು ಪ್ಲಾನಿಂಗು ಬೋರ್ಡು ಎಂದು ಮಾಡಿ ಇದಕ್ಕೆ ಅಧಿಕಾರಿಗಳನ್ನು ಹಾಕಿ ಇವರಿಂದ ಇಲ್ಲದ ತೊಂದರೆಗಳಿಗೆ ಬೆಂಗಳೂರಿನ ನಾಗರಿಕರನ್ನು ಏಕೆ ಗುರಿ ಮಾಡುತ್ತೀರಿ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಈಗಾಗಲೇ ಕಾರ್ಪೊರೇಷನ್‌ನಲ್ಲಿ ಇರುವ ಅಧಿಕಾರಿಗಳಿಂದಲೇ ಜನಗಳಿಗೆ ಸಾಕಷ್ಟು ತೊಂದರೆಗಳು ಆಗುತ್ತಿವೆ. ಕಾರ್ಪೊರೇಷನ್ನಿಗೆ ಮೊದಲು ಕಾಸು ಕೊಟ್ಟ ಹೊರತು ಯಾವ ಕೆಲಸವೂ ಆಗುವುದಿಲ್ಲ. ಇದರ ಜೊತೆಗೆ ಪ್ಲಾನಿಂಗು ಅಥಾರಿಟಿ ಎಂದು ಬೇರೆ ಮಾಡಿ ಅವರಿಗೂ ಅಷ್ಟು ಕಾಸು ಸಂಪಾದನೆ ಮಾಡಲು ಅವಕಾಶವನ್ನು ಏಕೆ ಮಾಡಿಕೊಡಬೇಕೆಂದು ಇಲ್ಲಿ ಕೇಳಬೇಕಾಗಿದೆ. ಪ್ಲಾನಿಂಗು ಅಥಾರಿಟಿ ಎಂದು ಮಾಡಿರುವುದನ್ನು ನಾವು ಖಂಡಿತ ಒಪ್ಪುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಒಂದು ಮನೆ ಕಟ್ಟಬೇಕಾದರೆ ಅದಕ್ಕೆ ಪ್ಲಾನು ಮಾಡಿ ಲೈಸನ್ಸ್ ಪಡೆಯಬೇಕಾದರೆ ಜನರಿಗೆ ಎಷ್ಟು ಕಷ್ಟಗಳಾಗುತ್ತಿವೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದರ ಜೊತೆಗೆ ಪ್ಲಾನಿಂಗ್ ಅಥಾರಿಟಿ ಕೈಯಲ್ಲಿ ಮೊದಲು ಒಪ್ಪಿಸಬೇಕು ಎಂದು ಮಾಡಿದರೆ ಅಲ್ಲಿರುವ ಇಂಜನಿಯರವರಿಗೆ ಮೊದಲು ಕಾಸು ಕೊಟ್ಟು ಸರಿ ಮಾಡಬೇಕು ಇದಕ್ಕೆ ಮೊದಲು ಇಲ್ಲಿರುವ ಸರ್ವೇಯರು ಹಾಗೂ

ಇನ್ನಿತರ ಅಧಿಕಾರಿಗಳಿಗೆಲ್ಲಾ ದುಡ್ಡು ಕೊಡಬೇಕು. ಇದೂ ಅಲ್ಲದೆ ಕಾರ್ಪೊರೇಷನ್ನಿಗೆ ಚದುರಗಜ ಒಂದಕ್ಕೆ ಒಂದು ರೂಪಾಯಿನಂತೆ ಬೇರೆ ದುಡ್ಡು ಕೊಡಬೇಕು. ಇದರ ಜೊತೆಗೆ ಈಗಿರುವ ಅಡ್ಮಿನಿಸ್ಟ್ರೇಟರು ಇನ್ನೊಂದು ರೂಲನ್ನು ಜಾರಿಗೆ ತಂದಿದ್ದಾರೆ. ಅದು ಮನೆ ಕಟ್ಟುವಾಗ ಹೊರಗಡೆ ಮಣ್ಣನ್ನು ಹಾಕಲು ಇಷ್ಟು ಚದುರಗಜಕ್ಕೆ ಇಷ್ಟು ದುಡ್ಡು ಕೊಡಬೇಕೆಂದು ಮೊದಲೇ ವಸೂಲು ಮಾಡುತ್ತಾರೆ. ಕೆಲವರು ಮಣ್ಣು ಹಾಕದೇ ಇದ್ದರೂ ಅವರೂ ಇಷ್ಟು ಚದುರ ಗಜಕ್ಕೆ ಮಣ್ಣು ಹಾಕಲು ನಿಯಮದ ಪ್ರಕಾರ ಕಡ್ಡಾಯವಾಗಿ ಹಣ ಕಟ್ಟಲೇಬೇಕು. ಹೀಗೆ ಜನರಿಗೆ ಇಲ್ಲದ ರೀತಿಯ ಕಿರುಕುಳಗಳು ಈಗಿರುವ ಸರ್ವಾಧಿಕಾರಿಗಳಿಂದ ಆಗುತ್ತಿದೆ. ಇದರ ಜೊತೆಗೆ ಕಾರ್ಪೊರೇಷನ್‌ನಲ್ಲಿರುವ ಓವರ್‌ಸೀರ್‌ನಿಂದ ಹಿಡಿದು, ಅಸಿಸ್ಟೆಂಟ್ ಇಂಜನಿಯರು, ಡೆಪ್ಯೂಟಿ ಚೀಫ್ ಇಂಜನಿಯರು ಇವರುಗಳಿಗೆಲ್ಲಾ ಅವರುಗಳ ಸ್ಥಾನ ಮಾನಕ್ಕೆ ತಕ್ಕಂತೆ ಮರ್ಯಾದೆ ಮಾಡದೇ ಇದ್ದರೆ ಯಾವ ಲೈಸನ್ಸ್ ಕೂಡ ಮಂಜೂರಾಗಿ ಬರುವುದೇ ಇಲ್ಲ. ಇದರ ಜೊತೆಗೆ ಪುನಃ ಪ್ಲಾನಿಂಗ್ ಅಥಾರಿಟಿ ಎಂದೇಕೆ ಬೇರೆ ಮಾಡಲು ಹೋಗುತ್ತೀರಿ! ಹಿಂದೆ ಒಂದು ಸಂದರ್ಭದಲ್ಲಿ ಒಬ್ಬರು ಬಹು ಸ್ಟ್ರಿಕ್ಟ್ ಆಗಿರುವ ಮ್ಯಾಜಿಸ್ಟ್ರೇಟರು ಇದ್ದರು. ಅವರು ಒಂದು ಸಂದರ್ಭದಲ್ಲಿ ಕೇಸು ಬಂದಾಗ ಅಡ್ಜರ್ನ್ ಮಾಡುತ್ತಾ ಹೋಗಿ ಸುಮಾರು 40 ಸಾರಿ ಒಂದು ಕೇಸನ್ನು ಅಡಜರ್ನ್ ಮಾಡಿದರು. ನಾವೂ ಕೂಡ ಸುಮಾರು 40 ಸಾರಿ ಕೋರ್ಟಿಗೆ ಬರುತ್ತಿದ್ದೆವು. ಆಗ ನಾವೇ ಈ ಮ್ಯಾಜಿಸ್ಟ್ರೇಟರನ್ನು ಹೀಗೆ ಸುಮ್ಮನೆ 40 ಸಾರಿ ಜನರನ್ನು ತಿರುಗಿಸುತ್ತಿದ್ದರೆ ಸರಿಯಾಗಿರುತ್ತದೆಯೇ ಎಂದು ಕೇಳಿದಾಗ ಅವರು ನಮ್ಮನ್ನೇ ಯಾವ ರೀತಿ ಮಾಡಬೇಕು ಎನ್ನುವುದನ್ನು ಹೇಳಿ ಎಂದು ಕೇಳಿದರು. ಅನಂತರ ಜನರಿಗೆ ಕಷ್ಟವಾಗದ ರೀತಿಯಲ್ಲಿ ಸಹಾಯ ಮಾಡಬೇಕೆಂದು ಸಲಹೆಗಳನ್ನು ಕೊಟ್ಟೆವು. ಹಾಗೆ ಇಲ್ಲಿ ಜನರಿಗೆ ಕಾರ್ಪೊರೇಷನ್‌ನಿಂದ ಆಗುವ ತೊಂದರೆಗಳಿಗಿಂತ ಪ್ಲಾನಿಂಗ್ ಅಥಾರಿಟಿ ಎಂದು ಮಾಡಿ ಅವರಿಂದ ಬೇರೆ ತೊಂದರೆಗಳನ್ನು ಜನರಿಗೆ ಮಾಡುವುದು ಖಂಡಿತ ಬೇಡ. ಇದು ಸರ್ವಥಾ ನ್ಯಾಯವಲ್ಲ. ಹಿಂದೆ ಎಲ್ಲೂ ಇಲ್ಲದಂತಹ ಔಟ್‌ಲೈನ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಈಗ ಮಾಡಬೇಕೆಂದು ತರುತ್ತಿದ್ದಾರೆ. ಹಿಂದೆ ಬೆಂಗಳೂರು ನಗರದ ಸೌಂದರ್ಯ ಕೆಟ್ಟುಹೋಗಿತ್ತು. ಈಗ ಚೆನ್ನಾಗಿ ಮಾಡಬೇಕೆಂದು ಇದಕ್ಕಾಗಿ ಒಂದು ಬೋರ್ಡನ್ನೇಕೆ ಮಾಡಬೇಕು? ನಗರದಲ್ಲಿ ಈಗ ಸುಮಾರು ಸಾವಿರಕ್ಕಿಂತ ಹೆಚ್ಚು ಸಂಘಗಳಿವೆ. ಇವನ್ನು ಸರಿಮಾಡಲು ಕಾರ್ಪೊರೇಷನ್ನಿಗೆ ಇನ್ನೂ ಆಗಲಿಲ್ಲ. ಇದೂ ಅಲ್ಲದೆ ಬೆಂಗಳೂರು ನಗರದ ಸುತ್ತ ಮುತ್ತ ಇರುವ 34 ಹಳ್ಳಿಗಳನ್ನು ಕಾರ್ಪೊರೇಷನ್ನಿಗೆ ಸೇರಿಸಿಕೊಂಡರೂ ಇದನ್ನು ಡೆವಲಪ್ ಮಾಡಲು ಇದುವರೆಗೆ ಆಗಲಿಲ್ಲ. ಇದೂ ಅಲ್ಲದೆ ಬೆಂಗಳೂರು ನಗರದ ಹೊರ ವಲಯದಲ್ಲಿ ಸುಮಾರು ಅರವತ್ತು ಸಾವಿರ ಚದುರ ಮೈಲಿ ಇದ್ದ ಹೊಲಗಳನ್ನೆಲ್ಲಾ ತೆಗೆದುಕೊಂಡು ಸೈಟು ಮಾಡಿ ಅಲ್ಲಿ ಮನೆಗಳನ್ನು ಅಕ್ರಮವಾಗಿ ಕಟ್ಟಲು ಅವಕಾಶ ಮಾಡಿಕೊಟ್ಟಿದ್ದಾರೆ. ಹೀಗೆ ಅಕ್ರಮವಾಗಿ ಸುಮಾರು 50 ಸಾವಿರ ಮನೆಗಳು ಆಗಿವೆ. ಇದೂ ಅಲ್ಲದೆ ನಗರದಲ್ಲಿ ಇನ್ನೂ ನೂರಾರು ಸ್ಲಂ ಏರಿಯಾಗಳು ಬೇರೆ ಇವೆ. ಆಗ ಇಂತಹ ಅಕ್ರಮವಾದ ಮನೆಗಳನ್ನು ಕಟ್ಟಿದಾಗ ಅಲ್ಲಿಗೆ ಬಂದ ಶೇಕದಾರರುಗಳಿಗೆ ಟಿ.ಟಿ. ಫೈನ್ ಎಂದು 25 ರೂಪಾಯಿಗಳು ಕೊಟ್ಟು ಇದಾದ ಮೇಲೆ ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ತನಿಖೆ ಮಾಡಲು ಬಂದ ಇಲಾಖೆಯವರಿಗೆ 50 ರೂಪಾಯಿ ಕೊಟ್ಟು ಆಮೇಲೆ 60 ರೂಪಾಯಿಗಳ ಕಂದಾಯ ಎಂದು ಬೇರೆ ಕೊಟ್ಟಿದ್ದಾರೆ. ಹೀಗೆ ನಗರದ ಸುತ್ತ ಮುತ್ತಲೂ ಸುಮಾರು ನಲವತ್ತು ಸಾವಿರ ಮನೆಗಳು ಅನ್‌ಆಥರೈಸ್ಡ್ ಆಗಿ ಕಟ್ಟಿರುವುದನ್ನು ಹಿಂದೆ ರೆಗ್ಯುಲರೈಸ್ ಮಾಡಿ ಇವನ್ನೆಲ್ಲಾ ಸರಿಮಾಡಬೇಕೆಂದು ಆಗಿತ್ತು. ಮತ್ತು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 40 ಲಕ್ಷ ರೂಪಾಯಿಗಳನ್ನು ಸ್ಲಂ ಕ್ಲಿಯರೆನ್ಸ್‌ಗಾಗಿ ಇಟ್ಟಿದ್ದರೂ ಇದುವರೆಗೆ ಖರ್ಚು ಮಾಡದೇ ಇದನ್ನು ಲ್ಯಾಪ್ಸ್ ಮಾಡಿರುತ್ತಾರೆ. ಹೀಗಾದರೆ ಸ್ಲಂಗಳನ್ನು ಕ್ಲಿಯರ್ ಮಾಡಿದಂತಾಗುತ್ತದೆಯೆ! ಇದರ ಜೊತೆಗೆ ಔಟ್‌ಲೈನ್ ಪ್ಲಾನಿಂಗ್ ಅಥಾರಿಟಿ ಬೋರ್ಡು ಎಂದು ಮಾಡಿ-ಇದಕ್ಕಾಗಿ 7-8 ಲಕ್ಷ ರೂಪಾಯಿಗಳನ್ನು ಅನ್ಯಾಯವಾಗಿ ಏಕೆ ಖರ್ಚು ಮಾಡಬೇಕು ಎಂದು ಕೇಳುತ್ತೇನೆ! ಇವರಿಂದ ಕಾಲು ಭಾಗದಷ್ಟು ಸ್ಲಂಸ್ ಕ್ಲಿಯರು ಮಾಡುವುದಕ್ಕೂ ಕೂಡ ಇದುವರೆಗೆ ಆಗಲಿಲ್ಲ. ಇದರ ಜೊತೆಗೆ ಇನ್ನೊಂದು ಏನಾಗಿದೆ ಎಂದು ಹಿಂದೆ ರೆವೆನ್ಯೂ ನಿವೇಶನಗಳಲ್ಲಿ ಕೆಲವರು ಅನ್ ಆಥಾರೈಸ್ಡ್ ಆಗಿ ಮನೆಗಳನ್ನು ಕಟ್ಟಿಕೊಂಡು ಇರುವುದನ್ನು ರೆಗ್ಯುಲರೈಸ್ ಮಾಡಿದ ಮೇಲೆ ಕೆಲವರು ರೋಡಿನ ಪಕ್ಕದಲ್ಲಿ ಖಾಲಿ ಸೈಟು ಇಟ್ಟುಕೊಂಡು ಈಗ ಅಲ್ಲಿ ಮನೆ ಕಟ್ಟಬೇಕು ಎಂದು ಬಂದರೆ ಅಂತಹವರನ್ನು ಕಾರ್ಪೊರೇಷನ್‌ನವರು 15 ಅಡಿ ಜಾಗವನ್ನು ಒಳಕ್ಕೆ ತಳ್ಳಿ ಮನೆ ಕಟ್ಟಬೇಕೆಂದು ಹೆದರಿಸುತ್ತಾರೆ. ಹಿಂದೆ ಕಟ್ಟಿರುವ ಮನೆಗಳ ಸಾಲಿನಲ್ಲಿ ಕಟ್ಟಲು ಅವರಿಗೆ ಅವಕಾಶ ಕೊಡುತ್ತಿಲ್ಲ. ಹೀಗೆಲ್ಲಾ ಇಲ್ಲದ ತೊಂದರೆಗಳು ಪ್ಲಾನಿಂಗ್ ಅಥಾರಿಟಿ ಬೋರ್ಡಿನಿಂದ ಆಗುತ್ತವೆ. ಇದೂ ಅಲ್ಲದೆ ಕೆಲವು ಜನರಿಗೆ ಅನುಕೂಲವಾಗುವಂತೆ ನಗರದ ಹೊರಗಡೆ ಇರುವ ಮನೆಗಳ ಜನರ ಅನುಕೂಲಕ್ಕಾಗಿ ಒಂದು ಬ್ರೆಡ್ ಅಂಗಡಿ, ಇಲ್ಲವೇ, ಒಂದು ಷೇವಿಂಗ್ ಸೆಲೂನು,

(ಶ್ರೀ ಟಿ. ಆರ್. ಶಾಮಣ್ಣ)

ಇಲ್ಲವೇ ಒಂದು ಗ್ರೈಂಡಿಂಗ್ ಮಿಲ್ ಇತ್ಯಾದಿಗಳಿಗೆ ಲೈಸನ್ಸ್ ಬೇಕು ಎಂದು ಕಾರ್ಪೊರೇಷನ್ ಜನ ಬಂದರೆ ಅವರಿಗೆ ಲೈಸನ್ಸ್ ಕೊಡದೇ ಇಲ್ಲದ ತೊಂದರೆಗಳಿಗೆ ಅವಕಾಶ ಮಾಡಿಕೊಡುತ್ತಿದ್ದಾರೆ. ಕಾರ್ಪೊರೇಷನ್‌ನವರಿಗೆ ದುಡ್ಡು ಕೊಟ್ಟು ಯಾರಾದರೂ ಬಂದು ಒಂದು ಫ್ಯಾಕ್ಟರಿ ಮಾಡುತ್ತೇವೆಂದು ಬಂದರೆ ಅವರಿಗೆ ಲೈಸೆನ್ಸ್ ಕೊಟ್ಟು, ರಾತ್ರೋರಾತ್ರಿ ಅಲ್ಲಿ ಫ್ಯಾಕ್ಟರಿ ಮಾಡಲು ಕಟ್ಟಡಗಳನ್ನು ಕಟ್ಟಿಸಲು ಅವಕಾಶ ಮಾಡಿಕೊಡುತ್ತಾರೆ. ಜನತೆಗೆ ಸೌಕರ್ಯಗಳು ಊರ ಹೊರಗಡೆ ಇರುವವರಿಗೆ ಸಿಗಬೇಕು ಎಂದು ಅವರಿಗೆ ದಿನ ನಿತ್ಯ ಬೇಕಾಗುವಂತಹ ಗ್ರೈಂಡಿಂಗ್ ಮಿಲ್ ಇತ್ಯಾದಿಗಳಿಗೆ ಲೈಸನ್ಸ್ ಕೇಳಿದರೆ ಅದನ್ನು ಕೊಡದೇ ಇಲ್ಲದ ತೊಂದರೆಗಳಿಗೆ ಜನರನ್ನು ಗುರಿ ಮಾಡುವುದು ಖಂಡಿತ ನ್ಯಾಯವಾದುದಲ್ಲ. ಒಂದಕ್ಕೆ ರೆಸಿಡೆನ್ಷಿಯಲ್ ಏರಿಯಾ ಎಂದು ಹೇಳುವುದು ಇನ್ನೊಂದಕ್ಕೆ ನಾನ್‌ರೆಸಿಡೆನ್ಷಿಯಲ್ ಏರಿಯಾ ಎಂದು ಹೇಳಿ ಜನರಿಗೆ ಇಲ್ಲದ ತೊಂದರೆಗಳನ್ನು ಕೊಡುವುದು ಸರಿಯಲ್ಲ. ಆದಷ್ಟು ಕಾರ್ಪೊರೇಷನ್‌ನವರು ನಗರದ ಜನತೆಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡಬೇಕು; ಮತ್ತು ಔಟ್‌ಲೈನ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡುವಾಗ ಜನರಿಂದ ಇದರ ಬಗ್ಗೆ ಅಬ್‌ಜಕ್ಷನ್‌ಗಳನ್ನು ಕೇಳಿದ್ದರು. ನಾನು ಅಬ್‌ಜಕ್ಷನ್‌ಗಳನ್ನು ಸುಮಾರು 20 ಪುಟಗಳಷ್ಟು ಬರೆದು ಕಳುಹಿಸಿದ್ದೆ. ಆದರೆ ಜನರಿಂದ ಬಂದ ಯಾವ ತಕರಾರುಗಳನ್ನೂ ಕೂಡ ಕೇಳದೆ ತಮಗೆ ಇಷ್ಟಬಂದ ರೀತಿಯಲ್ಲಿ ಮಾಡಬಹುದು ಎಂದು ಇಲ್ಲಿ ಪ್ಲಾನಿಂಗ್ ಅಥಾರಿಟಿ ಬೋರ್ಡ್ ಎಂದು ಮಾಡಿದರೆ ಇದಕ್ಕೆ ಜನತೆಯಿಂದ ಬೆಲೆ ದೊರಕುತ್ತದೆಯೆ? ನಾಗರೀಕರು ಇಂತಹ ಒಂದು ಬೋರ್ಡಿನ ಅಗತ್ಯವೇ ಇಲ್ಲ, ಎಂದು ಹೇಳುತ್ತಾ ಬಂದಿದ್ದರೂ ಸರಕಾರ ಜನರ ಕೋರಿಕೆಯನ್ನು ಮನ್ನಿಸದೇ ಈಗ ಇರುವ ಕಾರ್ಪೊರೇಷನ್‌ನಲ್ಲಿರುವ ಸರ್ವಾಧಿಕಾರಿಗಳು ಇದನ್ನು ಮಾಡಿದ್ದಾರೆ. ಇದು ಖಂಡಿತ ಜನರ ಅನುಕೂಲಕ್ಕೆ ಸರಿಹೊಂದುವುದಿಲ್ಲ. ಇಂತಹ ಒಂದು ಔಟ್‌ಲೈನ್ ಪ್ಲಾನಿಂಗ್ ಅಥಾರಿಟಿ ಬೋರ್ಡ್ ಎಂದು ಕಾರ್ಪೊರೇಷನ್‌ನಲ್ಲಿ ಇರುವಾಗ, ಇದನ್ನು ಬೇರೆ ಮಾಡುವ ಅವಶ್ಯಕತೆ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವರಲ್ಲಿ ಸಂಬಂಧಪಟ್ಟ ಮಂತ್ರಿಗಳು ಚುನಾವಣೆಗಳಿಗೆ ಬೇಕಾದ ಕೆಲವು ತಿದ್ದುಪಡಿಗಳನ್ನು ತಂದಿದ್ದೇನೆ ಎಂದು ಹೇಳಿದ್ದಾರೆ. ಅವನ್ನು ಮಾತ್ರ ಇಲ್ಲಿ ಒಪ್ಪಿಕೊಂಡು ಇತರ ಮುಖ್ಯ ವಿಚಾರಗಳನ್ನು ಸರಿಯಾಗಿ ಚರ್ಚೆ ಮಾಡಲು ಅನುಕೂಲವಾಗುವಂತೆ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿ ಅದಕ್ಕೆ ಒಪ್ಪಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದರಲ್ಲಿ ನಗರದ ಎಲ್ಲಾ ಎಂ. ಎಲ್. ಎ. ಗಳು ಹಾಗೂ ಎಂ. ಎಲ್. ಸಿ. ಗಳೂ ಇರುವಂತೆ ಮಾಡಬೇಕೆಂದು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ಆಗ ಇದನ್ನು ಕೂಲಂಕಷವಾಗಿ ವಿಚಾರ ಮಾಡಲು ಅನುಕೂಲವಾಗುತ್ತದೆ. ಬೇಕಾದರೆ ಎಲಕ್ಷನ್‌ಗೆ ಬೇಕಾಗುವಷ್ಟು ಮಟ್ಟಿಗೆ ಇಲ್ಲಿರುವ ಬಿಲ್ಲನ್ನು ತಿದ್ದುಪಡಿ ಮಾಡಿ ಪಾಸು ಮಾಡಲಿ. ಇತರ ವಿಚಾರಗಳನ್ನು ವಿವರವಾಗಿ ಪರಿಶೀಲಿಸಲು ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದರಲ್ಲಿ ಎಲ್ಲ ಪ್ರತಿನಿಧಿಗಳೂ ಕುಳಿತು ವಿಚಾರ ವಿನಿಮಯ ಮಾಡಿ ಒಂದು ಸಮಗ್ರವಾದ ಮಸೂದೆ ತರಲು ಅನುಕೂಲವಾಗುತ್ತದೆ. ಹಿಂದೆ ಕೂಡ ಇದೇ ಅಸೆಂಬ್ಲಿಯಲ್ಲಿ ಒಂದು ಕಾರ್ಪೊರೇಷನ್ ಅಮೆಂಡಿಂಗ್ ಬಿಲ್ ತಂದು ಇಂಟ್ರಡ್ಯೂಸ್ ಮಾಡಿದ್ದರು. ಇದನ್ನು ಮೊದಲು ಲೆಜಿಸ್ಲೇಟೀವ್ ಕೌನ್ಸಿಲ್‌ನಲ್ಲಿ ಇಂಟ್ರಡ್ಯೂಸ್ ಮಾಡಿ ಪಾಸು ಮಾಡಿದ್ದರು. ಆದರೆ ಈ ಬಿಲ್ಲಿನಲ್ಲಿ ಅನೇಕ ಲೋಪ ದೋಷಗಳಿವೆ ಎಂದು ಇಲ್ಲಿನ ಮಾನ್ಯ ಸದಸ್ಯರಾದ ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಸರಕಾರಕ್ಕೆ ತೋರಿಸಿದಾಗ ಈ ಬಿಲ್ಲನ್ನು ಇಲ್ಲಿ ತರದೇ ಅದನ್ನು ಹಾಗೇ ಬಿಟ್ಟರು. ಈಗ ವರ್ಷ ವರ್ಷವೂ ಒಂದೊಂದು ಅಮೆಂಡ್‌ಮೆಂಟ್ ಬಿಲ್ ಎಂದು ಇಲ್ಲಿ ಬರುತ್ತಲೇ ಇದೆ. ಇದರಿಂದ ಜನರಿಗೆ ಏನೂ ಅನುಕೂಲಗಳು ಆಗುತ್ತಿಲ್ಲ. ಈಗ ಚುನಾವಣೆಗಳು ಆಗಬೇಕಾಗಿದೆ, ಇದಕ್ಕೆ ತೊಂದರೆಗಳಿವೆ ಎಂದು ಇಲ್ಲಿ ಹೇಳುತ್ತಾರೆ. ಇದಕ್ಕಾಗಿ ಎಲೆಕ್ಷನ್ ಬಗ್ಗೆ ಮಾತ್ರ ಈ ಬಿಲ್ ಪಾಸು ಮಾಡಿಕೊಂಡು ಇನ್ನಿತರ ಮುಖ್ಯ ವಿಚಾರಗಳ ಬಗ್ಗೆ ನಗರದ ಚುನಾವಣೆಗಳಾದ ಮೇಲೆ ನಗರ ಪಿತೃಗಳ ಅಭಿಪ್ರಾಯಗಳನ್ನು ತೆಗೆದುಕೊಂಡು ಒಂದು ಸರಿಯಾದ ಬಿಲ್ ಆಗಲು ಅನುಕೂಲ ಮಾಡಬೇಕು. ಈಗ ತಂದಿರುವ ಬಿಲ್ಲನ್ನು ನಾವು ಖಂಡಿತ ಒಪ್ಪಿಕೊಳ್ಳಲು ಅವಕಾಶವಿಲ್ಲ. ಇದರ ಬಗ್ಗೆ ನಾನು ಕೆಲವು ಅಮೆಂಡ್‌ಮೆಂಟುಗಳನ್ನು ಕೂಡ ಕಳುಹಿಸಿದ್ದೇನೆ. ಅವುಗಳನ್ನು ಮುಂದೆ ನಾನು ಸಭೆಯ ಮುಂದೆ ಮಂಡಿಸುವಾಗ ಮಾತನಾಡುತ್ತೇನೆ. ಆಗ ಅವನ್ನು ಸರಕಾರ ಒಪ್ಪಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಇಲ್ಲಿಯವರೆಗೂ ನಾನು ಹೇಳಬೇಕಾದುದೆಲ್ಲವನ್ನೂ ಸೂಕ್ಷ್ಮವಾಗಿ ಹೇಳಿದ್ದೇನೆ. ಒಂದು ವಿಚಾರವನ್ನು ಮರೆತಿದ್ದೆ. ಈಗ 28 ಅಂತಸ್ತಿನ ಕಟ್ಟಡವನ್ನು ಕಟ್ಟುವುದಕ್ಕೆ ಹೊರಟಿದ್ದಾರೆ. ಷೆಡ್ಯೂಲ್ಡ್ ರೇಟಿಗಿಂತ 38 ಪರ್ಸೆಂಟ್ ಜಾಸ್ತಿ ಕೊಟ್ಟಿದ್ದಾರೆ. 1 ಕೋಟಿ ರೂಪಾಯಿ ಅಂದಾಜಿನ ಕಟ್ಟಡ 2 ಕೋಟಿಗೆ ಹೋಗಬಹುದು. ಅಷ್ಟು ಹಣಕ್ಕೆ 6 ಪರ್ಸೆಂಟ್ ಪ್ರಕಾರ ಬಡ್ಡಿ ಮತ್ತು ಮೈಂಟ್‌-

ನೆನ್ಸ್ ವೆಚ್ಚ ಎಲ್ಲವೂ 20 ಲಕ್ಷಕ್ಕೆ ಬರುತ್ತದೆ. ಅಷ್ಟು ಉತ್ಪತ್ತಿ ಅದರಿಂದ ಬರುವುದಿಲ್ಲ. ಜಯನಗರ ದಲ್ಲಿ ಬೇರೆ 1 ಕೋಟಿ ರೂ. ಗಳ ಒಂದು ಆಸ್ಪತ್ರೆಯನ್ನು ಕಟ್ಟುವುದಕ್ಕೆ ಹೊರಟಿದ್ದಾರೆ. ಜನಸಂದಣಿ ಇರುವ ಕಡೆ ಮಾಡುವುದಿಲ್ಲ. ಇಂಥ ಕೆಲಸಗಳೆಲ್ಲ ಅಕ್ರಮ. ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ದಯವಿಟ್ಟು ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂದು ಮತ್ತೊಮ್ಮೆ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[MR. SPEAKER in the Chair]

†ಶ್ರೀ ಬಿ. ನಂಜಪ್ಪ (ಶಾಂತಿನಗರ).—ಸ್ವಾಮಿ, ಸರ್ಕಾರದವರು ಸಭೆಯ ಮುಂದೆ ಮಂಡಿಸಿರತಕ್ಕ ಈ ಕಾರ್ಪೊರೇಷನ್ ಅಮೆಂಡ್‌ಮೆಂಟ್ ಬಿಲ್ಲನ್ನು ನಾನು ಅನುಮೋದಿಸುತ್ತೇನೆ. ಇದನ್ನು ನಿಜವಾಗಿಯೂ ಇನ್ನೂ ಮೊದಲೇ ತರಬೇಕಾಗಿತ್ತು. ಕಾರಣಾಂತರಗಳಿಂದ ತರುವುದ ಕ್ಕಾಗಲಿಲ್ಲ. ಈಗಾಗಲೇ ಶ್ರೀ ಶಾಮಣ್ಣನವರು ತಮ್ಮ ಹೊಟ್ಟೆಯಲ್ಲಿದ್ದುದನ್ನೆಲ್ಲಾ ಹೊರಗೆಡ ವಿದ್ದಾರೆ. ಆದರೆ ಅವರು ಒಂದು ವಿಷಯವನ್ನು ಮಾತ್ರ ಬಿಟ್ಟು ಉಳಿದುದನ್ನೆಲ್ಲಾ ಹೇಳಿದ್ದಾರೆ. ಅವರೂ ನಾವೂ ಎಲ್ಲರೂ ಮೊದಲು ಒಂದೇ ಗುಂಪಿನಲ್ಲಿದ್ದವರು. ಆಗ ಅವರು ಫೈನಾನ್ಸ್ ಕಮಿಟಿಗೆ ಛೇರ್ಮನ್ ಆಗಿದ್ದರು. ಒಂದು ಕಾಸೂ ಬಾಕಿ ನಿಲ್ಲುವುದಕ್ಕೆ ಇವರು ಅವಕಾಶ ಕೊಡುತ್ತಿರಲಿಲ್ಲ. ಹಾಗೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಆದರೆ ಇವರು ನಮ್ಮ ಬೆಂಗಳೂರು ನಗರ ಕಾರ್ಪೊರೇಷನನ್ನು ಸರ್ಕಾರದವರು ಸೂಪರ್‌ಸೀಡ್ ಮಾಡಿದರೆಂದು ಪದೇ ಪದೇ ಹೇಳುತ್ತಲೇ ಇದ್ದಾರೆ. ಅದು ಸರಿಯಲ್ಲ ಎಂದು ನಾನು ಪದೇ ಪದೇ ಉತ್ತರ ಹೇಳುತ್ತಲೇ ಬಂದಿದ್ದೇನೆ. ಅದನ್ನು ರದ್ದು ಮಾಡುವುದಕ್ಕೆ ಸರ್ಕಾರದವರು ಕಾರಣರಲ್ಲ—ಅದಕ್ಕೆ ಜನರಿಂದ ಆರಿಸಿ ಬಂದ ಕಾರ್ಪೊರೇಟರುಗಳೇ ಕಾರಣ ಎಂದು ನಾನು ಹೇಳುತ್ತೇನೆ. ನಾವು ಜನರಿಂದ ಆರಿಸಿ ಬಂದಮೇಲೆ ಅವರ ಯೋಗಕ್ಷೇಮಗಳನ್ನು ನಾವು ಕಾನೂನಿಗೆ ಮೀರದಂತೆ ಪಾಲಿಸಿಕೊಂಡು ಬರಬೇಕಾದ್ದು ಅಲ್ಲಿನ ಸದಸ್ಯರಾದ ನಮ್ಮಗಳ ಕರ್ತವ್ಯ. ಇದನ್ನು ಸೂಪರ್‌ಸೀಡ್ ಮಾಡುವುದಕ್ಕೆ ಮುನ್ನ ಅಲ್ಲಿ ರೂಲಿಂಗ್ ಪಾರ್ಟಿಗೆ ಸೇರಿದ ನಮ್ಮ ಪಕ್ಷದವರು 24 ಜನ ಸದಸ್ಯರಿದ್ದೆವು. ಪೌರ ಸಮಿತಿಯ ಪರವಾಗಿ ಆರಿಸಿ ಬಂದಿದ್ದ ಸದಸ್ಯರ ಸಂಖ್ಯೆ 39. ಬಹುಮತವಿಲ್ಲದ್ದ ಪಕ್ಷದವರು ಒಂದು ವರ್ಷ ಕೂಡ ಅಲ್ಲಿ ಸರಿಯಾಗಿ ಆಡಳಿತವನ್ನು ನಡೆಸಲಿಲ್ಲ. ಆ ಗಡಿಬಿಡಿಯಿಂದ ಬೆಂಗಳೂರು ನಾಗರೀಕರಿಗೆ ತೊಂದರೆ ಆಯಿತು. ಸರ್ಕಾರಕ್ಕೇನೂ ತೊಂದರೆ ಆಗಲಿಲ್ಲ. ಈಗ ಕಾರ್ಪೊರೇಷನ್ ಆಫೀಸಿಗೆ ತುಂಬಾ ಅಧಿಕಾರಿಗಳನ್ನು ತಂದು ತುಂಬಿದ್ದಾರೆ. ಎಲ್ಲಿ ಯಾವ ಟೇಬಲ್‌ಗೆ ಹೋಗಲಿ ಲಂಚವಿಲ್ಲದೆ ಕೆಲಸವಾಗುವುದಿಲ್ಲ. ಹಾಗೇನಾದರೂ ಬಡವರಿಗೆ ಅನುಕೂಲ ಆಗಬೇಕಾಗಿದ್ದರೆ ದೊಡ್ಡವರೇ ಯಾರಾದರೂ ಶಿಫಾರ್ಸು ಮಾಡಬೇಕು, ಇಲ್ಲವೇ ಮಂತ್ರಿಗಳೇ ಶಿಫಾರ್ಸು ಮಾಡಬೇಕು. ಇಲ್ಲವಿದ್ದರೆ ಲಂಚ ಕೊಡಬೇಕು. ದುಡ್ಡಿಲ್ಲದೆ ಬಡವರ ಕೆಲಸ ಆಗುವಹಾಗೆ ಇಲ್ಲ. ಅಲ್ಲಿ ಈಗ ಬಹಳ ಅನ್ಯಾಯಗಳು ನಡೆಯುತ್ತಿವೆ. ಅದಕ್ಕಾಗಿ ಒಂದು ಕನ್ಸಲ್‌ಟೇಟಿವ್ ಕಮಿಟಿಯನ್ನು ಮಾಡಿ ಎಂದು ಒಂದು ಸಲಹೆ ಮಾಡಿದೆ. ಅದನ್ನೂ ಮಾಡಲಿಲ್ಲ. ಹಿಂದೆ ಶ್ರೀ ಆರ್. ಎಂ. ಪಾಟೀಲರಿ ದ್ದಾಗ ಹೇಳಿದ್ದೆ. ಅವರು ಇಂಥ ಕಮಿಟಿಯನ್ನು ಮಾಡಿದ್ದರು. ನೀರಿನ ತೊಂದರೆ ಬಗ್ಗೆ ಒಂದು ವಾಟರ್ ಸಪ್ಲೈ ಬೋರ್ಡನ್ನು ಮಾಡಿದ್ದರು. ಅವುಗಳೊಂದೂ ಇಲ್ಲ. ಈ ತಿದ್ದುಪಡಿಯಲ್ಲಿ ಚುನಾವಣೆಯದು ಒಂದನ್ನು ಒಪ್ಪುತ್ತೇನೆ. ಬಾಕಿ ತಿದ್ದುಪಡಿಗಳನ್ನು ಒಪ್ಪುವುದಿಲ್ಲ.

ನಾವು ಇಲ್ಲಿ ಒಂದು ಲಕ್ಷದ ಜನರ ಪ್ರತಿನಿಧಿಗಳಾಗಿ ಬಂದು ಹೇಳುತ್ತಿದ್ದೇವೆ. ಈ ವಿಚಾರವನ್ನು ಮಿನಿಸ್ಟರ್ ಛೇಂಬರ್‌ನಲ್ಲೂ ಹೇಳಿದ್ದೇವೆ. ತಮಗೂ ಕೂಡ ಪ್ರೋಗ್ರಾಂ ಆಫ್ ವರ್ಕ್ಸ್ ಕಳುಹಿ ಸಿದ್ದೇವೆ. ನಾವು ಇದ್ದಾಗ ಪ್ರೋಗ್ರಾಂ ಆಫ್ ವರ್ಕ್ಸ್ ಹಾಕಿಕೊಂಡು ಜನಗಳು ಏನು ಏನು ಕೆಲಸ ಆಗಬೇಕು ಎಂದು ಹೇಳುತ್ತಾರೋ ಅದರಂತೆ ಮಾಡುವುದನ್ನು ನಾವು ನೋಡುತ್ತಾ ಇದ್ದೆವು. ಅದನ್ನು ವರ್ಕ್ಸ್ ಕಮಿಟಿಯವರು ಪರಿಶೀಲನೆ ಮಾಡುತ್ತಾ ಇದ್ದರು. ಈಗ ಅಸಿಸ್ಟೆಂಟ್ ಇಂಜನಿಯರು, ಓವರ್‌ಸಿಯರ್ ಯಾವ ಯಾವ ಕೆಲಸ ಮಾಡಬೇಕು ಎಂದು ಹೇಳುತ್ತಾರೋ ಆ ರೀತಿ ಮಾಡುತ್ತಿದ್ದಾರೆ. 2—3 ವರ್ಷದಿಂದ ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೋ ಅದನ್ನೂ ನೋಡಿ. ಕೌನ್ಸಿಲರುಗಳು ಇದ್ದಾಗ ಚೆನ್ನಾಗಿ ಕೆಲಸ ಮಾಡಿದರೇ, ಅಥವಾ ಅಧಿಕಾರಿಗಳು ಬಂದ ಮೇಲೆ ಚೆನ್ನಾಗಿ ಕೆಲಸ ಮಾಡಿದರೇ! ಈಗ ಕೆಲವು ಸರ್ಕಲ್‌ಗಳಲ್ಲಿ ಸಿಮೆಂಟ್ ಕಾಂಕ್ರೀಟ್ ಕೆಲಸ ಮಾಡುತ್ತಾ ಇದ್ದೇವೆ ಎಂದು ಹೇಳುತ್ತಾರೆ. ಈ ಕೆಲಸ ಅಧಿಕಾರಿಗಳು ಬಂದಮೇಲೆ ಆದದ್ದಲ್ಲ. ಆಗಲೇ ಆಗಿದ್ದಿತು. ಈವೊತ್ತಿನ ದಿವಸ ಬಡವರು ಇರತಕ್ಕಂಥ ಕಡೆ ಏನಾದರೂ ಕೆಲಸ ಮಾಡುತ್ತಿ ದ್ದಾರೆಯೇ ಎಂದು ನಾನು ಕೇಳುತ್ತೇನೆ. ಈಗ ಕೆಲವು ಕಡೆ ಹೊಸದಾಗಿ ಲೇಔಟ್ ಆಗಿವೆ.

(ಶ್ರೀ ಬಿ. ನಂಜಪ್ಪ)

ಎಲ್ಲೆಲ್ಲಿ ಹೊಸದಾಗಿರುವ ಲೇಔಟ್‌ಗಳಲ್ಲಿ ಕಾರ್ಪೊರೇಷನ್ ಅಧಿಕಾರಿಗಳು ಇದ್ದಾರೆ ಅಲ್ಲಿಗೆ ನಗರದ ದುಡ್ಡನ್ನು ಸುರಿಯುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ಸಿಟಿಯಿಂದ, ಕಂಟೋನ್ಮೆಂಟ್‌ನಿಂದ ವಸೂಲಾಗತಕ್ಕಂಥ ದುಡ್ಡನ್ನು ಕಾರ್ಪೊರೇಷನ್ ಆಫೀಸರುಗಳಿರುವ ಜಯನಗರದ ಹೊಸ ಬಡಾವಣೆಗೆ ಸುರಿಯುತ್ತಿದ್ದಾರೆ. ಇವರು ಏನು ಅನ್ಯಾಯ ಮಾಡುತ್ತಿದ್ದಾರೆ ಅನ್ನುವುದನ್ನು ನಾನು ಅನೇಕ ಸಾರಿ ಹೇಳಿದ್ದೇನೆ. ನಮ್ಮ ಬಿ. ಎಂ. ಪಾಟೀಲರವರು ಪುಣ್ಯಾತ್ಮ ಬಂದ ಮೇಲೆ, ಕೆಲವು ಕ್ಷೇತ್ರದಲ್ಲಿ ಸ್ವಲ್ಪ ಕೆಲಸಗಳನ್ನು ಮಾಡಿಸಿಕೊಟ್ಟಿದ್ದಾರೆ. ಅವರೇನೋ ಒಳ್ಳೆಯವರು ಮತ್ತು ದಕ್ಷರು. ಆದರೂ ಕೂಡ ಅಧಿಕಾರಿಗಳು ಅಂತಹವರ ಮಾತನ್ನೂ ಕೇಳುವುದಿಲ್ಲ. ಈವೊತ್ತಿನ ದಿವಸ ಇಲ್ಲಿ ಕಾನೂನುಗಳನ್ನು ಮಾಡಿ ಹೆಚ್ಚು ಅಧಿಕಾರವನ್ನು ಅಧಿಕಾರಿಗಳ ಕೈಯಲ್ಲಿ ಕೊಟ್ಟರೆ ನಾವು ಬಹಳ ಲೋಪ ಮಾಡಿದಂತಾಗುತ್ತದೆ. ಈವೊತ್ತಿನ ದಿವಸ ನಾನು ಹೇಳುವುದು ಎಲೆಕ್ಷನ್ ಜನಗಳಿಂದ ಓಟು ತೆಗೆದುಕೊಂಡು ಪ್ರತಿನಿಧಿಗಳು ಬರಲಿ, ಆಮೇಲೆ ಗೌರ್ನಮೆಂಟಿಗೆ ಸಲಹೆ ಕೊಡಲಿ. ಅವೊತ್ತಿನ ದಿವಸ ಅಂತಹ ಅಮೆಂಡ್‌ಮೆಂಟ್ಸ್ ಏನು ಇವೆಯೋ ನೋಡೋಣ. ಅಧಿಕಾರಿಗಳೂ ಕೂಡ ಈವೊತ್ತು ಇರಬಹುದು, ನಾಳೆ ಬೇರೆ ಬರಬಹುದು. ಅದೇ ರೀತಿ ನಾವೂ ಸಹ ಈವೊತ್ತು ಬರಬಹುದು, ನಾಳೆ ಬೇರೆಯವರು ಬರಬಹುದು. ಈವೊತ್ತಿನ ದಿವಸ ಒಂದು ಪ್ಲಾನ್ ತೆಗೆದುಕೊಳ್ಳಬೇಕಾದರೆ ಟೌನ್ ಪ್ಲಾನಿಂಗ್ ಕಮಿಟಿಗೆ ಹೋಗಿ ಅಲ್ಲಿ ತೆಗೆದುಕೊಂಡು ಬಾ ಎನ್ನುತ್ತಾರೆ. ಅವರ ಹತ್ತಿರ ನಾವು ಹೋಗಬೇಕಾಗಿದೆ. ಕಾರ್ಪೊರೇಷನ್‌ನಲ್ಲಿ ಫೈನಾನ್ಸ್ ಕಮಿಟಿ, ವರ್ಕ್ಸ್ ಕಮಿಟಿ, ಪ್ಲಾನಿಂಗ್ ಕಮಿಟಿ–ಈರೀತಿ ಬೇಕಾದಷ್ಟು ಕಮಿಟಿಗಳು ಇವೆ. ಕಾರ್ಪೊರೇಷನ್‌ನಲ್ಲಿ 63 ಜನ ಪ್ರತಿನಿಧಿಗಳು ಕೂತುಕೊಂಡು ಇದನ್ನು ತೀರ್ಮಾನ ಮಾಡುತ್ತಾ ಇದ್ದರು ಈವೊತ್ತಿನ ದಿವಸ ಪ್ಲಾನ್‌ಗಳಿಗೆ ಲೈಸನ್ಸ್ ಕೊಡಬೇಕಾದರೆ ಟೌನ್ ಪ್ಲಾನಿಂಗ್ ಕಮಿಟಿಯವರ ಸರ್ಟಿಫೈ ಮಾಡಬೇಕಾಗಿದೆ. ಈ ಪ್ರಜಾಪ್ರಭುತ್ವದಲ್ಲಿ ಗೌರ್ನಮೆಂಟ್‌ನವರು ಈ ರೀತಿ ಮಾಡಿ ಎಂದು ಸಲಹೆ ಕೊಟ್ಟಿದ್ದಾರೆ. ಈಗ ಟ್ರಸ್ಟ್ ಬೋರ್ಡ್‌ನಿಂದ ಮನೆಗಳನ್ನು ಕಟ್ಟಿಕೊಳ್ಳಲು ಸೈಟುಗಳನ್ನು ಕೊಡುತ್ತಾರೆ ಮತ್ತು ಹೌಸಿಂಗ್ ಬೋರ್ಡ್‌ನಿಂದ ಮನೆಗಳನ್ನು ಕಟ್ಟಿಕೊಳ್ಳಲು ಲೋನ್ ಕೊಡುತ್ತಿದ್ದಾರೆ. ಈ ರೀತಿಯಾಗಿ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಈಗ ಬೆಂಗಳೂರಿನಲ್ಲಿರುವ ಮನೆಗಳಿಗೆ ಅಧಿಕಾರಿಗಳು ಸರಿಯಾಗಿ ಅಸೆಸ್ ಮಾಡಿದ್ದರೆ ಕಾರ್ಪೊರೇಷನ್ನಿಗೆ ಬೇಕಾದಷ್ಟು ದುಡ್ಡು ಬರುತ್ತಿತ್ತು. ನಾನು ಬಡ್ಜೆಟ್‌ನಲ್ಲಿ ಎಷ್ಟೋ ಸಲ ಮಾತನಾಡಿದ್ದೇನೆ. ಇದಕ್ಕೆ ಒಂದು ಕಮಿಟಿ ಮಾಡಿ, ಒಳ್ಳೆಯ ಅಧಿಕಾರಿಗಳನ್ನು ಹಾಕಿ, ಹೆಚ್ಚು ಪವರ್ ಕೊಟ್ಟರೆ, ಅವರು ಸ್ಟ್ರೀಟ್ ಸ್ಟ್ರೀಟ್‌ಗೂ ಹೋಗಿ ಇನ್‌ಸ್ಪೆಕ್ಷನ್ ಮಾಡಿದರೆ, ಸರಿಯಾಗಿ ಅಸೆಸ್‌ಮೆಂಟ್ ಮಾಡಿದರೆ ಕೋಟಿ ಕೋಟಿ ಗಟ್ಟಲೆ ಹಣ ಬರುತ್ತದೆ. ಅದಲ್ಲದೆ ಮಾತೆತ್ತಿದರೆ ಕಾನೂನುಗಳನ್ನು ಮಾಡಿ ಅಧಿಕಾರಿಗಳಿಗೆ ಹೆಚ್ಚು ಅಧಿಕಾರವನ್ನು ಕೊಟ್ಟು ಅವರನ್ನು ಮುಂದಕ್ಕೆ ತರುವುದಕ್ಕೆ ಈ ರೀತಿ ಕಾನೂನು ಮಾಡುವುದನ್ನು ದಯವಿಟ್ಟು ಪರಿಶೀಲನೆ ಮಾಡಬೇಕು. ನಾನು ಈಗ ಹೇಳುವುದನ್ನು ಒಪ್ಪಿಕೊಳ್ಳಬೇಕು. ಈಗ ಎಲೆಕ್ಷನ್ ಆಗಲಿ, ಜನಗಳ ಪ್ರತಿನಿಧಿಗಳು ಬರಲಿ, ಅವರು ಒಪ್ಪಿಗೆ ಕೊಟ್ಟು ರೆಜಲ್ಯೂಷನ್ ಮಾಡಲಿ, ಆ ರೆಜಲ್ಯೂಷನ್ ಸರ್ಕಾರಕ್ಕೆ ಬರಲಿ, ಆವಾಗ ಅಮೆಂಡ್‌ಮೆಂಟ್ ಆಗಲಿ, ಏನು ಇದೆಯೋ ಅದನ್ನು ಬೇಕಾದಷ್ಟು ಮಾಡೋಣ. ಕಾರ್ಪೊರೇಷನ್‌ಗೆ ಹೆಚ್ಚು ಉತ್ಪತ್ತಿ ಬರುವಂತೆ ಕಾರ್ಪೊರೇಷನ್‌ನವರೇ ಮಾಡಲಿ, ಗೌರ್ನಮೆಂಟ್‌ನವರು ಸಹಾಯ ಏನೂ ಕೊಡಬೇಕಾಗಿಲ್ಲ. ವಾಹನಗಳಿಂದ ಟ್ಯಾಕ್ಸ್ ಗೌರ್ನಮೆಂಟ್‌ಗೆ ಬರುತ್ತದೆ. ಆದ್ದರಿಂದ ಅವರು ರಸ್ತೆಗಳನ್ನು ಮಾಡಿಸಿಕೊಡಬೇಕು. ಜನಗಳಿಂದ ಟ್ಯಾಕ್ಸ್ ವಸೂಲಿ ಮಾಡಿ ರಸ್ತೆ ರಿಪೇರಿಗಳಿಗೆ ಹಾಕುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ನಿಜವಾಗಿಯೂ ಬೆಂಗಳೂರಿನಲ್ಲಿ ಟ್ಯಾಕ್ಸ್ ಇಲ್ಲದೆ ಇರುವಂಥ ಮನೆಗಳು ಎಷ್ಟೋ ಇವೆ. ರೆವಿನ್ಯೂ ಲ್ಯಾಂಡ್‌ನಲ್ಲಿ ಎಷ್ಟೋ ಮನೆಗಳನ್ನು ಪ್ಲಾನ್ ಕೂಡ ಇಲ್ಲದೆ ಕಟ್ಟಿಕೊಂಡಿದ್ದಾರೆ. ಬಡವರು ಪ್ಲಾನ್ ಕೊಟ್ಟು, ಅದಕ್ಕೆ ಬೇಕಾದ ಪತ್ರದ ಕಾಪಿ ಖಾತಾ ಕಾಪಿ ಕೊಟ್ಟರೂ ಅವರಿಗೆ ಲೈಸನ್ಸ್ ಕೊಡುವುದಿಲ್ಲ. ಯಾರಾದರೂ ಕೂಡ ಅಲ್ಲಿರುವ ಓವರ್‌ಸಿಯರ್‌ಗೋ, ಅಥವಾ ಅಧಿಕಾರಿಗಳಿಗಾಗಲಿ 500, 600 ರೂಪಾಯಿ ಕೊಟ್ಟರೆ ಪ್ಲಾನ್ ಇಲ್ಲದಿದ್ದರೂ ಮನೆ ಕಟ್ಟಿಕೊಳ್ಳಲು ಲೈಸನ್ಸ್‌ಗಳು ಬೇಗನೆ ದೊರೆಯುತ್ತವೆ. ಮತ್ತು ಖಾತಾ ಛೇಂಜಸ್ ಆಗಲಿ, ಇನ್ನು ಏನು ಬೇಕೋ ಅವೆಲ್ಲಾ ಬೇಗ ಬೇಗನೆ ಸಿಕ್ಕುತ್ತವೆ. ಅದರಿಂದ ಅವರುಗಳು ಮನೆಯನ್ನು ಬೇಗನೆ ಕಟ್ಟಿಕೊಳ್ಳುತ್ತಾರೆ. ಆರೀತಿ ಇರುವ ಎಷ್ಟೋ ಮನೆಗಳನ್ನು ನಾನು ತೋರಿಸಿಕೊಡುತ್ತೇನೆ. ಅಲ್ಲಿರುವ ಅಧಿಕಾರಿಗಳು ಆರೀತಿ ತಪ್ಪು ಮಾಡಿದ್ದರೂ ಅಂಥವರ ಮೇಲೆ ಇಲ್ಲಿಯವರೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ನಾನು ಮಿನಿಸ್ಟರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಅವರು ಓ. ಡಿ. ಪಿ. ಗೆ. ರೆಫರ್ ಮಾಡಿದ್ದಾರೆ.

ಇನ್ನೊಂದು ವಿಷಯ ಏನೆಂದರೆ ರೆಸಿಡೆನ್‌ಷಿಯಲ್ ಏರಿಯಾದಲ್ಲಿ ಷಾಪ್ ಕಟ್ಟುವುದಕ್ಕೆ ಲೈಸನ್ಸ್ ಕೊಡುವುದಿಲ್ಲ ಎಂದು ಮಾಡಿದ್ದಾರೆ. ಆರೀತಿ ಇದ್ದರೂ ಅವರು ಲೈಸನ್ಸ್ ಕೊಟ್ಟಿರುವುದನ್ನು ಎಷ್ಟು ತೋರಿಸಲಿ ! ಉದಾರಹಣೆಗೆ ಅಶೋಕ ನಗರದಲ್ಲಿ ಒಬ್ಬ ಬಡಪಾಯಿ ಪಾಪನಾರಾಯಣ ಎಂಬುವನು ಷಾಪ್‌ಗಾಗಿ ಲೈಸನ್ಸ್ ಅಪ್ಲೈ ಮಾಡಿದ್ದುದನ್ನು ಟೌನ್ ಪ್ಲಾನಿಂಗ್ ಕಮಿಟಿಯವರು ಆ ಪೇಪರನ್ನು 2 ವರ್ಷದಿಂದ ಇಟ್ಟುಕೊಂಡು ಅನಂತರ ರಿಜೆಕ್ಟ್ ಮಾಡಿದ್ದಾರೆ. ಅಲ್ಲಿಗೆ ಕಮೀಷನರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಇಂಜನಿಯರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಅದೇ ಡಿವಿಷನ್ನಿನ ಅದೇ ರೋಡ್‌ನಲ್ಲಿ ಒಬ್ಬನಿಗೆ 4 ಷಾಪ್ ಕಟ್ಟಲು ಲೈಸನ್ಸ್ ಕೊಟ್ಟಿದ್ದಾರೆ. ಆ ಅಧಿಕಾರಿಗಳಿಗೆ ಮೂಳೆ ಇಲ್ಲವೋ ಎಂದು ನಾನು ಕೇಳುತ್ತೇನೆ. ಅಲ್ಲಿಗೆ ಮಿನಿಷ್ಟರನ್ನು ಕರೆದುಕೊಂಡು ಹೋಗಿದ್ದೆ. ಈ ರೀತಿ ಲೈಸನ್ಸ್ ಕೊಟ್ಟಿದ್ದಾರೆ ಎಂದು ಹೇಳಿದೆ. ಇದಕ್ಕೆ ಟೌನ್ ಪ್ಲಾನಿಂಗ್ ಕಮಿಟಿಯವರ ಒಪಿನಿಯನ್ ಏತಕ್ಕೆ ತೆಗೆದುಕೊಳ್ಳಲಿಲ್ಲ ! ಇದರ ಅರ್ಥ ಏನು ಬರುತ್ತದೆ ಎಂದರೆ ಎಲ್ಲಿ ಇನ್‌ಫ್ಲೂಯೆನ್ಸ್ ಇದೆಯೋ ಅಲ್ಲಿ ಷಾಪುಗಳನ್ನು ಕಟ್ಟುವುದಕ್ಕೆ ಲೈಸನ್ಸ್ ಕೊಡುತ್ತಾರೆ ಎಂದು. ಅಧ್ಯಕ್ಷರೇ, ತಾವೂ ಕೂಡ ಬೆಳಿಗ್ಗೆ ಬನ್ನಿ, ಕರೆದುಕೊಂಡು ಹೋಗಿ ತೋರಿಸುತ್ತೇನೆ. ಅವರ ಮೇಲೆ ನ್ಯಾಯವಾದ ಕ್ರಮ ಕಾನೂನು ರೀತ್ಯಾ ತೆಗೆದುಕೊಳ್ಳಲಿ, ಇಲ್ಲದಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಈ ರೀತಿಯಾಗಿ ಬೆಂಗಳೂರು ಕಾರ್ಪೊರೇಷನ್ ಅಧಿಕಾರಿಗಳು ಬಹಳ ಅನ್ಯಾಯ ಮಾಡುತ್ತಿದ್ದಾರೆ. ನಮ್ಮ ಪಾರ್ಟಿಯವರೇ ಆಗಲಿ, ತಪ್ಪು ಮಾಡಿದರೆ ಅದನ್ನು ಯಾರೇ ಆಗಲಿ ಒಪ್ಪಿಕೊಳ್ಳಬೇಕು. ಕಾರ್ಪೊರೇಷನ್ ಕೌನ್ಸಿಲರ್ಸ್ ಆಡಳಿತವನ್ನು ರದ್ದು ಮಾಡಿ 4 ವರ್ಷವಾಯಿತು. ನಾವು ಸರಿಯಾಗಿ ನಡೆಸಿಕೊಂಡು ಬಂದಿದ್ದರೆ ಏತಕ್ಕೆ ರದ್ದು ಮಾಡುತ್ತಿದ್ದರು ! ನಾನು ಮೇಯರ್ ಆಗಬೇಕು, ನಾನು ಡೆಪ್ಯೂಟಿ ಮೇಯರ್ ಆಗಬೇಕು, ಈರೀತಿಯ ಅಧಿಕಾರ ಜಗಳದಿಂದ ಒಬ್ಬರಿಗೊಬ್ಬರು ಜಗಳ ಮಾಡಿಕೊಂಡಿದ್ದರಿಂದ ಈ ರೀತಿ ರದ್ದು ಆಗಿದೆ. ಇದರ ಬಗ್ಗೆ ಮೊದಲು ಕಾರ್ಪೊರೇಷನ್ ಎಲೆಕ್ಷನ್ ಆಗಬೇಕು ಎಂದು ನಾನು ಮೊದಲೇ ಮಿನಿಸ್ಟರಿಗೂ, ಚೀಫ್‌ಮಿನಿಸ್ಟರಿಗೂ, ನಮ್ಮ ಪಾರ್ಟಿಯವರಿಗೂ ಎಲ್ಲರಿಗೂ ತಿಳಿಸಿದ್ದೇನೆ. ಎಲೆಕ್ಷನ್‌ನಲ್ಲಿ ಯಾರೇ ಬರಲಿ. ಜನಗಳಿಗೆ ಯಾರು ಇಷ್ಟ ಇದ್ದಾರೋ ಅವರಿಗೇ ಓಟು ಕೊಡಲಿ, ನ್ಯಾಯವಾಗಿ ಕಷ್ಟಪಟ್ಟು ಕೆಲಸ ಮಾಡತಕ್ಕಂಥವರಿಗೆ ಓಟು ಕೊಡಲಿ. 1965 ರಲ್ಲಿ ಪೌರಸಮಿತಿಯವರು ಏನು ಅನ್ಯಾಯ ಮಾಡಿದ್ದಾರೆ ಅವರಿಗೇ ಓಟು ಕೊಡಲಿ, ಬೇಡ ಅನ್ನುವುದಿಲ್ಲ. ಅವರಿಗೆ ಛಾಲೆಂಜ್ ಮಾಡುತ್ತೇನೆ. ನ್ಯಾಯವಾಗಿ ನಾವು ದುಡಿದಿದ್ದರೆ ನಮಗೆ ಓಟು ಕೊಡಲಿ, ಅವರು ದುಡಿದಿದ್ದರೆ ಅವರಿಗೆ ಓಟು ಕೊಡಲಿ ಎಂದು. ಮೊದಲು ಎಲೆಕ್ಷನ್ ನಡೆಸಬೇಕು ಎಂದು ಒತ್ತಾಯ ಮಾಡಿ ತಿಳಿಸಿದ್ದೇನೆ. ಈ ಬಗ್ಗೆ ನಮಗೇನೂ ಭಿನ್ನಾಭಿಪ್ರಾಯವಿಲ್ಲ. ಇದನ್ನು ನಿಜವಾಗಿಯೂ ಹೇಳುತ್ತಿದ್ದೇನೆ. ನಾನು ಕಾರ್ಪೊರೇಷನ್‌ನಲ್ಲಿ 10 ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಅದಕ್ಕೂ ಮುಂಚೆ 15 ವರ್ಷಗಳ ಅನುಭವ ನನಗೆ ಇದೆ. ಆದರೆ ಈಗ ಆಗುತ್ತಾ ಇರುವಷ್ಟು ಅನ್ಯಾಯ ಹಿಂದೆ ನಡೆಯುತ್ತಾ ಇರಲಿಲ್ಲ. ಈಗ ಕಾರ್ಪೊರೇಷನ್‌ನಲ್ಲಿರುವ ಅಧಿಕಾರಿಗಳ ಹತ್ತಿರ ಒಬ್ಬೊಬ್ಬರ ಹತ್ತಿರವೂ ಎಷ್ಟೆಷ್ಟು ಪೆಂಡಿಂಗ್ ಕೇಸಸ್ ಇವೆ ಎನ್ನುವುದನ್ನು ತೋರಿಸುತ್ತೇನೆ. ಮತ್ತು ಎಲ್ಲೆಲ್ಲಿ ಯಾವ ರೀತಿ ಕೆಲಸ ನಡೆಯುತ್ತಾ ಇದೆ ಎನ್ನುವುದನ್ನೂ ತೋರಿಸುತ್ತೇನೆ. ಯಾವುದೂ ಪ್ರೋಗ್ರಾಂ ಆಫ್ ವರ್ಕ್ಸ್ ಪ್ರಕಾರ ಕೆಲಸ ನಡೆಯುತ್ತಾ ಇಲ್ಲ. ಕಾರ್ಪೊರೇಷನ್ ಕಮೀಷನರ್, ಅಡ್ಮಿನಿಸ್ಟ್ರೇಟರ್‌ರವರ ಮನೆಗಳು, ಕಟ್ಟಡಗಳು ಎಲ್ಲೆಲ್ಲಿಯೋ ಅಂತಹ ಕಡೆ, ಜಯನಗರದ ಕಡೆ ಅದರ ಬೆಳವಣಿಗೆಗೆ ಬೇಕಾದಷ್ಟು ದುಡ್ಡನ್ನು ಸುರಿಯುತ್ತಿದ್ದಾರೆ. ಅದೇ ರೀತಿ ಬಡವರು ಇರುವ ಕಡೆ ಕೆಲಸಗಳು ಆಗುತ್ತಾ ಇಲ್ಲ. ಅಂತಹ ಕಡೆ ಏತಕ್ಕೆ ಕೆಲಸ ಮಾಡಬಾರದು ಎಂದು ಕೇಳುತ್ತೇನೆ. ಈವೊತ್ತು ಬಡವರು ಬೆವರು ಸುರಿಸಿ ಕಷ್ಟಪಟ್ಟು ದುಡಿಯುತ್ತಾ ಇದ್ದಾರೆ. ಅಂತವರಿಗೆ ಹೆಚ್ಚು ಟ್ಯಾಕ್ಸ್ ಹಾಕುತ್ತಿದ್ದಾರೆ. ಅಂತಹ ಕಡೆ ಒಂದು ಹಾಸ್ಪಿಟಲ್ ಕೂಡ ಇಲ್ಲ. ಎಲ್ಲಿ ಹಣವಂತರು ಇದ್ದಾರೆ, ಕಾರು ಇಟ್ಟುಕೊಂಡು ಶ್ರೀಮಂತರು ಇದ್ದಾರೆ ಅಂತಹ ಕಡೆ ಹಾಸ್ಪಿಟಲ್ ಕೊಡುತ್ತಾ ಇದ್ದೀರಿ. ಬಡವರು ಇರುವ ಕಡೆ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದರೆ ನಿಮ್ಮನ್ನು ಕೊಂಡಾಡುತ್ತಿದ್ದರು. ಅದು ಬಿಟ್ಟು ಕಮೀಷನರು, ಅಡ್ಮಿನಿಸ್ಟ್ರೇಟರ್ ಇರುವಂಥ ಕಡೆ ಅನುಕೂಲತೆಗಳನ್ನು ಮಾಡಿಕೊಡುತ್ತಾ ಇದ್ದೀರಿ; ಹಳೆಯ ಸಿಟಿಗಳಲ್ಲಿ, ಕಂಟೋನ್ಮೆಂಟ್ ಇತರ ಕಡೆಗಳಲ್ಲಿ ಜನಗಳು ವಾಸ ಮಾಡುತ್ತಿಲ್ಲವೇ ? ಈ ಹೊತ್ತು ಬೆಂಗಳೂರಿನಲ್ಲಿ 18 ಲಕ್ಷ ಪ್ರಜಾಸಂಖ್ಯೆ ಇದೆ. ಬೆಂಗಳೂರಿನ ಕಾರ್ಪೊರೇಷನ್ನಿನ ಕೌನ್ಸಿಲರ್ಸ್ ಆಡಳಿತವನ್ನು ರದ್ದು ಮಾಡಿದ್ದರಿಂದ ಈವೊತ್ತಿನ ದಿವಸ ಕಾರ್ಪೊರೇಷನ್ ಅಧಿಕಾರಿಗಳಿಂದ ಏನು ಅನ್ಯಾಯ ನಡೆಯುತ್ತಾ ಇದೆ, ಏನು ತಪ್ಪು ಮಾಡಿದ್ದಾರೆ ಅನ್ನುವುದನ್ನು ಈ ಹೊತ್ತು ಬನ್ನಿ ತೋರಿಸಿಕೊಡುತ್ತೇನೆ.

(ಶ್ರೀ ಬಿ. ನಂಜಪ್ಪ)

4-30 P.M.

ಚುನಾವಣೆಗಳು ನಡೆಯಲು ಏನು ತಿದ್ದುಪಡಿಗಳನ್ನು ತಂದಿದ್ದಾರೋ ಅದನ್ನು ಅಂಗೀಕರಿಸಿ ಟೌನ್ ಪ್ಲಾನಿಂಗ್ ಕಮಿಟಿಯ ಪರ್ಮಿಷನ್ ತೆಗೆದುಕೊಳ್ಳುವುದು ಮುಂತಾದ ತಿದ್ದುಪಡಿಗಳನ್ನು ಹಾಗೆಯೇ ನಿಲ್ಲಿಸಬೇಕು. ಜನರ ಪ್ರತಿನಿಧಿಗಳು ಚುನಾಯಿತರಾಗಿ ಬಂದ ನಂತರ ಅವುಗಳನ್ನು ತೆಗೆದುಕೊಳ್ಳಲಿ. ದನಗಳಿಗೆ ಲೈಸೆನ್ಸ್ ತೆಗೆದುಕೊಳ್ಳಬೇಕು ಎನ್ನುವ ಕಾಯಿದೆ ಜಾರಿಗೆ ತಂದಂಥ ಸಂದರ್ಭದಲ್ಲಿ ಅದನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದಾಗ ಸರ್ಕಾರದವರು ದೊಡ್ಡ ಮನಸ್ಸುಮಾಡಿ ತಂದಂಥ ತಿದ್ದುಪಡಿಯನ್ನು ಎಲ್ಲ ಮಾನ್ಯ ಸದಸ್ಯರೂ ಒಪ್ಪಿಕೊಂಡು ಒಳ್ಳೆಯದನ್ನು ಮಾಡಿದರು. ಈ ಸಂದರ್ಭದಲ್ಲಿ ನಾನು ಈ ಸಭೆಯ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುವುದೇನೆಂದರೆ ಚುನಾವಣೆಗಳಿಗೆ ಸಂಬಂಧಪಟ್ಟ ಹಾಗೆ ತಂದಿರುವ ತಿದ್ದುಪಡಿಗಳನ್ನು ಮಾತ್ರ ಎಲ್ಲರೂ ಒಪ್ಪಿಕೊಳ್ಳಬೇಕು ಮತ್ತು ಇತರ ತಿದ್ದುಪಡಿಗಳನ್ನು ಕಾರ್ಪೊರೇಷನ್ನಿಗೆ ಜನರಿಂದ ಚುನಾಯಿತರಾದಂಥ ಪ್ರತಿನಿಧಿಗಳು ಆರಿಸಿಬಂದ ನಂತರ ತೆಗೆದುಕೊಳ್ಳಬಹುದು. ಇಷ್ಟು ಹೇಳಿ, ಈಗ ಏನು ತಿದ್ದುಪಡಿಗಳನ್ನು ತಂದಿದ್ದಾರೆ ಅದರಲ್ಲಿ ಚುನಾವಣೆಗೆ ಸಂಬಂಧಪಟ್ಟವುಗಳನ್ನು ಮಾತ್ರ ಸ್ವಾಗತ ಮಾಡಿ ಮಿಕ್ಕ ತಿದ್ದುಪಡಿಗಳನ್ನು ಸದ್ಯಕ್ಕೆ ಹಾಗೆಯೇ ನಿಲ್ಲಿಸಬೇಕು ಎಂದು ಕೇಳಿಕೊಂಡು, ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ತಿಮ್ಮಯ್ಯ (ಬಸವನಗುಡಿ).—ಅಧ್ಯಕ್ಷರೇ, ನಾನು ತಮ್ಮನ್ನು ಕೇಳದೇ ಇದ್ದರೂ ನನಗೆ ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ.

ಮಾನ್ಯ ಮಂತ್ರಿಗಳು ಕಾರ್ಪೊರೇಷನ್ ತಿದ್ದುಪಡಿ ಮಸೂದೆ ತಂದಿರುವುದರಲ್ಲಿ ಒಳ್ಳೆಯದೂ ಇದೆ, ಕೆಟ್ಟದ್ದೂ ಇದೆ. ಕೆಟ್ಟದ್ದರ ವಿಚಾರವಾಗಿ ಮಾತ್ರ ನಾನು ಕೆಲವು ಮಾತುಗಳನ್ನು ಹೇಳುತ್ತೇನೆ. ಇದರ ವಿಚಾರವಾಗಿ ಈಗಾಗಲೇ ಮಾನ್ಯ ಶಾಮಣ್ಣನವರೂ ಮತ್ತು ನಂಜಪ್ಪನವರೂ ಮಾತನಾಡಿದ್ದಾರೆ. ನಾವೆಲ್ಲ ಕಾರ್ಪೊರೇಷನ್‌ನಲ್ಲಿ 10-12 ವರ್ಷಗಳ ಕಾಲ ಒಟ್ಟಿಗೆ ಕೆಲಸ ಮಾಡಿದವರು. ಕಾರ್ಪೊರೇಷನ್‌ನಲ್ಲಿರುವ ಕಷ್ಟಸುಖಗಳನ್ನೆಲ್ಲ ಅವರಿಬ್ಬರೂ ಚೆನ್ನಾಗಿ ಹೇಳಿದ್ದಾರೆ. ನಾವು ಬೇರೆ ಬೇರೆ ಪಕ್ಷಗಳಿಗೆ ಸೇರಿದ್ದರೂ ಈ ಮನೆಯಲ್ಲಿ ಎಲ್ಲರೂ ಒಂದೇ ಎನ್ನುವ ಭಾವನೆಯಿಂದ ಕೆಲಸ ಮಾಡಬೇಕಾಗಿದೆ. 'ಒಳ್ಳೆಯದನ್ನು ಮಾಡಬೇಕು, ಅನ್ಯಾಯಕ್ಕೆ ಈ ಸಭೆ ಕೈಹಾಕಬಾರದು ಎಂದು ಹೇಳುತ್ತೇನೆ.

ಪ್ಲಾನ್‌ಗಳ ಸಂಬಂಧದಲ್ಲಿ ತಂದಿರುವ ತಿದ್ದುಪಡಿಯಿಂದ ಬಡ ಜನಗಳಿಗೆ ಬಹಳ ಅನ್ಯಾಯವಾಗುತ್ತದೆ. ಈ ದಿನ ಬೆಳಿಗ್ಗೆ ಕೆಲವು ನಾಗರಿಕರು ನನ್ನಲ್ಲಿಗೆ ಬಂದು ಕಸಗುಡ್ಡೆ ಹಾಕಿದ್ದಾರೆ, ದುರ್ವಾಸನೆ ಬರುತ್ತಿದೆ ಮುಂತಾಗಿ ಹೇಳಿದರು. ನಾನು ಐದಾರು ಸಲ ಫೋನ್ ಮಾಡಿದೆ. ಆದರೂ ಅಧಿಕಾರಿಗಳು ಬರಲಿಲ್ಲ. ಇದು ಪ್ರತಿನಿತ್ಯವೂ ನಡೆಯುತ್ತಿರುತ್ತದೆ. 50-60 ಜನ ಜಾಡಮಾಲಿಗಳು ಕೆಲಸ ಮಾಡಬೇಕಾಗಿರುವ ಕಡೆ 10-12 ಜನ ಕೂಡ ಕೆಲಸ ಮಾಡುವುದಿಲ್ಲ. ಈ ಹೊತ್ತು ಬೆಳಗ್ಗೆ ನಾನು ಕೆಲವು ಕಡೆ ಹೋಗಿ ನೋಡಿಕೊಂಡು ಬಂದೆ. ಕಸದ ತೊಟ್ಟಿಗಳಲ್ಲಿ ಲಾರಿಗಟ್ಟಲೆ ಕಸ ತುಂಬಿದೆ. ಈ ವಿಚಾರದಲ್ಲಿ ನಾನು ಮಾನ್ಯ ಮಂತ್ರಿಗಳ ಹತ್ತಿರ ಸ್ಪೆಷಲ್ಲಾಗಿ ಮಾತನಾಡುತ್ತೇನೆ.

ನಗರದಲ್ಲಿ ಕಸಕಡ್ಡಿ ತುಂಬಿರುವುದರಿಂದ ರೋಗರುಜಿನಗಳು ಬರುತ್ತವೆ. ರೋಗಿಗಳನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರೆ ಕೇಳುವವರೇ ಇಲ್ಲ. ಡಾಕ್ಟರುಗಳು ಇವರನ್ನು ನೋಡುವುದಿಲ್ಲ. ಬಹಳ ಜನ ಸಾಯುತ್ತಿದ್ದಾರೆ.

ಕಾರ್ಪೊರೇಷನ್‌ನಲ್ಲಿ ಪ್ಲಾನುಗಳ ವಿಭಾಗದಲ್ಲಿ ಮೂರು ಕಾಸಿನ ಕೆಲಸವೂ ಆಗುತ್ತಿಲ್ಲ. ಲಂಚದ ಹಾವಳಿ ಜಾಸ್ತಿಯಾಗಿದೆ. ಮೇಜಿನಿಂದ ಮೇಜಿಗೆ ಕಾಸು ಕೊಡಬೇಕು. ಬಡವರನ್ನು ಶೂಲಕ್ಕೆ ಹಾಕಿದಂತೆ ಆಗುತ್ತಿದೆ. ಇಂಥವರನ್ನು ವರ್ಗಮಾಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಹೇಳಿಕೊಂಡೆ. ಮಂತ್ರಿಗಳು ಒಳ್ಳೆಯವರು. ಯಾರಿಗೂ ತೊಂದರೆ ಮಾಡಬಾರದು ಎನ್ನುವ ಮನೋಭಾವ ಅವರದು. ಆದರೂ ಕೂಡ ಹಾವು ತನ್ನ ತಂಟೆಗೆ ಬರುವವರನ್ನು ಕಚ್ಚದೆ ಇದ್ದರೂ, 'ಬುಸ್' ಎಂದರೆ ಜನ ಹೆದರಿ ದೂರವಿರುವಂತೆ ಮಾನ್ಯ ಮಂತ್ರಿಗಳೂ ಸ್ವಲ್ಪ ಜೋರಾಗಿ ಇರಬೇಕು ಎಂದು ಕೇಳಿಕೊಳ್ಳುತ್ತೇನೆ. ಆಗ ಅಧಿಕಾರಿಗಳು ಚೆನ್ನಾಗಿ ಕೆಲಸಮಾಡುತ್ತಾರೆ.

ಕೆಲವು ಓವರ್‌ಸಿಯರುಗಳನ್ನು ಸಸ್ಪೆಂಡ್ ಮಾಡಿದ್ದಾರೆ. 10-15 ದಿನಗಳ ಕಾಲ ಫೈಲುಗಳನ್ನು ಇನ್‌ಸ್ಪೆಕ್ಷನ್ ಮುಂತಾದ ಕೆಲಸಗಳಿಗಾಗಿ ಇಟ್ಟುಕೊಂಡಿರುವವರನ್ನು ಸಸ್ಪೆಂಡ್ ಮಾಡಿದ್ದಾರೆ. ಮೂರು-ನಾಲ್ಕು ತಿಂಗಳು ಫೈಲುಗಳನ್ನು ಇಟ್ಟುಕೊಂಡಿರುವವರನ್ನು ವಿಚಾರಿಸುವುದೇ ಇಲ್ಲ. ಇದರ ಬಗ್ಗೆ ಕೂಲಂಕಷವಾಗಿ ವಿಚಾರಿಸಿ ಕ್ರಮ ತೆಗೆದುಕೊಳ್ಳಬೇಕು. ಉತ್ತಮರು ಯೋಗ್ಯರು ಯಾವತ್ತಿಗೂ ಪೆಟ್ಟು ತಿನ್ನುವುದು ಜಾಸ್ತಿ. ಕೈಚಳಕ, ಮಾತಿನ ಚಳಕ ಇರುವವರು ಹೇಗಾದರೂ ಮಾಡಿ ನಿಭಾಯಿಸಿಕೊಳ್ಳುತ್ತಾರೆ. ಅಂಥವರನ್ನು ಸಸ್ಪೆಂಡ್ ಮಾಡುವುದಿಲ್ಲ. ಯೋಗ್ಯರಾದವರನ್ನು ಸಸ್ಪೆಂಡ್ ಮಾಡುತ್ತಾರೆ.

ಶ್ರೀಮಾನ್ ನಂಜಪ್ಪನವರು ಜಯನಗರದ ಕಡೆ ಕೆಲಸಗಳನ್ನು ಮಾಡುತ್ತಾರೆ, ಹಳೇ ಸಿಟಿ ಕಡೆ ಕೆಲಸ ವಾಗಲಿಲ್ಲವೆಂದು ಹೇಳಿದರು. ಅವರು ಹೀಗೆ ಜೋರಾಗಿ ಮಾತನಾಡಿ ಅವರ ಕಡೆ ಕೆಲಸ ಮಾಡಿಸಿಕೊಳ್ಳುತ್ತಾರೆ ನಮ್ಮಂಥವರು ಇರುವ ಕಡೆ ಕೆಲಸ ಆಗುವುದಿಲ್ಲ. ಜಯನಗರದಲ್ಲಿರುವವರೂ ತೆರಿಗೆಗಳನ್ನು ಕೊಡುತ್ತಾರೆ. ಆದ್ದರಿಂದ ಜಯನಗರದಲ್ಲಿ ಮಾತ್ರ ಕೆಲಸ ಮಾಡಿದರು ಎಂದು ಹೇಳುವುದು ಸರಿಯಲ್ಲ.

ಶ್ರೀ ಎ. ನಂಜಪ್ಪ.—ಮಾನ್ಯ ಸದಸ್ಯರು ನನ್ನ ಬಗ್ಗೆ ಆಡಿದ ಮಾತುಗಳನ್ನು ಹಿಂದಕ್ಕೆ ತೆಗೆದು ಕೊಳ್ಳಬೇಕು.

Mr. SPEAKER.—The two Hon'ble Members are highly cultured persons coming from the metropolis City and if they commence quarrelling, what can the Presiding Officer do ? No Hon'ble Member should try to offend another member and the Debate should be carried on peacefully.

ಶ್ರೀ ಪಿ. ತಿಮ್ಮಯ್ಯ.—ಶ್ರೀ ನಂಜಪ್ಪ ನನ್ನ ಸ್ನೇಹಿತರು, ನಾನು ಅವರೊಂದಿಗೆ ಜಗಳವಾಡುವುದಿಲ್ಲ, ಜಯನಗರದಲ್ಲೂ ಸೌಕರ್ಯ ಮಾಡಲಿ, ಹಾಗೆಯೇ ಎಲ್ಲಾ ಕಡೆಯೂ ಮಾಡಿಕೊಡಲಿ ಎಂದು ನಾನು ಹೇಳುವುದು. ಇಂದು ಅವರ ಡಿವಿಜನ್ನಿನಲ್ಲಿ ಆರು ನಲ್ಲಿಗಳನ್ನು ಹಾಕಿದ್ದಾರೆ. ಹಾಕಲಿ, ಸಂತೋಷ. ಅದೇ ರೀತಿಯಲ್ಲಿ ಇತರ ಡಿವಿಜನ್ನುಗಳಲ್ಲೂ ಹಾಕಲಿ. ಮುಖ್ಯವಾಗಿ ನಾನು ಮಂತ್ರಿಗಳನ್ನು ಕೇಳಿಕೊಳ್ಳುವುದು ಶ್ರೀ ಶಾಮಣ್ಣನವರು ಹೇಳಿದಂತೆ ಒಂದು ಸೆಲೆಕ್ಟ್ ಕಮಿಟಿ ಮಾಡಿ ಕಾರ್ಪೊರೇಷನ್‌ನ ಚುನಾವಣೆ ನಡೆಸಲೇಬೇಕು. ಹಾಗೆ ಮಾಡದಿದ್ದರೆ ಜನತೆಗೆ ತೊಂದರೆಯಾಗುವುದು. ಯಾರೇ ಬರಲಿ, ಕಾರ್ಪೊರೇಷನ್ನಿನಲ್ಲಿ ರಾಜಕೀಯ ವಿರಬಾರದು. ಅದು ಜನರಿಗೆ ಸೇರಿರುವುದು. ಬಂದವರು ಅವರವರ ಡಿವಿಜನ್ನಿನ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಎಲ್ಲ ಡಿವಿಜನ್ನುಗಳ ಕೆಲಸವೂ ಆಗಬೇಕು. ಚುನಾವಣೆ ನಡೆಸದೇ ಇದ್ದರೆ ಜನರಿಗೆ ಅನ್ಯಾಯವಾಗುತ್ತದೆ, ಬಡವರಿಗೆ ತೊಂದರೆಯಾಗುವುದು. ಶ್ರೀಮಂತರಾದರೆ ಕುಳಿತ ಜಾಗದಲ್ಲೇ ಫೋನ್ ಮಾಡಿ ತಮಗೆ ಬೇಕಾದ ಕೆಲಸ ಮಾಡಿಸಿಕೊಳ್ಳುವರು, ಪ್ಲಾನ್‌ಗೆ ಒಪ್ಪಿಗೆ ಪಡೆಯುವರು. ಅದೇ ಬಡವರಾದರೆ ಕಾರ್ಪೊರೇಷನ್‌ಗೆ ಹೋದರೆ ತಮ್ಮ ಕೆಲಸವಾಗಬೇಕಾದರೆ ಕಂಬಕಂಬಕ್ಕೂ ಕೈಮುಗಿಯಬೇಕು, ಸಾಯಂಕಾಲದವರೆಗೂ ಊಟವಿಲ್ಲದೆ ಕಾಯಬೇಕು, ಹೆಣ್ಣುಮಕ್ಕಳ ಅವಸ್ಥೆಯಂತೂ ಹೇಳತೀರದು. ಅಧಿಕಾರಿಗಳ ಸಂಖ್ಯೆ ಜಾಸ್ತಿ, ಒಂದೊಂದು ರೂಮಿಗೆ ಒಬ್ಬೊಬ್ಬರು ಅಧಿಕಾರಿಗಳಿದ್ದಾರೆ. ಅವರಿಗೆ ಸಾಕಷ್ಟು ಕೆಲಸವಿಲ್ಲ, ಅವರ ಸಂಖ್ಯೆಯನ್ನು ಕಡಮೆ ಮಾಡಿದರೆ ಒಳ್ಳೆಯದು. ಕಾನೂನು ಜಾಸ್ತಿ ಮಾಡಿದಷ್ಟೂ ಲಂಚಕ್ಕೆ ಅವಕಾಶ ಜಾಸ್ತಿಯಾಗುವುದು. ಕಟ್ಟಡಕ್ಕಾಗಿ ಏಕೆ ಹೆಚ್ಚು ಹಣ ಖರ್ಚುಮಾಡಬೇಕು ? ಹಾಗೆ ಮಾಡುವುದರಿಂದ ಕಂಟ್ರಾಕ್ಟರು ಹಣ ತಿನ್ನುವುದಕ್ಕೆ ಅವಕಾಶವಾಗುವುದು. ಆದುದರಿಂದ ಈಗ ಕಟ್ಟಬೇಕೆಂದಿರುವ 24 ಅಂತಸ್ತಿನ ದೊಡ್ಡ ಕಟ್ಟಡ ಆಗಬಾರದೆಂದು ಘಂಟಾಘೋಷವಾಗಿ ಹೇಳುತ್ತೇನೆ. ಅಷ್ಟು ದೊಡ್ಡ ಕಟ್ಟಡವೇಕೆ ? ಅದನ್ನು ಕಟ್ಟುವುದನ್ನು ನಾನು ವಿರೋಧಿಸುತ್ತೇನೆ. ಸಣ್ಣ ಕಟ್ಟಡ ಕಟ್ಟಿದರೆ ಸಾಕಾಗುವುದು. ಹೆಚ್ಚು ಮಹಡಿಗಳಿದ್ದರೆ ಮುದುಕರು ಹತ್ತುವುದಕ್ಕಾಗುವುದಿಲ್ಲ. ಈಗಲೇ ಮಹಡಿ ಹತ್ತಲು ಅವರು ಕಷ್ಟಪಡುತ್ತಿದ್ದಾರೆ, 14 ವರ್ಷಗಳ ಅನುಭವ ಹೇಳುತ್ತಿದ್ದೇನೆ. ಮಂತ್ರಿಗಳಿಗೆ ವಿಚಾರ ಗೊತ್ತಿಲ್ಲ. ಅವರು ದೇವರ ಹಾಗೆ ಇದ್ದಾರೆ, ಪಾಪ ! ಹೇಳಿದಂತೆ ದಸ್ಕತ್ತು ಹಾಕುತ್ತಾರೆ, ಯಾರಿಗೂ ಕೆಡಕು ಮಾಡುವುದಿಲ್ಲ. ಕಾರ್ಪೊರೇಷನ್ನಿಗೆ ಬಂದಿರುವ ಅಡ್ಮಿನಿಸ್ಟ್ರೇಟರು ಏನಾದರೂ ಹೇಳಿ ಕಣ್ಣೊರಸಿ ಮನೆಗೆ ಕಳಿಸುವರು. ಅದು ಸರಿಯಲ್ಲ. ಬಡವರೇ ಬರಲಿ, ಬಲ್ಲಿದರೇ ಬರಲಿ ಎಲ್ಲರಿಗೂ ಅವರ ಕೆಲಸಗಳನ್ನು ಮಾಡಿಕೊಡಬೇಕು, ಅವರ ಕಷ್ಟಸುಖ ಕೇಳಬೇಕು, ಪರಿಹಾರಮಾಡಬೇಕು. ಸುಮ್ಮನೆ ಸಾಯಂಕಾಲ ಬಾ, ನಾಳೆ ಬಾ ಎಂದು ಹೇಳಿ ಕಳುಹಿಸಬಾರದು, ರೋಗಕ್ಕೆ ತಕ್ಕ ಮದ್ದು ಮಾಡ

(ಶ್ರೀ ಪಿ. ತಿಮ್ಮಯ್ಯ)

ಬೇಕು. ಹಾಗೆ ಮಾಡದಿದ್ದರೆ ಕಾರ್ಪೋರೇಷನ್ ಆಡಳಿತ ಸರಿಯಾಗಿ ನಡೆಯುವುದಿಲ್ಲ. ನಮ್ಮ ಅಸೆಂಬ್ಲಿ ಸದಸ್ಯರ ಸಂಪರ್ಕವಿರುವಂತೆ ಒಂದು ಸಮಿತಿ ಮಾಡಿ ನಾಗರಿಕರ ಕಷ್ಟಗಳನ್ನು ತಿಳಿದು ಪರಿಹಾರ ಮಾಡಿದ್ದರೆ ಚೆನ್ನಾಗಿತ್ತು. ಹಾಗೆ ಮಾಡಿದ್ದರೆ ವ್ಯಾಜ್ಯ ಬರುತ್ತಿರಲಿಲ್ಲ. ಈಗಲಾದರೂ ಒಂದು ಸಮಿತಿ ಮಾಡಿ ಈ ಸಭೆಯ ಸದಸ್ಯರನ್ನು ಅಲ್ಲಿಗೆ ಹಾಕಿ ಮೀಟಿಂಗ್ ಮಾಡಿ ಜನರ ಕಷ್ಟ ಸುಖವನ್ನು ವಿಚಾರಿಸಿ, ಏನಾಗಬೇಕೆಂದು ಕೇಳಿ ಅದನ್ನು ಮಾಡಿಕೊಡಬೇಕು. ಶ್ರೀ ಶಾಮಣ್ಣನವರು ಚೆನ್ನಾಗಿ ಹೇಳಿದ್ದಾರೆ, ಸಮಿತಿ ಮಾಡದಿದ್ದರೆ ತೊಂದರೆಯಾಗುವುದು. ಈಗ ಗಲಾಟೆಯಾಗಿ ಬಲ್ಬುಗಳನ್ನು ಒಡೆದುಹಾಕಿದ್ದಾರೆ, ಜನರಿಗೆ ಹೊರಗೆ ಬರಲು ಭಯವಾಗಿದೆ, ಶೆಟ್ಟರು ಗಲಾಟೆಯಾದಾಗ ಅಂಗಡಿ ಬಾಗಿಲು ಹಾಕಿಬಿಡುವರು, ನಗರದಲ್ಲಿ ಜನರಿಗೆ ಬಹಳ ಗಾಬರಿ ಆಗಿದೆ. ಕಾರ್ಪೋರೇಷನ್ನಿನವರು ಜನರು ಕೇಳಿದ ತಕ್ಷಣ ಬೇಕಾದ ಸೌಕರ್ಯ ಮಾಡಿಕೊಡಬೇಕು.

ಶ್ರೀಮಾನ್ ನಂಜಪ್ಪನವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಶ್ರೀಮಾನ್ ಕೃಷ್ಣನ್‌ರವರೂ ಕೂಡ ನಾಲ್ಕು ಮಾತುಗಳನ್ನು ಆಡುತ್ತಾರೆ. ಮಂತ್ರಿಗಳೂ ಕೂಡ ನಮ್ಮ ಮಿತ್ರರು ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಇದನ್ನೆಲ್ಲಾ ಸರಿಪಡಿಸುವುದಕ್ಕೆ ಏನೂ ಮಾಡಿದಿದ್ದರೆ ನಾನು ಈ ಹೌಸಿನಲ್ಲೇ ಕುಳಿತುಕೊಂಡುಬಿಡುತ್ತೇನೆ. ಜನಗಳಿಗೆ ತೊಂದರೆ ಆಗುವಾಗ ತಾವು ಟೌನ್ ಪ್ಲಾನಿಂಗ್ ಬಿಲ್ ತರಬಾರದು, ನಮಗೂ ಅದಕ್ಕೂ ಸಂಬಂಧವಿಲ್ಲ, ಕಾರ್ಪೋರೇಷನ್ ವ್ಯವಹಾರ ಕಾರ್ಪೋರೇಷನ್‌ಗೇ ಇರಲಿ, ಅಧಿಕಾರಿಗಳು ಇದ್ದಾರೆ. ಕೋಟ್ಯಾಂತರ ರೂಪಾಯಿ ವಸೂಲು ಮಾಡುತ್ತಾರೆ. ಒಂದು ಮನೆಗೆ 200-300 ರೂಪಾಯಿ ಕಂದಾಯ ಹಾಕಿದರೆ ಬಡವರು ಹೇಗೆ ಜೀವನ ಮಾಡಬೇಕು ? ಅವರ ಮಕ್ಕಳ ವಿದ್ಯಾಭ್ಯಾಸ ಮಾಡಿಸುತ್ತಾರೆಯೇ ? ಅವರ ಬಟ್ಟೆ ಬರೆ ನೋಡಿಕೊಳ್ಳುತ್ತಾರೆಯೇ ? ಅವರ ಸಂಸಾರ ಮಾಡುವುದು ಹೇಗೆ ! ಬಹಳ ಕಷ್ಟ ಇದೆ. ಈ ಕಷ್ಟ ನಿಮಗೂ ಸಹ ಗೊತ್ತಿದೆ. ನೀವೂ ಸಹ ಕಷ್ಟ ಬಿದ್ದು ಬಂದವರೇ, ಆದ್ದರಿಂದ ಧರ್ಮವಾಗಿರಬೇಕೆಂದು ಕೈ ಜೋಡಿಸಿ ಹೇಳುತ್ತೇನೆ. ಜನಗಳ ಕಷ್ಟ ಪರಿಹರಿಸುವುದಕ್ಕೆ ನಾವು ಪ್ರಯತ್ನ ಮಾಡದೆ ಇದ್ದರೆ ನಾವು ಇಲ್ಲಿ ಬಂದು ಕುಳಿತುಕೊಂಡು ತಾನೆ ಏನು ಪ್ರಯೋಜನ ? ಯಾವ ಬಿಲ್ ಪಾಸ್ ಮಾಡಬೇಕು, ಯಾವ ಬಿಲ್ ಪಾಸ್ ಮಾಡಬಾರದು ಎಂಬುದನ್ನು ಚೆನ್ನಾಗಿ ಯೋಚನೆ ಮಾಡಿ ಮಾಡಬೇಕು, ಇದು ದೇವರ ಸಭೆ, ನಾವು ಇಲ್ಲಿ ಕುಳಿತಿರುವುದು ಒಳ್ಳೆಯದು ಮಾಡುವುದಕ್ಕೆ. ಕಚ್ಚಾಡುವುದಕ್ಕೆ ಅಲ್ಲ. ಶ್ರೀಮಾನ್ ಬಿ. ಎಂ. ಪಾಟೀಲ್‌ರವರೂ ಸಹ ಇದನ್ನೆಲ್ಲಾ ಚೆನ್ನಾಗಿ, ಯೋಚನೆ ಮಾಡುತ್ತಾರೆ ಅಂತ ಹೇಳಿ ನನಗೆ ನಂಬಿಕೆ ಇದೆ. ಈ ಬಿಲ್‌ನಲ್ಲಿ ಸೂಚನೆ ಮಾಡಿದ್ದೀರಿ. ಈ ಪ್ರಕಾರ ಎಲೆಕ್ಷನ್ ಮಾಡದೇ ಇದ್ದರೆ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಕಾರ್ಪೋರೇಷನ್‌ನಲ್ಲಿ ಹೇಳುವವರು ಕೇಳುವವರು ಇಲ್ಲ. ನಾವು ಅಲ್ಲಿಗೆ ಹೋದರೆ ನೂರಾರು ಜನರು ನಮ್ಮನ್ನು ಮುತ್ತಿಕೊಳ್ಳುತ್ತಾರೆ, ಅವರ ಕಷ್ಟಗಳನ್ನು ಪರಿಹಾರ ಮಾಡುವುದಕ್ಕೆ ಬಹಳ ತೊಂದರೆಯಾಗುತ್ತಾ ಇದೆ. ಮಂತ್ರಿಗಳಿಗೂ ಕೂಡ ಇದೆಲ್ಲಾ ಗೊತ್ತಿದೆ. ಕಾರ್ಪೋರೇಷನ್ ವ್ಯವಹಾರ ಹೇಗಿದೆ ಅಂತ ಹೇಳಿ ಅವರೂ ಅನುಭವ ಪಟ್ಟಿದ್ದಾರೆ ; ಈ ಒಂದು-ಒಂದೂವರೆ ವರ್ಷದಲ್ಲಿ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ ಬೇರೆ ಏನೇ ಅಡ್ಡಿ ಆತಂಕಗಳಿದ್ದರೂ ಅದನ್ನೆಲಾ ಬದಿಗೊತ್ತಿ ಚುನಾವಣೆ ನಡೆಸಬೇಕೆಂದು ಕೈ ಮುಗಿದು ಹೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೂ ಕೂಡ ಎಷ್ಟೋ ಶಾಂತಿಯಿಂದ ನನ್ನ ಮಾತುಗಳನ್ನು ಕೇಳಿದ್ದಾರೆ. ನಾನು ಕೈ ಮುಗಿದು ಅವರಲ್ಲಿ ಹೇಳುತ್ತೇನೆ, ನಾನು ಯಾವತ್ತೂ ಮಾತನಾಡುವುದಿಲ್ಲ. ಯಾವುದೋ ಒಂದೊಂದು ಸಂದರ್ಭ ಬಂದಾಗ ಮಾತ್ರ ಮಾತನಾಡುತ್ತೇನೆ, ತಮ್ಮನ್ನು ನಗಿಸುವುದು ನನ್ನ ಉದ್ದೇಶವಿಲ್ಲ, ಎಲ್ಲರೂ ಹ್ಯಾಪಿ ಆಗಿರಬೇಕು, ಹಸನ್ಮುಖರಾಗಿರಬೇಕು ಎಂಬ ಉದ್ದೇಶದಿಂದ ಮಾತನಾಡುತ್ತೇನೆ. ನಾವು ಯಾವಾಗಲೂ ಒಳ್ಳೆಯ ಮಾತನಾಡಬೇಕು, ಒಳ್ಳೆಯದಕ್ಕೆ ಯಾವಾಗಲೂ ಬೆಲೆ ಸಿಕ್ಕುತ್ತದೆ, ಕೆಟ್ಟದ್ದಕ್ಕೆ ಬೆಲೆ ಸಿಕ್ಕುವುದಿಲ್ಲ. ಇಲ್ಲಿ ಮಾತನಾಡುವಾಗ ಇದು ಮೀನ್ಸು ಮಾರ್ಕೆಟ್‌ನಂತೆ ಆಗಬಾರದು, ಯಾರು ಏನು ಹೇಳುತ್ತಾರೆ ಎಂಬುದು ಎಲ್ಲರಿಗೂ ಗೊತ್ತಾಗಬೇಕು. ನಾವು ಜನಗಳ ಪ್ರತಿನಿಧಿಗಳು, ಪ್ರೀತಿ ವಿಶ್ವಾಸದಿಂದ ಬಾಳಿ ಬದುಕಬೇಕು. ಇದು ನಮ್ಮ ದೇಶ, ನಮ್ಮ ಭೂಮಿ ಎಂಬ ವಿಶ್ವಾಸ ನಮ್ಮಲ್ಲಿ ಇರಬೇಕು. ನಾವು ಹಣ್ಣಿನ ಅಂಗಡಿಗೆ ಹೋದರೆ ಒಳ್ಳೆಯ ಹಣ್ಣನ್ನೇ ಹೇಗೆ ಆರಿಸಿಕೊಂಡು ಕೆಟ್ಟದ್ದನ್ನು ಬಿಟ್ಟುಬಿಡುತ್ತೇವೆಯೋ ಅದೇ ರೀತಿ ಒಳ್ಳೆಯ ಮಾತುಗಳನ್ನು ಆಡಿ ಕೆಟ್ಟ ಮಾತುಗಳನ್ನು ಬಿಟ್ಟುಬಿಡಬೇಕು. ಜನ ನಾವು ಇಲ್ಲಿ ಏನು ಮಾತನಾಡುತ್ತೇವೆ ಎಂಬುದನ್ನು ಈ ಹೌಸ್‌ನಲ್ಲಿ ಬಂದು ಇಲ್ಲಿ ಏನು ನಡೆದಿದೆ ಎಂಬುದನ್ನು ನೋಡುತ್ತಾರೆ. ಆದ್ದರಿಂದ ನಮ್ಮ ಮಾತು ಒಳ್ಳೆಯದಾದರೆ ನಮ್ಮ ಭವಿಷ್ಯ ಒಳ್ಳೆಯದಾಗುತ್ತದೆ, ನಮ್ಮ

ಹೌಸ್‌ಗೂ, ನಮ್ಮ ರಾಜ್ಯಕ್ಕೂ ಕೀರ್ತಿ ಬರುತ್ತದೆ. ನಮ್ಮದು ರಾಮ ರಾಜ್ಯ ಎಂದು ಹೇಳುತ್ತಾರೆ. ಇಲ್ಲದೇ ಹೋದರೆ ಇದು ರಾಕ್ಷಸ ರಾಜ್ಯವಾಗಿ ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳಿ ಈ ಬಿಲ್ ಮೇಲೆ ಒಂದೆರಡು ಮಾತುಗಳನ್ನಾಡಲು ಮಾನ್ಯ ಸ್ಪೀಕರ್‌ರವರು ನನಗ ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದೆ ಮಾನ್ಯ ಮುಂತ್ರಿಗಳಾದ ಶ್ರೀಮಾನ್ ಪಾಟೀಲ್‌ರವರು ಈ ಒಂದು ಬಿಲ್‌ನ್ನು ಇಟ್ಟಿದ್ದಾರೆ. ತಮಗೆಲ್ಲರಿಗೂ ತಿಳಿದಿರುವ ಹಾಗೆ ಈ ಬಿಲ್ಲು ಬರುವುದಕ್ಕಿಂತ ಮುಂಚೆ ಒಂದು ಆರ್ಡಿನನ್ಸ್‌ನ್ನು ತೆಗೆದುಕೊಂಡು ಬಂದಿದ್ದರು. ಅದಕ್ಕೆ ಬದಲಾಗಿ ಈ ಬಿಲ್‌ನ್ನು ಇವತ್ತಿನ ದಿವಸ ತಂದಿದ್ದಾರೆ. ಮೊದಲನೆಯ ಪ್ರಶ್ನೆ ಬರುವುದು ಏನೆಂದರೆ ಈ ತರಹ ಆರ್ಡಿನನ್ಸ್‌ನ್ನು ತರಬೇಕಾಗಿತ್ತೇ ಎಂಬುದು. ಇದರ ಬಗ್ಗೆ ಶ್ರೀಮಾನ್ ನಾಗಪ್ಪನವರು ಒಂದೆರಡು ವಿಷಯಗಳನ್ನು ಹೇಳಿದ್ದಾರೆ. ನಾನೂ ಸಹ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಏಕೆಂದರೆ ಇದು ಮೊದಲನೆಯ ಆರ್ಡಿನೆನ್ಸ್ ಅಲ್ಲ, ಇನ್ನೂ ಇತರ ಆರ್ಡಿನನ್ಸ್‌ಗಳನ್ನು ಆಗಿಂದಾಗ್ಗೆ ತೆಗೆದುಕೊಂಡು ಬರುತ್ತಲೇ ಇರುತ್ತಾರೆ. ಆಗಲೇ 7-8 ಆರ್ಡಿನನ್ಸ್‌ಗಳನ್ನು ತೆಗೆದುಕೊಂಡು ಬಂದಿದ್ದಾರೆ. ಕಾನೂನು ಪ್ರಕಾರ ಆರ್ಡಿನೆನ್ಸ್‌ಗಳನ್ನು ತೆಗೆದುಕೊಂಡು ಬರುವುದಕ್ಕೆ ನಿಮಗೆ ಅಧಿಕಾರ ಇದೆ. ಯಾವಾಗ ಲೆಜಿಸ್ಲೇಚರ್ ಸೆಷನ್‌ನಲ್ಲಿ ಇರುವುದಿಲ್ಲವೋ ಅಂತಹ ಸಂದರ್ಭದಲ್ಲಿ ಗವರ್ನರ್‌ರವರು ಆರ್ಡಿನೆನ್ಸ್‌ಗಳನ್ನು ತೆಗೆದುಕೊಂಡು ಬರಬಹುದು, ಆರ್ಟಿಕಲ್ 213ರ ಪ್ರಕಾರ ತೆಗೆದುಕೊಂಡು ಬರುವ ಅಧಿಕಾರ ಅವರಿಗೆ ಇದೆ. ಇದರಲ್ಲಿ ಏನು ಹೇಳಿದೆ ಎಂದರೆ :

> "If at any time, except when the Legislative Assembly of a State is in session, or where there is a Legislative Council in a State, except when both Houses of the Legislature are in session, the Governor is satisfied that circumstances exist which render it necessary for him to take immediate action, he may promulgate such Ordinances as the circumstances appear to him to require."

How can the Governor be satisfied unless the Conncil of Ministers apprise him of various acts and circumstances ? ಗವರ್ನರ್ ಸ್ಯಾಟಿಸ್‌ಫೈ ಆಗಬೇಕೆನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅವರಿಗೆ ಇದು ಸ್ಯಾಟಿಸ್‌ಫೈ ಆದರೆ ಸಾಕು. ಕ್ವೆಶ್ಚನ್ ಮಾಡುವ ಹಾಗಿಲ್ಲ. ಗವರ್ನರ್ ಸ್ಯಾಟಿಸ್‌ಫೈ ಆಗಬೇಕು ಎಂದರೆ ಏನು ಎಂದು ಪ್ರಶ್ನೆ ಹಾಕಬಹುದು. ಕೋರ್ಟಿಗೆ ಹೋಗಬಹುದು ಎಂದು ಕೆಲವು ತೀರ್ಮಾನಗಳನ್ನು ನೀಡಿದ್ದಾರೆ. ಒಂದೆರಡು ತೀರ್ಮಾನಗಳು ಇವತ್ತಿನ ದಿವಸ ನಮ್ಮ ಮುಂದೆ ಇವೆ, ಅವನ್ನು ನಾನು ಓದುವುದಿಲ್ಲ. ಒಂದು ತೀರ್ಮಾನ 1950ನೇ ಇಸವಿ ಎ.ಐ.ಆರ್. ಲಕ್ಷ್ಮೀನಾರಾಯಣವರ್ಮ ವರ್ಸಸ್ ಪ್ರಾವಿನ್ಸ್ ಆಫ್ ಬಿಹಾರ್. ಇನ್ನೊಂದು ಎ.ಐ.ಆರ್. 1968—ಈ ಎರಡೂ ಕೋರ್ಟಿನ ತೀರ್ಮಾನಗಳು ನಮ್ಮ ಮುಂದೆ ಇವೆ. ಗವರ್ನರ್‌ರವರು ಆರ್ಡಿನೆನ್ಸ್ ತೆಗೆದುಕೊಂಡು ಬರುವುದನ್ನು ಪ್ರಶ್ನೆ ಮಾಡುವುದಕ್ಕೆ ಸಾಧ್ಯತೆ ಇದೆಯೇ ಎಂಬುದು ಮೊದಲನೆಯ ಪ್ರಶ್ನೆ. ಆ ರೀತಿ ಆರ್ಡಿನೆನ್ಸ್ ತರಬೇಕಾದರೆ ಯಾವ ಆಧಾರದ ಮೇಲೆ ತರಬಹುದು ಎಂಬುದು ಎರಡನೆಯ ಪ್ರಶ್ನೆ. ಇದರಲ್ಲಿ ಮೊದಲನೆಯ ಪ್ರಶ್ನೆಗೆ ಅವರು ಉತ್ತರ ಕೊಟ್ಟಿದ್ದಾರೆ. ಗವರ್ನರ್‌ರವರು ತಂದ ಸುಗ್ರೀವಾಜ್ಞೆಗಳನ್ನು ಪರಿಶೀಲನೆ ಮಾಡಿ ಸರಿಯಾಗಿದೆಯೋ, ತಪ್ಪಾಗಿದೆಯೋ ಎಂದು ಹೇಳುವ ಅಧಿಕಾರ ನಮಗೆ ಇಲ್ಲ ಎಂದು ಅವರು ಹೇಳಿದ್ದಾರೆ. ಅದರ ವಿಷಯ ನಾನು ಹೇಳುವುದಕ್ಕೆ ಹೋಗುವುದಿಲ್ಲ.

5-00 P.M.

ಅದಕ್ಕಿಂತ ಮುಖ್ಯವಾದದ್ದು ಗವರ್ನರ್‌ರವರು ಸುಗ್ರೀವಾಜ್ಞೆ ಹೊರಡಿಸಬೇಕಾದರೆ ಮಂತ್ರಿಗಳು ಹೇಳಿದರೆ ಮಾತ್ರ ಸುಗ್ರೀವಾಜ್ಞೆಯನ್ನು ಹೊರಡಿಸುತ್ತಾರೆ. ಈವೊತ್ತಿನ ದಿವಸ ನನ್ನ ಆಪಾದನೆ ಏನಿದೆ ಎಂದರೆ ಈ ಆರ್ಡಿನೆನ್ಸ್ ತರುವುದಕ್ಕೆ ಮುಂಚೆ, ಬಿಲ್ ತರುವುದಕ್ಕೆ ಮುಂಚೆ ಮುಖ್ಯವಾಗಿ ಆರ್ಡಿನೆನ್ಸ್ ಬಗ್ಗೆ ಎಷ್ಟು ತಿಳುವಳಿಕೆ ಮಂತ್ರಿಗಳು ಕೊಡಬೇಕೋ ಅವನ್ನು ಕೊಟ್ಟಿಲ್ಲ ಮತ್ತು ಸರಿಯಾದ ತಿಳುವಳಿಕೆ ಕೊಟ್ಟಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಅವರು ಬೇಜವಾಬ್ದಾರಿಯುತವಾಗಿ ತಮ್ಮ ಕರ್ತವ್ಯ ಪಾಲನೆ ಸರಿಯಾಗಿ ಮಾಡಿಲ್ಲ ಎನ್ನುವುದು ನನ್ನ ಸ್ಪಷ್ಟವಾದ

(ಶ್ರೀ ಎಂ. ಎಸ್. ಕೃಷ್ಣನ್)

ಅಭಿಪ್ರಾಯ. ಈವೊತ್ತು ಈ ಆರ್ಡಿನೆನ್ಸನ್ನು ರಿಪೀಲ್ ಮಾಡುವುದಕ್ಕೆ ಈ ಬಿಲ್ಲನ್ನು ತೆಗೆದುಕೊಂಡು ಬಂದಿದ್ದೀರಿ. ಈ ಬಿಲ್ಲಿನಲ್ಲಿ ಬರೀ ಚುನಾವಣೆಗೆ ಮಾತ್ರ ಸಂಬಂಧಪಟ್ಟ ವಿಷಯವಿದ್ದಿದ್ದರೆ ನಾನು ಅದನ್ನು ಹೆಚ್ಚು ವಿರೋಧ ಮಾಡುತ್ತಾ ಇರಲಿಲ್ಲ. ಕಾರ್ಪೊರೇಷನ್ ಚುನಾವಣೆಯನ್ನು ನಡಸಬೇಕೆಂದು ನಾವು ಪದೇಪದೇ ಒತ್ತಾಯ ಮಾಡುತ್ತಲೇ ಇದ್ದೇವೆ. ಕಾರ್ಪೊರೇಷನ್‌ನ್ನು ಸೂಪರ್‌ಸೀಡ್ ಮಾಡಿರುವುದು ಸರಿಯಲ್ಲವೆಂದು ಹೇಳುತ್ತೇನೆ. ಮಾನ್ಯ ನಂಜಪ್ಪನವರು ಸಹ ಸೂಪರ್‌ಸೀಡ್ ಮಾಡಿದ್ದು ಸರಿ. ಪೌರಸಮಿತಿಯವರು ಸರಿಯಾಗಿ ನಡೆದುಕೊಂಡಿಲ್ಲ. ಅವರು ಇದ್ದಾಗ ಸರಿಯಾಗಿ ನಡೆದುಕೊಳುತ್ತಿದ್ದರು ಎಂದು ಹೇಳಿದರು. ನಾನು ನೇರವಾಗಿ ಅಸೆಂಬ್ಲಿಗೆ ಚುನಾಯಿತನಾಗಿ ಬಂದವನು. ಆದರೆ ಮಾನ್ಯ ಸದಸ್ಯರಾದ ಶಾಮಣ್ಣನವರು, ಅಥವಾ ಮಾನ್ಯ ನಂಜಪ್ಪನವರು ಕಾರ್ಪೊರೇಷನ್ನಿನಲ್ಲಿ ಒಳಹೊಕ್ಕು ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಚುನಾಯಿತ ಪ್ರತಿನಿಧಿಗಳು ಆಡಳಿತ ನಡೆಸುವುದು ಸರಿಯೇ ಅಥವಾ ಆಡಳಿತ ಅಧಿಕಾರಿಗಳು ಎಷ್ಟೇ ಒಳ್ಳೆಯವರಾಗಿರಲಿ ಅವರು ಆಡಳಿತ ನಡೆಸುವುದು ಸರಿಯೇ ಎಂಬ ಪ್ರಶ್ನೆ ಬಂದಾಗ ಯಾರು ಪ್ರಜಾಪ್ರಭುತ್ವಕ್ಕೆ ಕಟ್ಟುಬಿದ್ದಿದ್ದಾರೆ, ಯಾರು ಪ್ರಜಾಪ್ರಭುತ್ವದ ನೀತಿಗೆ ಅನುಸಾರವಾಗಿ ನಡೆಯಬೇಕು ಎಂದು ಹೇಳುತ್ತಾರೋ ಅವರು ಆಡಳಿತ ಅಧಿಕಾರಿಗಳು ಇರಕೂಡದು, ಚುನಾಯಿತ ಪ್ರತಿನಿಧಿಗಳೇ ಇರಬೇಕೆಂದು ಸ್ಪಷ್ಟವಾಗಿ ಹೇಳುತ್ತಾರೆ. ಆಡಳಿತ ಅಧಿಕಾರಿಗಳು ಇದ್ದರೆ ಬಹಳ ಚೆನ್ನಾಗಿ ಕೆಲಸ ಕಾರ್ಯಗಳು ನಡೆದುಕೊಂಡು ಹೋಗುತ್ತವೆ ಎಂದು ಕೆಲವರ ವಾದ ಇದೆ. ಈವೊತ್ತಿನ ದಿವಸ ಬೆಂಗಳೂರು ನಗರದಲ್ಲಿ ಈಗ ಕಾರ್ಪೊರೇಷನ್ ಆಡಳಿತ ಬಹಳ ಚೆನ್ನಾಗಿ ನಡೆಯುತ್ತಾ ಇದೆ, ರೋಡುಗಳನ್ನು ಅಗಲ ಮಾಡಿದ್ದಾರೆ, ಟಾರು ಹಾಕಿದ್ದಾರೆ, ಲೈಟುಗಳನ್ನು ಹಾಕಿದ್ದಾರೆ ಎಂದು ಕೆಲವರು ಹೇಳುತ್ತಾರೆ. ಹೀಗಿರಬೇಕಾದರೆ ಆಡಳಿತ ಅಧಿಕಾರಿಗಳ ಆಡಳಿತ ಹೋಗಬೇಕು, ಚುನಾಯಿತ ಪ್ರತಿನಿಧಿಗಳೇ ಯಾಕೆ ಬರಬೇಕು ಎಂದು ಕೆಲವರು ಪ್ರಶ್ನೆ ಮಾಡುತ್ತಾ ಇದ್ದಾರೆ. ಯಾಕೆ ಆಡಳಿತ ಅಧಿಕಾರಿಗಳೇ ಮುಂದುವರಿಸಿಕೊಂಡು ಹೋಗಬಾರದು ಎಂದು ಕೆಲವರ ಅಭಿಪ್ರಾಯವಿದೆ. ಈವೊತ್ತಿನ ದಿವಸ ಬೆಂಗಳೂರಿನ ವಿದ್ಯಾವಂತ ಪ್ರತಿನಿಧಿಗಳೂ, ನಾಗರೀಕರೂ ಸಹ ಈ ರೀತಿ ಮಾತನಾಡುತ್ತಿದ್ದಾರೆ. ನಾನು ಪತ್ರಿಕೆಗಳಲ್ಲಿ ಕೂಡ ಓದಿದ್ದೇನೆ. ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಒಂದು ಲೇಖನ ಕೂಡ ಬಂದಿದೆ. ಕಾರ್ಪೊರೇಷನ್ ಆಡಳಿತ ಅಧಿಕಾರಿಗಳು ಮೂರು—ನಾಲ್ಕು ವರ್ಷಗಳಿಂದ ಆಡಳಿತವನ್ನು ಚೆನ್ನಾಗಿ ನಡೆಸಿಕೊಂಡು ಬಂದಿದ್ದಾರೆ ಎನ್ನುವ ರೀತಿಯಲ್ಲಿ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ರೋಡುಗಳನ್ನು ಅಗಲ ಮಾಡಿದ್ದಾರೆ, ಟಾರು ಹಾಕಿದ್ದಾರೆ, ಲೈಟುಗಳನ್ನು ಹಾಕಿದ್ದಾರೆ—ಈ ತರಹ ಕಣ್ಣಿಗೆ ಕಾಣುವ ಕೆಲಸಗಳು ನಡೆಯುತ್ತಾ ಇವೆ. ಆದುದರಿಂದ ಆಡಳಿತ ಅಧಿಕಾರಿಗಳೇ ಮುಂದುವರಿಸಿಕೊಂಡು ಹೋಗುವುದು ಒಳ್ಳೆಯದೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಇದು ತಪ್ಪು ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಈವೊತ್ತು ಬರುವ ಹಣವನ್ನೆಲ್ಲಾ ರಸ್ತೆ ರಿಪೇರಿಗೆ, ದೊಡ್ಡದೊಡ್ಡ ರೋಡುಗಳನ್ನು ಮಾಡಲು ಖರ್ಚುಮಾಡಿ ಬೆಂಗಳೂರು ನಗರದಲ್ಲಿ ಕಣ್ಣಿಗೆ ಕಾಣಿಸುವಂತೆ ಕೆಲಸ ಮಾತ್ರ ಮಾಡುತ್ತಿದ್ದಾರೆ. ಈವೊತ್ತಿನ ದಿವಸ ಸಾಮಾನ್ಯ ಜನಗಳು ವಾಸಿಸುವಂಥ ಯಶವಂತಪುರ, ಸುಬ್ರಮಣ್ಯನಗರ ಅಂಥ ಕಡೆ ಬನ್ನಿ, ಕರೆದುಕೊಂಡು ಹೋಗುತ್ತೇನೆ. ಶ್ರೀಮಾನ್ ನಂಜಪ್ಪನವರು ಹೇಳಿದಹಾಗೆ ಹಳೇ ಕನ್‌ಟೋನ್‌ಮೆಂಟ್ ಏರಿಯಾಗೆ ಹೋಗಿ ನೋಡಿ. ಅಲ್ಲಿಯ ನಾಗರೀಕರು ವಾಸಿಸುವುದಕ್ಕೆ ಅಲ್ಲಿ ಎಷ್ಟು ಸೌಲಭ್ಯಗಳು ಬೇಕು, ಆ ಸೌಲಭ್ಯಗಳನ್ನು ಅಧಿಕಾರಿಗಳು ಕಲ್ಪಿಸುವುದಕ್ಕೆ ಸಾಧ್ಯವಾಗಿದೆಯೇ ? ಸಾಧ್ಯವಾಗುವುದಿಲ್ಲ, ಸಾಧ್ಯವಾಗುವ ಹಾಗೂ ಇಲ್ಲ. ಯಾರೋ ಒಬ್ಬ ಅಧಿಕಾರಿಗಳು ಮೇಲೆ ಕೂತಿರುತ್ತಾರೆ. ಅವರು ಎಷ್ಟು ಒಳ್ಳೆಯವರು ಇದ್ದರೂ ಸಹ, ಎಲ್ಲವನ್ನೂ ನೋಡುವುದಕ್ಕೆ ಆಗುವುದಿಲ್ಲ. ಚುನಾಯಿತ ಪ್ರತಿನಿಧಿಗಳು ಇದ್ದರೆ, ಅವರಿಗೆ ಅಕ್ಕರೆ ಇರುತ್ತದೆ. ಹೇಗಾದರೂ ಮಾಡಿ ಜನಗಳಿಗೆ ಅನುಕೂಲ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಮೂಲಭೂತ ಪ್ರಜಾಪ್ರಭುತ್ವಕ್ಕೆ ತಿಲಾಂಜಲಿ ಕೊಟ್ಟಹಾಗೆ ಇಲ್ಲಿ ಆಡಳಿತ ಇರಹಹುದು, ಅಥವಾ ಗೌರ್ನರ್‌ರವರ ಆಡಳಿತ ಇರಬಹುದು ಅಥವಾ ಪ್ರೆಸಿಡೆಂಟರ ಆಡಳಿತ ಬರಬೇಕು ಎಂದು ಅಭಿಪ್ರಾಯ ಬಂದರೂ ಬರಬಹುದು. ಆದರೆ ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದರಿದ ನಾನು ಇದನ್ನು ಒಪ್ಪಿಕೊಳ್ಳುವುದಕ್ಕೆ ತಯಾರು ಇಲ್ಲ. ಹೇಗಾದರೂ ಚುನಾವಣೆ ನಡೆಯಲೇಬೇಕು. ಮಾನ್ಯ ನಂಜಪ್ಪನವರೂ ಸಹ ಇದೇ ಮಾತನ್ನು ಇಲ್ಲೂ ಮತ್ತು ಹೊರಗಡೆಯೂ ಸಹ ಹೇಳಿದ್ದಾರೆ. ಬಹಳ ಸಂತೋಷ, ಚುನಾವಣೆ ನಡೆಯಲೇಬೇಕು. ಈ ಚುನಾವಣೆ ನಡೆಸುವುದರಲ್ಲಿ ಕೆಲವು ಲೋಪದೋಷಗಳು ಇವೆ. ಆ ಲೋಪದೋಷಗಳನ್ನು ತಿದ್ದುಪಡಿ ಮಾಡಿ ಆದಷ್ಟು ಬೇಗ ಚುನಾವಣೆ ನಡೆಸುತ್ತೇವೆ ಎಂದು ಹೇಳಿ ಈಗಾಗಲೇ ನಾಲ್ಕು

ವರ್ಷಗಳಾದವು. ಯಾವ ಲೋಪದೋಷಗಳನ್ನು ತಿದ್ದುಪಡಿ ಮಾಡಬೇಕೋ ಅದನ್ನು ಮಾತ್ರ ಮಾಡಿ ಚುನಾವಣೆ ನಡೆಸಿ ಮಿಕ್ಕ ವಿಷಯಗಳನ್ನು ಬದಿಗೊತ್ತಿ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಒಂದು ಕಾನೂನು ತಂದಿದ್ದರೆ ಅದಕ್ಕೆ ನಾನು ವಿರೋಧ ಹೇಳುತ್ತಿರಲಿಲ್ಲ. ಆದರೆ ಈವೊತ್ತಿನ ದಿವಸ ಏನಾಗಿದೆ ಎಂದರೆ ಎಲೆಕ್ಷನ್ ವಿಷಯವನ್ನು ತೆಗೆದುಕೊಂಡು ಬಂದಿದ್ದಾರೆ. ಎಲೆಕ್ಟೊರಲ್ ರೋಲ್ ವಿಷಯ, ಟ್ಯಾಕ್ಸ್ ಯಾವ ರೀತಿ ವಸೂಲು ಮಾಡಬೇಕು, ಯಾವ ರೀತಿ ವಸೂಲು ಮಾಡ ಬಾರದು ಎಂದು ಹೇಳಿದ್ದಾರೆ. ಹೊಸದಾಗಿ ಪ್ಲಾನ್ ಅಥಾರಿಟಿ ಅಂತ ಕ್ರಿಯೇಟ್ ಮಾಡಿ ಅವರಿಗೆ ಅಧಿಕಾರ ಕೊಟ್ಟಿದ್ದಾರೆ. ಯಾವ ಅಂಶಗಳನ್ನು ಸೇರ್ಪಡೆ ಮಾಡಕೂಡದೋ ಅಂತವುಗಳನ್ನು ಸೇರಿಸುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ, ಅದು ಸರಿಯಲ್ಲ. ಆಡಳಿತ ಅಧಿಕಾರಿಗಳು ಎಲ್ಲವನ್ನೂ ಪರಿಶೀಲನೆ ಮಾಡಿ ನೋಡಿದ್ದಾರೆಯೇ! ಚುನಾಯಿತ ಪ್ರತಿನಿಧಿಗಳು ಇದ್ದರೆ ಪ್ರತಿಯೊಂದನ್ನೂ ಪರಿಶೀಲನೆ ಮಾಡಿ ಚರ್ಚೆ ಮಾಡಿ ಏನೇನು ವ್ಯತಿರೇಕಗಳು ಇವೆ, ಏನೇನು ಅಂಶಗಳು ಜನ ಗಳಿಗೆ ವಿರೋಧವಾಗಿದೆ, ಯಾವ ಯಾವ ತಿದ್ದುಪಡಿ ತರಬೇಕು ಎಂದು ಕಾರ್ಪೊರೇಷನ್ ಆಕ್ಟಿಗೆ ಒಂದು ಸಮಗ್ರವಾದ ತಿದ್ದುಪಡಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಅದೂ ಅಲ್ಲದೆ ಈವೊತ್ತು ಆಡಳಿತ ಅಧಿಕಾರಿಗಳ ಕೈಗೆ ಆಡಳಿತ ಕೊಟ್ಟು ಅವರಿಗೆ ಬೇಕಾದಂತೆ ಅನುಕೂಲಗಳನ್ನು ಮಾಡಿ ಕೊಳ್ಳುವುದಕ್ಕೆ ತಂಪಂತಹ ತಿದ್ದುಪಡಿಗಳನ್ನು ಈ ಬಿಲ್ ಮೂಲಕ ನಮ್ಮ ಮುಂದೆ ಮಂಡಿಸಿದರೆ ಯಾವ ರೀತಿ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? ಮಾನ್ಯ ಮಂತ್ರಿಗಳಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದಿದ್ದರೆ ಈ ಬಿಲ್ಲನ್ನು ತೆಗೆದುಕೊಂಡು ಬರುತ್ತಾ ಇರಲಿಲ್ಲ ಎಂಬುದು ನನ್ನ ಅಭಿಪ್ರಾಯ. ಅವರು ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಕಳೆದುಕೊಂಡಿದ್ದಾರೆ ಎಂದು ನನ್ನ ಅಭಿಪ್ರಾಯ. ಚುನಾಯಿತ ಪ್ರತಿನಿಧಿಗಳ ಕೈಗೆ ಆಡಳಿತ ಕೊಡಿ, ಪೌರ ಸಮಿತಿಯೇ ಬರಲಿ, ಕಾಂಗ್ರೆಸ್ (ಒ) ಬರಲಿ; ಕಾಂಗ್ರೆಸ್ (ಆರ್) ಬರಲಿ, ಯಾರೇ ಬರಲಿ, ನೀವು ಬರುವುದು ಮಾತ್ರ ಬಹಳ ಕಷ್ಟ ಎಂದು ನನಗೆ ಗೊತ್ತಿದೆ. ಬೆಂಗಳೂರು ನಗರದ ನಾಡಿ ಹಿಡಿದು ನೋಡಿದರೆ ನಿಮ್ಮ ನಾಡಿ ಡೌನ್ ಆಗಿದೆ. ಕೇರಳದಲ್ಲಿ ನೀವು ಮಣ್ಣು ಮುಕ್ಕಿದ್ದೀರಿ. ಇಲ್ಲಿ ಮಣ್ಣುಮುಕ್ಕುವ ಪ್ರಸಂಗ ಬಂದಿದೆ. ಒಂದು ವೇಳೆ ನೀವೇ ಅಧಿಕಾರಕ್ಕೆ ಬಂದು ಸಮಗ್ರವಾಗಿ ಬೆಂಗಳೂರು ಕಾರ್ಪೊರೇಷನ್ ಆಕ್ಟಿಗೆ ತಿದ್ದುಪಡಿ ಗಳನ್ನು ತೆಗೆದುಕೊಂಡು ಬಂದರೆ ಆಗ ನೋಡೋಣ.

ಶ್ರೀ ಬಿ. ಎಂ. ಪಾಟೀಲ್.—ಚುನಾವಣೆ ಮಾಡುತ್ತಿರುವುದು ಚುನಾವಣೆ ಬೇಗನೆ ಆಗಲ, ನೀವು ಬೇಗನೆ ಆಡಳಿತಕ್ಕೆ ಬರಲಿ ಎಂದು ತಂದಿದ್ದು.

ಶ್ರೀ ಎಂ. ಎಸ್. ಕೃಷ್ಣನ್.—ಚುನಾವಣಾ ಎಲೆಕ್ಟೋರಲ್ ಸರಿಯಾಗಿ ಇಲ್ಲ. ಅಸೆಂಬ್ಲಿ ಎಲೆಕ್ಟೋರಲ್ ರೋಲ್ ಇಲ್ಲಿ ಬರಬೇಕು, ಅದನ್ನು ಮಾಡಿ. ರಾಜಾಜಿನಗರ ಒಂದು ಕಾರ್ಪೊರೇಷನ್ ಡಿವಿಜನ್. ಅಲ್ಲಿ 33 ಸಹಸ್ರ ಜನಕ್ಕೆ ಒಬ್ಬ ಪ್ರತಿನಿಧಿ. ಟ್ಯಾನ್ನರ್ ಟೌನ್ ಮತ್ತು ಇನ್ನೂ ಕೆಲವು ಪ್ರದೇಶಗಳನ್ನೇ ನೋಡಿ. ಅಲ್ಲಿ 10 ಸಾವಿರ ಜನ ಕೂಡ ಇಲ್ಲ. 6 ಸಾವಿರ, 8 ಸಾವಿರಕ್ಕೆ ಒಬ್ಬ ಪ್ರತಿನಿಧಿ. ಇದು ಸರಿಯಾದುದೆ! ನಾನು ಪದೇಪದೇ ಮಾನ್ಯ ಶ್ರೀ ಪಾಟೀಲರಲ್ಲಿ ಮಾತನಾಡಿ ಹೇಳಿದ್ದೇನೆ. ಇಲ್ಲಿಯೂ ಕೂಡ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಚುನಾವಣೆ ಎಲೆಕ್ಟೋರಲ್ ರೋಲ್ಸ್ ಬಗ್ಗೆ ಮತ್ತು ಕಾನ್ಸ್ಟಿಟ್ಯೂಯನ್ಸಿ ಬಗ್ಗೆ ಏನಾದರೂ ತಿದ್ದುಪಡಿಗಳನ್ನು ತಂದು ಆ ಒಂದು ಆಧಾರದ ಮೇಲೆ ಚುನಾವಣೆ ನಡೆಯಬೇಕೆಂದು ಹೇಳಿದ್ದೇನೆ. ಆದರೆ ಸರ್ಕಾರದವರು ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ಹೇಗಾದರೂ ಮಾಡಿ ಜನಗಳ ಮೇಲೆ ಹೊರೆ ಹೊರಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ತಮ್ಮ ಅಧಿಕಾರವನ್ನು ದುರುಪಯೋಗ ಮಾಡಬೇಡಿ ಎಂದು ಹೇಳುತ್ತಿದ್ದರೂ ತಮ್ಮ ಅಧಿಕಾರವನ್ನು ಇಂದು ಹೆಚ್ಚುಹೆಚ್ಚಾಗಿ ಈ ಬಿಲ್ ಮೂಲಕ ಬಲಪಡಿಸುತ್ತಿದ್ದೀರಿ. ಅದು ಹೇಗೆ ಎಂಬುದಾಗಿ ನೀವು ಕೇಳಬಹುದು. ಅದಕ್ಕೆ ನಾನು ಎರಡು ಮುಖ್ಯ ಕಾರಣಗಳನ್ನು ಕೊಡಬಹುದು. ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದಾಗ ನೀವು ಹೇಳಿದ್ದು ಏನೆಂದರೆ, ಲ್ಯಾಂಡ್ ಮೇಲೆ ಮತ್ತೆ ಬಿಲ್ಡಿಂಗ್ ಎರಡೂ ಇದ್ದರೆ ಟ್ಯಾಕ್ಸ್ ಜಾಸ್ತಿಯಾಗುತ್ತದೆ, ವೇಕಂಟ್ ಲ್ಯಾಂಡಿಗೆ ಟ್ಯಾಕ್ಸ್ ಹಾಕುವುದಿಲ್ಲವೆಂದು. ಆ ರೀತಿ ನೀವು ಮಾಡಿದ್ದರೆ, ಮಾನ್ಯ ಶ್ರೀ ಶಾಮಣ್ಣನವರು ತಂದಿರತಕ್ಕ ತಿದ್ದುಪಡಿಯನ್ನು ನೀವು ಒಪ್ಪಿಕೊಳ್ಳಬಹುದಾಗಿತ್ತು. ನೀವು ಹೇಳಿದ ರೀತಿಯಲ್ಲಿ ಬರುವುದಿಲ್ಲ, ಅದು ಇಂಟರ್‌ಪ್ರಿಟೇಷನ್ನಿಗೆ ಅವಕಾಶ ಕೊಡುತ್ತದೆ. ಇವತ್ತಿನ ದಿವಸ ಲ್ಯಾಂಡ್ ಮತ್ತು ಬಿಲ್ಡಿಂಗ್ ಎರಡನ್ನೂ ಸೇರಿಸಿದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಟ್ಯಾಕ್ಸ್ ಹಾಕುವುದಕ್ಕೆ ಅವಕಾಶ ವಾಗುತ್ತದೆ. ನಾನೂ ಸಹ ಲೆಕ್ಕಾಚಾರ ಹಾಕಿ ನೋಡಿದ್ದೇನೆ. ಆದರೆ ನೀವು ಹೇಳಿದ್ದನ್ನು ತಿರಸ್ಕರಿಸಬೇಕೆಂದಲ್ಲ. ಮುನಿಸಿಪಲ್ ಎಲೆಕ್ಟೋರಲ್ ರೋಲಿಗೂ ಮತ್ತು ಅಸೆಂಬ್ಲಿ ಎಲೆಕ್ಟೊರಲ್ ರೋಲಿಗೂ ವ್ಯತ್ಯಾಸವಿದ್ದರೆ ಜನಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಒಂದೇ ಎಲೆಕ್ಟೊ

(ಶ್ರೀ ಎಂ. ಎಸ್. ಕೃಷ್ಣನ್)

ರಲ್ ರೋಲ್ಸ್ ಇರುವುದು ಸೂಕ್ತ. ಈಗ ಇರುವ ಅಸೆಂಬ್ಲಿ ಎಲೆಕ್ಟೊರಲ್ ರೋಲ್ಸ್ ಮಾತ್ರ ಸರಿಯಾಗಿದೆಯೆಂದು ನನ್ನ ಅಭಿಪ್ರಾಯ.

ಇನ್ನು ತೆರಿಗೆಗಳ ವಿಚಾರವಾಗಿ ಹೇಳಬೇಕಾದರೆ, ಇತ್ತೀಚೆಗೆ ತೆರಿಗೆಗಳಂತೂ ಬಹಳ ಜಾಸ್ತಿಯಾಗುತ್ತಿದೆಯೇ ವಿನಹ ಕಡಿಮೆಯಾಗುವುದಿಲ್ಲ. ವೇಕೆಂಟ್ ಲ್ಯಾಂಡ್ ಟ್ಯಾಕ್ಸ್‌ಗಳನ್ನು ತೆಗೆದುಹಾಕಬೇಕೆಂದು ಹಿಂದೆ ಹೇಳಿದ್ದರೂ ನೀವು ಈಗ ಹೆಚ್ಚಿನ ರೀತಿಯಲ್ಲಿ ತೆರಿಗೆ ಹಾಕುವ ರೀತಿಯಲ್ಲಿ ಇದರಲ್ಲಿ ವಿಧಿ ನಿಯಮಗಳನ್ನು ತಂದಿದ್ದೀರಿ. ಇನ್ನು ಪ್ಲಾನಿಂಗ್ ಅಥಾರಿಟಿ ಬಗ್ಗೆ ಈಗಾಗಲೇ ನನ್ನ ಸ್ನೇಹಿತರು ಮಾತನಾಡಿದ್ದಾರೆ. ಪುಟ 6, ಕ್ಲಾಜು 14, 226ನೇ ಸೆಕ್ಷನ್ನಿಗೆ ತಂದಿರುವ ತಿದ್ದುಪಡಿಯಲ್ಲಿ ಈ ರೀತಿ ಹೇಳಿದೆ. "enclosing the commencement certificate granted by the Planning Authority under sub-section (2) of Section 14" ಹಾಗೆಯೇ ಐಟಂ 15, 240 ನೇ ಸೆಕ್ಷನ್ನಿಗೆ ತಂದಿರುವ ತಿದ್ದುಪಡಿಯಲ್ಲಿ ಈ ರೀತಿ ಹೇಳಿದೆ : "and in conformity with the development plan or where there is no development p'an with the concurrence of the Planning Authority" ಅಂದರೆ ಹೊಸದಾಗಿ ಪ್ಲಾನಿಂಗ್ ಅಥಾರಿಟಿ ಎಂಬುದಾಗಿ ಕ್ರಿಯೇಟ್ ಮಾಡಿದ್ದಾರೆ. ಪ್ಲಾನಿಂಗ್ ಅಥಾರಿಟಿ ಎಂದು ನೀವು ಹೊಸದಾಗಿ ಮಾಡಿ ಹಳೆಯದಕ್ಕೆ ಒಂದು ಹೊಸ ರೂಪ ಕೊಟ್ಟು ತಾವೇ ಈ ಅಧಿಕಾರ ಕೊಟ್ಟರೆ ಹೇಗೆ ? ಅಡ್ಮಿನಿಸ್ಟ್ರೇಷನ್ ಏನಿದೆಯೋ ಅದು ಅದಷ್ಟು ಮಟ್ಟಿಗೆ ಡೀಸೆಂಟ್ರಲೈಜ್ ಆಗಬೇಕು, ನಾವು ಯಾವ ಒಂದು ಒಳ್ಳೆಯ ತತ್ವಗಳನ್ನು ಪ್ರತಿಪಾದನೆ ಮಾಡುತ್ತಿದ್ದೇವೋ ಆ ತತ್ವಗಳಿಗೆ ಸರ್ಕಾರದವರು ಈ ತಿದ್ದುಪಡಿಯಿಂದ ತಿಲಾಂಜಲಿ ಕೊಟ್ಟ ಹಾಗಾಗುತ್ತದೆ. ಪ್ಲಾನಿಂಗ್ ಅಥಾರಿಟಿಯಿಂದ ಪರ್ಮಿಟ್ ತೆಗೆದುಕೊಂಡು ಬಂದರೆ ನಿಮಗೆ ಲೈಸೆನ್ಸ್ ಕೊಡತಕ್ಕದ್ದು ಎಂದು ಹೇಳುತ್ತೀರಿ. ಬಡವರಿಗೆ ಹಣ ಕೊಡುವುದಕ್ಕೆ ಶಕ್ತಿ ಇಲ್ಲ, ಒಂದು ಪ್ಲಾನಿಂಗ್ ಲೈಸನ್ಸ್ ಸಿಗಬೇಕಾದರೆ, ಸುಮಾರು ಆರು ತಿಂಗಳು, 8 ತಿಂಗಳು ಆಗುತ್ತದೆ. ಇದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ. ಮಲ್ಲೇಶ್ವರ ಕ್ಷೇತ್ರದಿಂದ 6 ತಿಂಗಳುಗಳ ಹಿಂದೆ ಒಬ್ಬ ಕಾರ್ಪೊರೇಷನ್ನಿಗೆ ಪ್ಲ್ಯಾನ್ ಬರೆಸಿ ಲೈಸೆನ್ಸ್‌ಗೆ ಅರ್ಜಿ ಕೊಟ್ಟಿದ್ದರು. ಅದು ಲೈಸೆನ್ಸ್ ಕೊಡುವುದಕ್ಕೆ ಕಿಟಕಿ ಸರಿಯಾಗಿಲ್ಲ, ಬಾಗಿಲು ಸರಿಯಾಗಿಲ್ಲವೆಂದು ಅವರಿಗೆ 6 ತಿಂಗಳುಗಳ ಕಾಲ ಲೈಸೆನ್ಸ್ ಕೊಡದೆ ಸತಾಯಿಸಿದರು. ಇದು ನಾನು ಇಲ್ಲಿಗೆ ಚುನಾವಣೆಯಾಗುವುದಕ್ಕೆ ಮುಂಚೆ ಆದುದು. ನಾನು ಅಲ್ಲಿ ಹೋಗಿ ನಾನು ಎಂ.ಎಲ್.ಎ. ಎಂದು ಹೇಳಿ ದಬಾಯಿಸಿದ ಮೇಲೆ ಲೈಸೆನ್ಸನ್ನು ಒಂದು ನಿಮಿಷದಲ್ಲಿ ಮಾಡಿಕೊಟ್ಟರು. ಆಮೇಲೆ ಅವರು ಸಂತೋಷಪಟ್ಟುಕೊಂಡು ಹೋದರು. ಇಂತಹ ನೂರಾರು ನಿದರ್ಶನಗಳನ್ನು ಹೇಳಬಹುದು. ಈಗಾಗಲೇ ಆಡಳಿತದಲ್ಲಿ ಲಂಚದ ದೆಸೆಯಿಂದ, ಹಾಗೂ ಸ್ವಜನ ಪಕ್ಷಪಾತದಿಂದ ಎಷ್ಟೋ ಕೆಲಸಗಳು ನಿಧಾನವಾಗುತ್ತಿವೆ. ಅಂದಮೇಲೆ ಕಾರ್ಪೊರೇಷನ್ ಅಡ್ಮಿನಿಸ್ಟ್ರೇಟರ್, ಕಮಿಷನರ್, ಇನ್ನೂ ಕೆಳಗಿನ ಅಧಿಕಾರಿಗಳಿಗೆ ಮತ್ತು ಪ್ಲಾನಿಂಗ್ ಅಥಾರಿಟಿಗಳಿಗೆ ಅವುಗಳನ್ನು ಕಳುಹಿಸಿಕೊಡಬೇಕೆಂದು ಹೇಳಿದರೆ ಇನ್ನು ಎಷ್ಟು ದಿವಸಗಳು ಆಗುತ್ತದೋ ಗೊತ್ತಿಲ್ಲ. ಅದರಲ್ಲಿ Where there is no development plan with the concurrence of the Planning Authority ಎಂದು ಹೇಳಿದ್ದಾರೆ. ಅದು ಯಾವಾಗ ಬರುತ್ತದೋ ನನಗೆ ಗೊತ್ತಿಲ್ಲ. ಇದರಿಂದ ಖಂಡಿತವಾಗಿ ಬೆಂಗಳೂರು ನಗರ ಡೆವಲಪ್‌ಮೆಂಟಿಗೆ ಕುಂಠಿತವಾಗುತ್ತದೆ. ಪ್ಲಾನಿಂಗ್ ಡೆವಲಪ್‌ಮೆಂಟ್ ಇರಬೇಕೆಂಬುದಾಗಿ ನಾನು ಒಪ್ಪಿಕೊಳ್ಳುತ್ತೇನೆ. ಇದರಿಂದ ನಮಗೂ ಸೌಕರ್ಯ ಜಾಸ್ತಿಯಾಗುತ್ತದೆ. ಆದರೆ ಇನ್ನೊಬ್ಬ ಅಧಿಕಾರಿಗೆ ಹೆಚ್ಚಿನ ಅಧಿಕಾರ ಕೊಟ್ಟರೆ ಜನರಿಗೆ ಕಿರುಕುಳ ಕೊಟ್ಟ ಹಾಗಾಗುತ್ತದೆ. ಇದರಿಂದ ಫೇವರಿಟಿಜಂ, ನೆಪೊಟಿಜಂ ಮತ್ತು ಕಮ್ಯೂನಿಜಂಗೆ ಅವಕಾಶ ಕೊಟ್ಟದಾಗಾಗುತ್ತದೆಂದು ನಾನು ಇಲ್ಲಿ ಹೇಳಬೇಕಾಗುತ್ತದೆ. ಇದರಲ್ಲಿ ಎಲೆಕ್ಟೊರಲ್ ರೋಲ್ಸ್ ಜೊತೆಯಲ್ಲಿ ಬೇರೆ ಅನೇಕ ಅಂಶಗಳನ್ನು ಸೇರಿಸಿರುತ್ತೀರಿ. ಅವನ್ನು ನಾನು ವಿರೋಧಿಸುತ್ತೇನೆ. ಈ ಬಿಲ್ಲಿನಲ್ಲಿ ಇನ್ನೂ ವಿಷಯಗಳನ್ನು ಇವತ್ತಿನ ದಿವಸ ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಹಾಗೆ ತರಬಹುದಾಗಿತ್ತು. ಈಗ ಒಂದು ಕಡೆ ಟ್ರಸ್ಟ್ ಬೋರ್ಡ್ ಇದೆ. ಇನ್ನೊಂದು ಕಡೆ ವಾಟರ್ ಸಪ್ಲೈ ಬೋರ್ಡ್ ಇದೆ. ಮತ್ತೊಂದು ಕಡೆ ಎಲೆಕ್ಟ್ರಿಸಿಟಿ ಬೋರ್ಡ್ ಇದೆ, ಈ ಕಡೆ ಕಾರ್ಪೊರೇಷನ್ ಇದೆ. ಅವು ಯಾವ್ಯಾವ ರೀತಿಯಲ್ಲಿ ನಡೆಯುತ್ತಿವೆಯೋ ಎಂಬುದನ್ನು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಅವರ ಬಗ್ಗೆ ಈಗಾಗಲೇ ಮಾನ್ಯ ಶ್ರೀ ಶಾಮಣ್ಣನವರು ಮಾತನಾಡಿದ್ದಾರೆ. ಯಾವ ಬೋರ್ಡ್‌ಗಳೇ ಆಗಲೀ ಸರಿಯಾಗಿ ಕೆಲಸಮಾಡುತ್ತಾ ಇಲ್ಲವೆಂಬ ಟೀಕೆ ಸರ್ವೇಸಾಮಾನ್ಯವಾಗಿ ಬರುತ್ತಲೇ ಇದೆ. ಈ ಮಾನ್ಯ ಸಭೆಯ ಸದಸ್ಯರೂ ಸಹ ಒಂದು ಬೋರ್ಡಿಗೆ ಛೇರ್‌ಮನ್‌ರಾಗಿ

ದ್ದಾರೆ. ಬಹಳ ಅದಕ್ಷತೆಯಿಂದ ಅಲ್ಲಿನ ಆಡಳಿತವನು ಸರಿಯಾಗಿ ನೋಡಿಕೊಳ್ಳದೆ ಇರುವುದು ನಮ್ಮ ಕಣ್ಣ ಮುಂದೆಯೇ ನೋಡುತ್ತಿದ್ದೇವೆ. ಮೊನ್ನೆ ಸೈಟುಗಳನ್ನು ಅಲಾಟ್ ಮಾಡುವಾಗ ಮಧ್ಯೆ ರಾಜಕೀಯ ಬಂದು ಬಡ ಜನರಿಗೆ ಬಹಳವಾಗಿ ಅನ್ಯಾಯವಾಗಿದೆ. ಅದರ ಬಗ್ಗೆ ಈಗಾಗಲೇ ಮಾನ್ಯ ಶ್ರೀ ಶಾಮಣ್ಣನವರ ನೇತೃತ್ವದಲ್ಲಿ ಒಂದು ಸಮ್ಮೇಳನ ಬೇರೆ ನಡೆದಿದೆ. ಈಗ ಸೈಟು ಗಳನ್ನು ಯಾರಿಗೆ ಬೇಕೋ ಅವರಿಗೆ ಕೊಟ್ಟಿದ್ದಾರೆ. ಕಾನೂನಿಗೆ ವಿರೋಧವಾಗಿ ರೆವಿನ್ಯೂ ಸೈಟುಗಳನ್ನು ಕೊಂಡುಕೊಂಡಿದ್ದಾರೆಂದು ಅವರಿಂದ ರೆವಿನ್ಯೂ ಸೈಟುಗಳನ್ನು ಅಕ್ವೈರ್‌ಮಾಡಿ ಕೊಂಡು ಅಂತಹವರಿಗೆ ಬೇರೆಕಡೆ ಸೈಟುಗಳನ್ನು ಕೊಡುತ್ತೇವೆಂದು ಹೇಳಿ, ಸಿಟಿ ಇಂಪ್ರೂವ್ ಮೆಂಟ್ ಟ್ರಸ್ಟ್ ಬೋರ್ಡ್ ಆಕ್ಟ್ ಪ್ರಕಾರ ಅಂತಹವರಿಗೆ ಸೈಟುಗಳನ್ನು ಕೊಡಬೇಕೆಂದು ಹೇಳಿ ದ್ದರೂ ಬೇರೆ ಯಾರಿಗೋ ಕೊಟ್ಟಿರುವ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಅದೇ ರೀತಿಯಲ್ಲಿ ವಾಟರ್ ಸಪ್ಲೈ ಬೋರ್ಡಿನಲ್ಲಿಯೂ ನೀರು ಸರಬರಾಜು ಸರಿಯಾಗಿ ಆಗುತ್ತಾ ಇಲ್ಲ. ಈಗ ಒಂದು ಕನ್‌ಸಲ್ಟೇಟಿವ್ ಕಮಿಟಿ ಎಂಬುದಾಗಿ ಮಾಡಿ ಎಂ.ಎಲ್.ಎ. ಅವರನ್ನು ಕರೆದಿದ್ದರು. ನಾನು ಹೋಗಿರಲಿಲ್ಲ. ಯಶವಂತಪುರಕ್ಕೆ ನೀರನ್ನು ಒದಗಿಸಬೇಕೆಂದು ನಾನು ಪದೇಪದೇ ಹೊರ ಗಡೆಯೂ ಹೇಳಿದ್ದೇನೆ. ಅಧಿಕಾರಿಗಳಿಗೂ ಹೇಳಿದ್ದೇನೆ, ಸತ್ಯಾಗ್ರಹವೂ ನಡೆದಿವೆ. ಆದರೂ ಯಶವಂತಪುರಕ್ಕೆ ಇನ್ನೂ ವಾಟರ್ ಸಪ್ಲೈ ಬೋರ್ಡಿನವರು ನೀರು ಒದಗಿಸಲೇ ಇಲ್ಲ. ಅಲ್ಲಿರುವ ಜನರಿಗೆ ಬೋರ್ ವೆಲ್ ಮಾಡಿ ನೀರು ಒದಗಿಸುವ ಹೊತ್ತಿಗೆ ಅಲ್ಲಿಯ ಜನರೆಲ್ಲಾ ಸತ್ತು ಹೋಗುತ್ತಾರೆ. ಇವತ್ತು ವಾಟರ್ ಬೋರ್ಡಾಗಲಿ, ಟ್ರಸ್ಟ್ ಬೋರ್ಡಾಗಲಿ, ಎಲೆಕ್ಟ್ರಿಸಿಟಿ ಬೋರ್ಡಾಗಲಿ, ಯಾವುದೂ ಸರಿಯಾದ ರೀತಿಯಲ್ಲಿ ಯೋಜನೆ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ನನಗೆ ಒಂದೊಂದು ಬೋರ್ಡಿನ ಬಗ್ಗೆಯೂ ಟೀಕೆ ಮಾಡಬೇಕೆಂಬ ದೃಷ್ಟಿಯಿಲ್ಲ. ಆದರೆ ಅವರು ಯಾವ ರೀತಿ ಆ ಕೋಆರ್ಡಿನೇಷನ್ ಮಾಡಬೇಕು, ಯಾವ ರೀತಿ ಫಂಕ್ಷನ್ ಮಾಡಬೇಕು ಎಂಬುದನ್ನು ಸರಿಯಾಗಿ ಮಾಡುತ್ತಿಲ್ಲ. ಇನ್ನಾವುದರ ಬಗ್ಗೆ ಬಿಲ್ಲನ್ನು ತೆಗೆದುಕೊಂಡು ಬಂದಿದ್ದರೂ ನಾನು ಅದನ್ನು ಒಪ್ಪುತ್ತಿದ್ದೆ. ನೀರನ್ನು ಒದಗಿಸುವುದಕ್ಕೆ ಕೂಡ ಬೋರ್ಡು ಮಾಡುವ ಬದಲು ಕಾರ್ಪೊರೇಷನ್ನೇ ಮಾಡಬಹುದಾಗಿತ್ತು. ಅದನ್ನು ನಾವು ಒಪ್ಪಿಕೊಳ್ಳುತ್ತಿದ್ದೆವು.

ಇನ್ನೊಂದು ಪ್ರಶ್ನೆ ಏನೆಂದರೆ, ಟ್ರಸ್ಟ್ ಬೋರ್ಡು ಲೇ-ಔಟುಗಳನ್ನು ಮಾಡುತ್ತಾರೆ. ಆದರೆ ಅಲ್ಲಿ ಯಾವ ರೀತಿಯ ಅನುಕೂಲತೆಯೂ ಇರುವುದಿಲ್ಲ. ಕಾರ್ಪೊರೇಷನ್‌ಗೆ ವಹಿಸಿಕೊಡಿ ಅಂದರೆ ಟ್ರಸ್ಟ್ ಬೋರ್ಡಿನವರು ಸರಿಯಾದ ರಸ್ತೆ ಮುಂತಾದುವುಗಳನ್ನು ಮಾಡಿದ್ದರೆ, ಕಾರ್ಪೊರೇಷನ್‌ನವರು ಛಾರ್ಜ್ ವಹಿಸಿಕೊಳ್ಳುವುದಿಲ್ಲವೆಂದು ಹೇಳುತ್ತಾರೆ. ಟ್ರಸ್ಟ್ ಬೋರ್ಡಿನವರು ಹೇಳುತ್ತಾರೆ, ನಾವು ಕೊಡುವುದಕ್ಕೆ ತಯಾರಾಗಿದ್ದೇವೆ, ಆದರೆ ಅವರು ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲ ಎಂದು. ಹೀಗೆ ಟ್ರಸ್ಟ್ ಬೋರ್ಡನ್ನು ಕಂಡರೆ, ಕಾರ್ಪೊರೇಷನ್ನಿಗೆ ಆಗುವುದಿಲ್ಲ, ಕಾರ್ಪರೇಷನ್ನು ಕಂಡರೆ, ಟ್ರಸ್ಟ್ ಬೋರ್ಡಿಗೆ ಆಗುವುದಿಲ್ಲ. ಹೀಗೆ ಇವರಲ್ಲಿ ಒಂದು ಕೋಆರ್ಡಿನೇಷನ್ ಇಲ್ಲವೇ ಇಲ್ಲ. ಆದಕ್ಕೆ ಅದನ್ನು ಸುವ್ಯವಸ್ಥಿತವಾಗಿ ಮಾಡಲು ಒಂದು ಬಿಲ್ಲನ್ನು ತಂದಿದ್ದರೆ, ನಾನು ಅದನ್ನು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಿದ್ದೆ. ಆ ರೀತಿ ಇಲ್ಲಿ ಮಾಡಿಲ್ಲ. ಇವತ್ತು ಯಾವುದು ಬೇಡ ಅದನ್ನು ಇಲ್ಲಿ ಸೇರಿಸಿದ್ದಾರೆ. ಅತೀ ಮುಖ್ಯವಾಗಿ ಯಾವುದು ಬೇಕಾಗಿದೆ, ಅದನ್ನು ಇಲ್ಲಿ ಸೇರಿಸಿಲ್ಲ. ಚುನಾವಣೆಯ ಕ್ಷೇತ್ರಗಳನ್ನು ಮಾಡುವಾಗ ಈಕ್ವಲ್ ರೆಪ್ರಸೆಂಟೇಷನ್ ಇರಬೇಕೆಂದು ಹೇಳಿದ್ದವು. ಆದರೆ ಅದನ್ನು ಸರಿಯಾಗಿ ಮಾಡಿಲ್ಲ. ಆದ್ದರಿಂದ ಇದನ್ನು ವಿರೋಧ ಮಾಡ ಬೇಕಾಗಿದೆ. ಮತ್ತು ಇವತ್ತು ಇವರ ಅಧಿಕಾರ ಡಿಸೆಂಟ್ರಲೈಸ್ ಆಗುವ ಬದಲು ಸೆಂಟ್ರಲೈಸ್ ಆಗಿ ಕರಪ್ಷನ್, ನೆಪೋಟಿಸಂ, ಫೇವರಿಟಿಸಂ ಜಾಸ್ತಿ ಯಾಗುವುದರಿಂದ ಈ ಬಿಲ್ಲನ್ನು ತೀವ್ರವಾಗಿ ವಿರೋಧಿಸುತ್ತೇನೆ. ಈ ಬಿಲ್ಲನ್ನು ನಾನು ಕೂಡ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳಿಸಬೇಕೆಂದು ಒಂದು ನೋಟೀಸ್ ಕಳಿಸಿದ್ದೆ. ಈಗ ಚುನಾವಣೆಗೆ ಸೀಮಿತವಾಗಿರುವಂತೆ ಮಾತ್ರ ಮಾಡಿ, ಮಿಕ್ಕಿದ್ದ ವಿಷಯವನ್ನು ಚುನಾಯಿತ ಪ್ರತಿನಿಧಿಗಳಿಗೆ ಯೋಚಿಸಲು ಅವಕಾಶ ಕೊಡಿ. ಅಲ್ಲಿಯ ತನಕ ಆತುರಾತುರವಾಗಿ ಇದನ್ನು ತೆಗೆದುಕೊಂಡು ಬಂದು, ಜನಗಳ ಮೇಲೆ ಹೊರಿಸುವುದಕ್ಕೆ ಪ್ರಯತ್ನ ಮಾಡಬೇಡಿ. ನೀವೇನೋ ಇಲ್ಲಿ ತಂದು ಪಾಸ್ ಮಾಡಿಸಿಕೊಳ್ಳಬಹುದು. ಆದರೆ ನೀವು ಜನಗಳು ಮಧ್ಯೆ ಹೋಗಿ ಓಟು ಕೇಳಲು ಹೋದಾಗ ನಿಮಗೆ ಬರುವ ಓಟು ತಪ್ಪಿ ಹೋಗುತ್ತದೆ, ಆದ್ದರಿಂದ ನಿಮ್ಮ ಸ್ವಂತ ಹಿತದೃಷ್ಟಿಯಿಂದ ಬರೇ ಚುನಾವಣೆಗೆ ಸೀಮಿತವಾದ ವಿಷಯವನ್ನು ಇಟ್ಟು ಉಳಿದುದನ್ನು ಕೈಬಿಡಬೇಕೆಂದು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಹಮೀದ್ ಷಾ (ಶಿವಾಜಿನಗರ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಬಿಲ್ಲಿನ ವಿಚಾರದಲ್ಲಿ ನಮ್ಮ ಅನೇಕ ಮಿತ್ರರು ಮಾತನಾಡಿದ್ದಾರೆ. ಇವತ್ತು ಕಾರ್ಪೊರೇಶನ್ ಏನಾಗಿದೆ ಅಂದರೆ, ಒಂದು ಕರಪ್ಷನ್ ಕಾರ್ಪೊರೇಷನ್ ಆಗಿದೆ. ನಮ್ಮ ಭಾಷೆಯಲ್ಲಿ ಒಂದು ಗಾದೆ ಇದೆ. ಅದರ ಅರ್ಥ ಏನೆಂದರೆ, ಜನಗಳನ್ನು ಹಿಂಸೆ ಮಾಡುವುದು. ಇವತ್ತು ಕಾರ್ಪೊರೇಷನ್‌ಗೆ ಹೋಗಬೇಕಾದರೆ, ಜನರು ಕರಪ್ಷನ್ ತೆಗೆದುಕೊಂಡು ಹೋಗಬೇಕಾಗಿದೆ. ಇಲ್ಲದಿದ್ದರೆ, ಅಲ್ಲಿ ಯಾವ ಒಂದು ಕೆಲಸವನ್ನೂ ಕೂಡ ಮಾಡಿಕೊಂಡು ಬರಲಾಗುವುದಿಲ್ಲ. ಇವೆಲ್ಲಾ ವಿಚಾರಗಳು ಈ ಕಾರ್ಪೊರೇಷನ್ ಏರಿಯಾದಿಂದ ಬಂದಿರುವ ಅಸೆಂಬ್ಲಿ ಸದಸ್ಯರುಗಳಿಗೆ ಚೆನ್ನಾಗಿ ತಿಳಿದಿದೆ. ಅಲ್ಲಿ ಜನರು ಹೋಗಿ ಪಡುತ್ತಿರುವ ಹಿಂಸೆ ಹೇಳತೀರದು. ಕಾರ್ಪೊರೇಷನ್ನನ್ನು ಸೂಪರ್‌ಸೀಡ್ ಮಾಡಿದ ಮೇಲೆ ಸರ್ವೇಸಾಧಾರಣವಾಗಿ ಒಂದು ದಿವಸಕ್ಕೆ ಈ ಅಸೆಂಬ್ಲಿ ಸದಸ್ಯರ ಮನೆಗಳ ಮುಂದೆ ಸಾಧಾರಣ 100 ಜನರು ಬೆಳಿಗ್ಗೆ ಬಂದು ಕಾಯುತ್ತಿರುತ್ತಾರೆ. ಇದಕ್ಕೆ ಕಾರಣವೇನೆಂದರೆ, ಪ್ರತಿಯೊಬ್ಬರಿಗೂ ಒಂದೊಂದು ಸರ್ಟಿಫಿಕೇಟ್ ಇಷ್ಯೂ ಮಾಡಬೇಕಾಗಿದೆ. ಅವರಿಗೆ ಇದೇ ದೊಡ್ಡ ಕೆಲಸವಾಗಿದೆ.

ಇನ್ನೊಂದು ವಿಚಾರವೇನೆಂದರೆ, ಕಾರ್ಪೊರೇಷನ್ನಿಗೆ ಯಾವ ಒಂದು ಅಧಿಕಾರ ಇದೆ ಅದನ್ನೆಲ್ಲಾ ಸರ್ಕಾರದವರು ಕಿತ್ತುಕೊಂಡಿದ್ದಾರೆ. ಇವತ್ತು ಪ್ರತಿಯೊಂದಕ್ಕೂ ಒಂದೊಂದು ಬೋರ್ಡು ಮಾಡಿದ್ದಾರೆ. ಆದ್ದರಿಂದ ಈ ಕಾರ್ಪೊರೇಷನ್ನಿಗೂ ಒಂದು ಬೋರ್ಡು ಎಂದು ಹೆಸರು ಇಟ್ಟರೆ ಬಹಳ ಒಳ್ಳೆಯದೆಂದು ಕಾಣುತ್ತದೆ. ಅದೇ ರೀತಿ ಇವತ್ತು ವಾಟರ್ ಬೋರ್ಡನ್ನು ಮಾಡಿದ್ದಾರೆ, ಆದರೆ ಕೆಲಸವೇನೂ ಆಗಿಲ್ಲ. ಇದನ್ನು ಕಾರ್ಪೊರೇಷನ್ನಿನಲ್ಲೇ ಇಟ್ಟಿದ್ದರೆ ಚೆನ್ನಾಗಿತ್ತು. ಆದ್ದರಿಂದ ಸಚಿವರು ಏನು ಈ ಒಂದು ಬಿಲ್ಲನ್ನು ತಂದಿದ್ದಾರೆ, ಅದರಲ್ಲಿರುವ ಚುನಾವಣೆಗೆ ಸಂಬಂಧಪಟ್ಟ ವಿಚಾರವನ್ನು ಬಿಟ್ಟು ಉಳಿದ ವಿಷಯಗಳನ್ನು ನಾನು ವಿರೋಧ ಮಾಡುತ್ತೇನೆ. ಇವತ್ತು ನಾವೆಲ್ಲರೂ ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಇಟ್ಟು ಆಡಳಿತವನ್ನು ನಡೆಸುತ್ತಿದ್ದೇವೆ. ಆದರೆ, ಇದೇ ಸಂದರ್ಭದಲ್ಲಿ ನಾವು ಒಬ್ಬ ಡಿಕ್ಟೇಟರನ್ನು ಈ ಮುಖ್ಯ ಪಟ್ಟಣದ ಆಡಳಿತ ನಡೆಸುವುದಕ್ಕೆ ಇಟ್ಟಿರುವುದು ತುಂಬಾ ನಾಚಿಕೆಯ ವಿಷಯವಾಗಿದೆ. ನಾನು ಒಂದು ದಿನ ಅವರಲ್ಲಿ ಹೋಗಿ, ತಾವು ನಮ್ಮ ಸಿಟಿಯಲ್ಲಿರುವ ಕೆಲವು ವಿಭಾಗಗಳನ್ನು ನೋಡಲು ಬರಬೇಕು, ತಮ್ಮ ಅಧಿಕಾರದಲ್ಲಿ ಎಷ್ಟು ಕೆಲಸವಾಗಿದೆ ಮತ್ತು ಅದರ ಸ್ಥಿತಿಗಳನ್ನು ಇನ್‌ಸ್ಪೆಕ್ಟ್ ಮಾಡಬೇಕು ಎಂದು ಕೇಳಿಕೊಂಡೆ. ಅದಕ್ಕೆ, ನಾನು ಪ್ರೈವೇಟ್ ಮೆಂಬರ್, ಜೊತೆಗೆ ಬರುವುದಕ್ಕಾಗುವುದಿಲ್ಲ ಎಂದು ಹೇಳಿದರು. ಅಂದರೆ, ಪ್ರೈವೇಟ್ ಮೆಂಬರ್ ಅಲ್ಲದೆ, ಇನ್ಯಾರ ಜೊತೆಗೆ ಬರುತ್ತಾರೆಂದು ನನಗೆ ಅರ್ಥವಾಗಲಿಲ್ಲ. ನಾವು ನಮ್ಮ ಮುನಿಸಿಪಲ್ ಮಂತ್ರಿಯವರನ್ನು ಅಥವಾ ಮುಖ್ಯ ಮಂತ್ರಿಯವರನ್ನು ಒಂದು ವೇಳೆ ಕರೆದರೆ, ಅವರು ಒಪ್ಪಿಕೊಂಡು ಬರುತ್ತಿದ್ದರು, ಮತ್ತು ನಾನು ಅವರನ್ನು ಕರೆದುಕೊಂಡು ಹೋಗಬಲ್ಲೆ, ಆದರೆ, ಈ ಆಡಳಿತಾಧಿಕಾರಿಯನ್ನು ಕರೆದರೆ, ಬರುವುದಿಲ್ಲವೆಂದು ಹೇಳಿದರು. ಏಕೆಂದರೆ, ಇಲ್ಲಿರುವ ಇತರ ಅಧಿಕಾರಿಗಳು ಅವರಿಗೆ ಏನೇನು ಬೇಕೋ ಅದನ್ನು ಕೊಡುತ್ತಿದ್ದರು. ಆದ್ದರಿಂದ ಇದನ್ನು ನಾವು ಕೂಲಂಕಷವಾಗಿ ಯೋಚನೆ ಮಾಡಬೇಕಾಗಿದೆ. ಇವತ್ತು ನಮ್ಮ ದೇಶ ಈ ರೀತಿ ನಡೆದರೆ, ಎಲ್ಲಿ ಹೋಗುತ್ತದೆ ಎಂಬುದನ್ನು ನೋಡಬೇಕು. ಇವತ್ತು ಇದಕ್ಕೆ ಒಬ್ಬ ಅಡ್ಮಿನಿಸ್ಟ್ರೇಟರ್, ಒಬ್ಬ ಕಮೀಷನರ್—ಹೀಗೆ ಅನೇಕ ಅಧಿಕಾರಿಗಳನ್ನು ಮಾಡಿದರೆ, ನಮ್ಮ ಆಡಳಿತ ಎಲ್ಲಿ ಹೋಗುತ್ತದೆ, ಪ್ರಜಾಪ್ರಭುತ್ವ ಎಲ್ಲಿ ಉಳಿಯುತ್ತದೆ ಎಂಬುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಸ್ವಲ್ಪ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮೊನ್ನೆ ಕಾರ್ಪೊರೇಷನ್ ಏರಿಯಾದಲ್ಲಿ ಹೆಂಡದ ಅಂಗಡಿಗಳನ್ನು ಬಹಿರಂಗ ಮಾಡತಕ್ಕ ಕಾಲದಲ್ಲಿ ಆಯಾಯಾ ಡಿವಿಜನ್ನಿನ ಕಾರ್ಪೊರೇಷನ್ ಕೌನ್ಸಿಲರ್ಸ್ ಇದ್ದಿದ್ದರೆ ಈಗ ನಡೆದಿರುವಂತಹ ಕೆಲಸಗಳು ಆಗುತ್ತಾ ಇರಲಿಲ್ಲ. ಕಾರ್ಪೊರೇಷನ್ ಏರಿಯಾದಲ್ಲಿ ಈಗ ಹೊಸದಾಗಿ ಹೆಂಡದ ಅಂಗಡಿಗಳು ಬಂದಿವೆ. ಇದಕ್ಕೆ ನಾನು ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಬ್ರಾಡ್‌ವೇ ರಸ್ತೆಯಲ್ಲಿ ಒಂದು ಕಡೆ ಬೀರ್ ಷಾಪ್ ಇದೆ, ಅರಕಾ ಷಾಪ್ ಇದೆ, ಮತ್ತು ಟಾಡೀ ಷಾಪ್ ಇದೆ. ಈ ಬಗ್ಗೆ ನಾನು ಮಾನ್ಯ ಪೌರಾಡಳಿತ ಶಾಖೆಯ ಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ಮಾನ್ಯ ಎಕ್ಸೈಜ್ ಮಂತ್ರಿಗಳಿಗೂ ಕಾಗದವನ್ನು ಬರೆದಿದ್ದೇನೆ. ಮಂತ್ರಿಗಳಿಗೆ ಕಾಗದವನ್ನು ಬರೆದರೆ ಏನು ಎನ್ನುವ ಮನೋಭಾವನೆ ಕಾರ್ಪೊರೇಷನ್ನಿನ ಅಡ್ಮಿನಿಸ್ಟ್ರೇಟರಿಗೆ ಇದೆ. ಅವರಿಗೆ ಸರ್ವಾಧಿಕಾರತ್ವ ಬಂದಿದೆ. ಅಧಿಕಾರಿಗಳು ಇಂಥಾ ಮನೋಭಾವನೆಯನ್ನು ತಾಳುವುದಾದರೆ ನಮ್ಮ ದೇಶ ಮುಂದಕ್ಕೆ ಬರುವುದಿಲ್ಲ. ಈ ರೀತಿ ಅಧಿಕಾರಿಗಳಿಗೆ ಸರ್ವಾಧಿಕಾರತ್ವವನ್ನು ಕೊಡುವುದರಿಂದ ದೇಶ ನಾಶವಾಗುತ್ತದೆ.

5-30 P.M.

ಇನ್ನೊಂದು ವಿಷಯ. ಮಾನ್ಯ ಸದಸ್ಯರಾದ ಶ್ರೀಮಾನ್ ನಂಜಪ್ಪನವರು ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ವಿಷಯಗಳನ್ನು ಬಹಳ ಚೆನ್ನಾಗಿ ಹೇಳಿದರು. ಅವರು ನಿಜಸ್ಥಿತಿಯನ್ನೇ ಹೇಳಿದ್ದಾರೆ. ಅದಕ್ಕಾಗಿ ನನಗೆ ಸಂತೋಷವಾಗಿದೆ. ಇಲ್ಲದಿದ್ದರೆ ನಾನು ನಿಜಕ್ಕೆ ದೂರವಾದ ಮಾತುಗಳನ್ನು ಹೇಳುತ್ತಿದ್ದೇನೆ ಎಂದು ಕೆಲವು ಮಾನ್ಯ ಸದಸ್ಯರು ಹೇಳುತ್ತಿದ್ದರು. ಇಷ್ಟು ಹೇಳಿ ಈ ಮಸೂದೆಯಲ್ಲಿ ಎಲೆಕ್ಷನ್ ವಿಷಯಕ್ಕೆ ಮಾತ್ರ ನನ್ನ ಒಪ್ಪಿಗೆಯನ್ನು ಕೊಟ್ಟು ಈ ಮಸೂದೆಯನ್ನು ಮಾನ್ಯ ಪೌರಾಡಳಿತ ಶಾಖೆಯ ಮಂತ್ರಿಗಳು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ (ಬೊಳ್ಳೊಳ್ಳಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರುವ ಬೆಂಗಳೂರು ಸಿಟಿ ಮುನಿಸಿಪಲ್ ಕಾರ್ಪೊರೇಷನ್ ತಿದ್ದುಪಡಿ ವಿಧೇಯಕದ ಮೇಲೆ ನಾನು ಕೆಲವು ಸೂಚನೆಗಳನ್ನು ಮಾನ್ಯ ಪೌರಾಡಳಿತ ಶಾಖೆಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗಾಗಲೇ ಈ ಮಸೂದೆಯ ಮೇಲೆ ನನ್ನ ಅನೇಕ ಮಿತ್ರರು ಮಾತನಾಡಿದ್ದಾರೆ. ಆದ್ದರಿಂದ ನಾನು ಈಗ ಮುಖ್ಯವಾದ ಕೆಲವು ವಿಷಯಗಳನ್ನು ಮಾನ್ಯ ಪೌರಾಡಳಿತ ಶಾಖೆಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ ಮುಂದೆ ಬರುವ ಬೆಂಗಳೂರು ನಗರ ಕಾರ್ಪೊರೇಷನ್ನಿನ ಚುನಾವಣೆಯ ವೋಟರ್ಸ್ ಲಿಸ್ಟನ್ನು ಈಗಾಗಲೇ ತಯಾರು ಮಾಡಿದ್ದಾರೆ. ಆದರೆ ಇದರಲ್ಲಿ ಅನೇಕ ಲೋಪದೋಷಗಳಾಗಿವೆ. ಮುಖ್ಯವಾಗಿ ವೋಟರ್ಸ್ ಲಿಸ್ಟನ್ನು ತಯಾರು ಮಾಡುವಾಗ ಬೆಂಗಳೂರು ನಗರದಲ್ಲಿ ಸ್ಲಮ್ ಏರಿಯಾದಲ್ಲಿ ವಾಸವಾಗಿರುವಂತಹ ಮತದಾರರ ಲಿಸ್ಟನ್ನು ಸರಿಯಾಗಿ ತಯಾರು ಮಾಡಿಲ್ಲ. ಈ ಬೆಂಗಳೂರು ಮಹಾ ನಗರದಲ್ಲಿ ಸುಮಾರು 120 ಕೊಳಚೇ ಪ್ರದೇಶಗಳು ಇದೆ. ಇಂಥಾ ಅನೇಕ ಕೊಳಚೆ ಪ್ರದೇಶಗಳಲ್ಲಿ ಹೆಚ್ಚಿಗೆ ನಮ್ಮ ಹರಿಜನ ಬಾಂಧವರು ಇದ್ದಾರೆ. ಆ ಪ್ರದೇಶಗಳಲ್ಲಿ ಸರಿಯಾಗಿ ಮತದಾರರ ಲಿಸ್ಟನ್ನು ನಿರ್ಮಾಣ ಮಾಡಿಲ್ಲ. ಅನೇಕರ ಹೆಸರುಗಳು ಬಿಟ್ಟುಹೋಗಿವೆ. 1961ನೇ ಇಸವಿಯಲ್ಲಿ ನಡೆದಂತಹ ಜನಗಣತಿ ಮತ್ತು ನಾಳೆ ಬರುವಂತಹ ಜನಗಣತಿಯಲ್ಲಿ ಅಂಥಾ ಹೆಸರುಗಳನ್ನು ನಮೂದು ಮಾಡಿಲ್ಲ. ಕಾರ್ಪೊರೇಷನ್ನಿನ ಆಡಳಿತಕ್ಕೆ ಒಳಪಟ್ಟ ಅನೇಕ ಕೊಳಚೆ ಪ್ರದೇಶಗಳಲ್ಲಿ ಬಹಳ ವರ್ಷಗಳಿಂದ ಹರಿಜನರು ವಾಸ ಮಾಡುತ್ತಿದ್ದಾರೆ. ಆದರೆ ಕಾರ್ಪೊರೇಷನ್ ಚುನಾವಣೆಯ ವೋಟರ್ಸ್ ಲಿಸ್ಟಿನಲ್ಲಿ ಅವರ ಹೆಸರುಗಳು ಇಲ್ಲ. ಆಯಾಯಾ ಕೊಳಚೆ ಪ್ರದೇಶಗಳಲ್ಲಿ 15 ವರ್ಷಗಳಿಗಿಂತ ಹೆಚ್ಚು ವಾಸವಾಗಿರುವವರಿಗೇ ಸೈಟುಗಳನ್ನು ಕೊಡುತ್ತೇವೆ ಎಂದು ಸರಕಾರದ ಆರ್ಡರ್ ಇದೆ. ಆದರೆ 1961ನೇ ಇಸವಿಯ ಜನಗಣತಿಯ ವೋಟರ್ಸ್ ಲಿಸ್ಟಿನಲ್ಲಿ ಅನೇಕ ಜನರ ಹೆಸರುಗಳನ್ನು ನಮೂದು ಮಾಡಿಲ್ಲ. ಸುಮಾರು 40-50 ವರ್ಷಗಳಿಂದ ನಮ್ಮ ಹರಿಜನ ಬಾಂಧವರು ಹಲವರು ಆ ಕೊಳಚೆ ಪ್ರದೇಶಗಳಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ವಾಸಮಾಡುತ್ತಿದ್ದಾಗ್ಯೂ ಕೂಡ ಅವರಿಗೆ ಪ್ರೊಪ್ರೈಟರಿ ರೈಟ್ಸ್ ಕೂಡ ಮಾಡಿಲ್ಲ. ಅವರಿಗೆ Proprietory right should be conferred on those who are residing in a particular area for not less than 15 years. The Government says like that. ಈ ರೀತಿ ಇದ್ದರೂ ಕೂಡ ಈ ಗೌರ್ನಮೆಂಟ್ ಆರ್ಡರು ಅವರಿಗೆ ಅಪ್ಲೈ ಆಗುವುದಿಲ್ಲ. ಅದರಲ್ಲಿ ಏನು ಲೋಪದೋಷಗಳು ಇಲ್ಲ ಎಂಬುದನ್ನು ನಾವು ಕಂಡುಕೊಂಡಿದ್ದೇವೆ. ಅದು ಏನೆಂದರೆ ವೋಟರ್ಸ್ ಲಿಸ್ಟಿನಲ್ಲಿ ಅವರ ಹೆಸರುಗಳು ಇಲ್ಲದೇ ಇರುವುದೇ ಮುಖ್ಯ ಕಾರಣ. ಅದರ ಸಲುವಾಗಿ ನಾನು ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಬೆಂಗಳೂರು ನಗರದಲ್ಲಿರುವ ಚಾಮರಾಜೇಂದ್ರ ನಗರ, ಸ್ವತಂತ್ರ ಪಾಳ್ಯ ಮತ್ತು ಆನಂದರಾವ್ ಸರ್ಕಲ್ ಈ ಪ್ರದೇಶ 500-600 ಗುಡಿಸಲುಗಳು ಇವೆ. ಸುಮಾರು 2 ಸಾವಿರ-ಮೂರು ಸಾವಿರ ಮತದಾರರು ಇದ್ದಾರೆ. ಅವರ ಹೆಸರುಗಳನ್ನು ಸಂಪೂರ್ಣವಾಗಿ ವೋಟರ್ಸ್ ಲಿಸ್ಟಿನಲ್ಲಿ ನಮೂದು ಮಾಡಿಲ್ಲ. ಈ ಬಗ್ಗೆ ಕಾರ್ಪೊರೇಷನ್ ಕಮೀಷನರ್, ಅಡ್ಮಿನಿಸ್ಟ್ರೇಟರ್ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ ಆ ಗುಡಿಸಲು ವಾಸಿಗಳು ಅನೇಕ ಅರ್ಜಿಗಳನ್ನು ಕೊಟ್ಟಿದ್ದಾರೆ. ಅವರಿಂದ ಅರ್ಜಿಗಳನ್ನು ಕೊಟ್ಟಿದ್ದಕ್ಕೆ ಕೇವಲ ಅಕ್‌ನಾಲೆಡ್ಜ್‌ಮೆಂಟ್ ಮಾತ್ರ ಬಂದಿದೆ. ಆದರೆ ಆ ಬಗ್ಗೆ ಆಕ್ಷನ್ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಇನ್‌ಫರ್ಮೇಷನ್ ಬಂದಿಲ್ಲ. ಸ್ಲಮ್ ಏರಿಯಾದಲ್ಲಿ ವಾಸ ಮಾಡತಕ್ಕ ಹರಿಜನರ ಹಾಗೂ ಇತರೆ ಮತದಾರರ ತೊಂದರೆ ಯಾವ ರೀತಿ ಇದೆ, ಅದನ್ನು ಹೇಗೆ ಸರಿಮಾಡಬೇಕೆಂಬ ಬಗ್ಗೆ ಕಾರ್ಪೊರೇಷನ್ ಅಧಿಕಾರಿಗಳು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ನಿಜವಾಗಿಯೂ ಇದು ವಿಷಾದಕರವಾದ ಸಂಗತಿ. ವೈಯ್ಯಕ್ತಿಕವಾಗಿ ನಾನು ಅಡ್ಮಿನಿಸ್ಟ್ರೇಟರ ಮೇಲೆ ದೋಷಾರೋಪಣೆಯನ್ನು ಮಾಡುತ್ತಿಲ್ಲ. ಆದರೆ How they are inefficient and their attitude is indifferent towards the problems of slum dwellers and their families

(ಶ್ರೀ ಎಸ್. ಎಸ್. ಅರಕೇರಿ)

ಎನ್ನುವುದು ನನ್ನ ವಾದ. ಅವರು ಯಾವ ಕೊಳಚೆ ಪ್ರದೇಶವನ್ನೂ ವಿಜಿಟ್ ಮಾಡಿಲ್ಲ. ಈ ಪ್ರದೇಶಗಳಿಂದ ಯಾವ ಯಾವ ತಕರಾರುಗಳು ಬಂದಿವೆ ಎಂಬುದನ್ನು ನೋಡಿ ಅವುಗಳನ್ನು ಪರೀಕ್ಷೆ ಮಾಡಿ ಸರಿಪಡಿಸಿ ಸರಿಯಾದಂತಹ ಮತದಾರರ ಪಟ್ಟಿಯನ್ನು ತಯಾರುಮಾಡುವಂತಹ ಪ್ರಯತ್ನವನ್ನು ಅಧಿಕಾರಿಗಳು ಮಾಡಿಲ್ಲ. ಇವೊತ್ತಿನ ದಿವಸ ಕಾರ್ಪೊರೇಷನ್ ಚುನಾವಣಾ ಪಟ್ಟಿಯಲ್ಲಿ ಕೊಳಚೆ ಪ್ರದೇಶದಲ್ಲಿರತಕ್ಕ ಮತದಾರರ ಹೆಸರನ್ನು ಸರಿಯಾಗಿ ನಮೂದು ಮಾಡದಿದ್ದರೆ ಬೆಂಗಳೂರಿನ ಮಧ್ಯದಲ್ಲಿರತಕ್ಕ ಅವರು ಬೆಂಗಳೂರು ನಗರದಿಂದ ಹೊರಗಡೆ 15–20 ಮೈಲಿ ದೂರ ಹೋಗಬೇಕಾಗುತ್ತದೆ. ಈ ವಿಷಯವನ್ನು ನಾನು ಅನೇಕ ಸಾರಿ ಮಾನ್ಯ ಪೌರಾಡಳಿತ ಶಾಖೆಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಬೆಂಗಳೂರು ನಗರದಲ್ಲಿರತಕ್ಕ ಕೊಳಚೆ ಪ್ರದೇಶದಲ್ಲಿ ವಾಸಮಾಡತಕ್ಕ ಹರಿಜನರಿಗಾಗಿ ವಸತಿಯನ್ನು ಒದಗಿಸಲು ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಈ ಬಗ್ಗೆ ಕಾರ್ಪೊರೇಷನ್ನಿನವರಾಗಲೀ ಅಥವಾ ಸಂಬಂಧಪಟ್ಟ ಮಂತ್ರಿಗಳಾಗಲಿ, ಸರಿಯಾದಂತಹ ಒಂದು ಯೋಜನೆಯನ್ನು ನಿರ್ಮಾಣ ಮಾಡಿಲ್ಲ. ಮೊನ್ನೆ ಮಾನ್ಯ ಮಂತ್ರಿಗಳು ಹೇಳಿದರು, ಕಾರ್ಪೊರೇಷನ್ನಿನ ಅಡ್ಮಿನಿಸ್ಟ್ರೇಟರನ್ನು ಮುಂಬೈಗೆ ಕಳುಹಿಸಿದ್ದೇವೆ. ಅವರು ಅಲ್ಲಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಯಾವ ರೀತಿ ಕಟ್ಟಿದ್ದಾರೆ ಎಂಬುದನ್ನು ನೋಡಿಕೊಂಡು ಬಂದು ಇಲ್ಲಿ ಬೆಂಗಳೂರಿನಲ್ಲಿ ಕೊಳಚೆ ಪ್ರದೇಶದಲ್ಲಿ ವಾಸವಾಗಿರತಕ್ಕ ಹರಿಜನರಿಗಾಗಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಯಾವ ರೀತಿ ಕಟ್ಟಬೇಕೆಂಬ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡುತ್ತಾರೆ ಎಂದು ಹೇಳಿದರು. ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳು ಬೆಂಗಳೂರು ನಗರದಲ್ಲಿ ಉಪಯೋಗವಾಗುವುದಿಲ್ಲ. ಮುಂಬೈ ನಗರಕ್ಕೆ ಸಮುದ್ರವು ಸುತ್ತುವರಿದಿದೆ ಅದು ಬೆಳೆಯುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಅಲ್ಲಿ ಮಲ್ಟಿಸ್ಟೋರೀಡ್ ಬಿಲ್ಡಿಂಗಿನ ಉಪಯೋಗ ಇದೆ. ಆದರೆ ಬೆಂಗಳೂರು ನಗರ 20–30 ಮೈಲಿ ಬೆಳೆಯುವುದಕ್ಕೆ ಅವಕಾಶ ಇದೆ. ಆದ್ದರಿಂದ ಇಲ್ಲಿ ಬೆಂಗಳೂರಿನಲ್ಲಿ ಹರಿಜನರಿಗಾಗಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಕಟ್ಟಬೇಕಾದ ಅವಶ್ಯಕತೆ ಇಲ್ಲ. ಆದ್ದರಿಂದ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಕಟ್ಟತಕ್ಕ ಯೋಜನೆಯನ್ನು ಬೆಂಗಳೂರು ನಗರಕ್ಕೆ ಅಪ್ಲೈ ಮಾಡಬೇಡಿ. ಇವೊತ್ತು 20 ಲಕ್ಷ ಪ್ರಜಾಸಂಖ್ಯೆ ಇರತಕ್ಕ ಬೆಂಗಳೂರು ಮಹಾನಗರದಲ್ಲಿ 5-6 ಲಕ್ಷ ಜನರು ಹರಿಜನರು ಕೊಳಚೆ ಪ್ರದೇಶದಲ್ಲಿ ವಾಸವಾಗಿದ್ದಾರೆ. ಇದರ ಜೊತೆಗೆ ಇತರೆ ಬ್ಯಾಕ್‌ವರ್ಡ್ ಜನರೂ ಅಲ್ಲಿ ವಾಸವಾಗಿದ್ದಾರೆ. ಅವರ ಸಲುವಾಗಿ ಯಾವ ಒಂದು ಯೋಜನೆಯನ್ನೂ ತಯಾರುಮಾಡಿಲ್ಲ. ಆಂಜನೇಯ ಬ್ಲಾಕಿನಲ್ಲಿ ಸುಮಾರು 500 ಗುಡಿಸಲುಗಳು ಇವೆ. ಅವರು ತಮ್ಮ ಕಷ್ಟಗಳ ಬಗ್ಗೆ ಪರಿಶೀಲಿಸಿ ಅನುಕೂಲ ಮಾಡಿಕೊಡಬೇಕೆಂದು ಸುಮಾರು 10 ವರ್ಷಗಳಿಂದ ಕಾರ್ಪೊರೇಷನ್ನಿನವರಿಗೆ ಮತ್ತು ಟ್ರಸ್ಟ್‌ಬೋರ್ಡಿನವರಿಗೆ ಮತ್ತು ಹೌಸಿಂಗ್ ಬೋರ್ಡಿನವರಿಗೆ ಅರ್ಜಿಗಳನ್ನು ಸಲ್ಲಿಸುತ್ತಿದ್ದಾರೆ. ಕಾರ್ಪೊರೇಷನ್ನಿನವರು, ಟ್ರಸ್ಟ್ ಬೋರ್ಡಿನವರು, ಮತ್ತು ಹೌಸಿಂಗ್ ಬೋರ್ಡಿನವರು ಒಬ್ಬರಮೇಲೊಬ್ಬರನ್ನು ತೋರಿಸುತ್ತಾ ಅವರಿಗೆ ಯಾವ ಅನುಕೂಲತೆಯನ್ನೂ ಮಾಡಿಕೊಟ್ಟಿಲ್ಲ. ಅವರ ಬಗ್ಗೆ ಒಂದು ಸಮಸ್ಯೆಯನ್ನು ನಿರ್ಮಾಣ ಮಾಡಿ ಕಾರ್ಪೊರೇಷನ್ನಿನವರು ತಮ್ಮ ಜವಾಬ್ದಾರಿಯಿಂದ ದೂರವಾಗುತ್ತಿದ್ದಾರೆ. ಹೀಗಾದರೆ ಕಾರ್ಪೊರೇಷನ್ನಿನವರು ಬೆಂಗಳೂರು ಬಡ ನಾಗರೀಕರ ಕಷ್ಟವನ್ನು ನಿರ್ಮೂಲ ಮಾಡುವುದಕ್ಕೆ ಸಾಧ್ಯವೇ ? ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕು. ಬೆಂಗಳೂರು ನಗರದಲ್ಲಿರತಕ್ಕ 120 ಸ್ಲಮ್ ಏರಿಯಾದಲ್ಲಿ ಗುಡಿಸಲುಗಳಲ್ಲಿ ವಾಸ ಮಾಡತಕ್ಕ ಜನಗಳಿಗೆ ಅನುಕೂಲ ಮಾಡಿ ಅವರನ್ನು ಸುಧಾರಣೆ ಮಾಡುವ ದೃಷ್ಟಿಯಿಂದ ಅವರಿಗೆ ಒಂದು ವ್ಯಾಪಕವಾದ ಯೋಜನೆಯನ್ನು ತಯಾರುಮಾಡಬೇಕು. ಕಲಾಸಿಪಾಳ್ಯದಲ್ಲಿ 500 ಗುಡಿಸಲುಗಳಲ್ಲಿ ಹರಿಜನ ಭಾಂಧವರು ಇದ್ದರು. ಅವರು ಅಲ್ಲಿ ಸುಮಾರು 50–60 ವರ್ಷಗಳಿಂದ ವಾಸವಾಗಿದ್ದರು. ಕಾರ್ಪೊರೇಷನ್ ಕಮೀಷನರು ರಾತ್ರಿ ವೇಳೆಯಲ್ಲಿ ಪೋಲೀಸರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಆ 500 ಗುಡಿಸಲುಗಳನ್ನು ನೆಲಸಮ ಮಾಡಿದ್ದಾರೆ.

[Mr. Deputy Speaker in the Chair.]

ಕಟುಕನಿಗಾದರೂ ಕೂಡ ಸ್ವಲ್ಪ ಕರುಣೆ ಎಂಬುದು ಇರುತ್ತದೆ. ಆದರೆ ಈ ಅಧಿಕಾರಿಗಳಿಗೆ ಕರುಣೆ ಎಂಬುದು ಇಲ್ಲವಾಗಿದೆ. ಇಲ್ಲಿಯ ಜನರನ್ನು ಬೇರೆ ಕಡೆ ಸ್ಥಳಾಂತರ ಮಾಡಿದ ಮೇಲೆ ಗುಡಿಸಲುಗಳನ್ನು ಕೀಳಬೇಕಾಗಿತ್ತು. ಆದರೆ ಆ ರೀತಿ ಮಾಡದೆ ಆ ಜನರ ಗುಡಿಸಲನ್ನು ಕಿತ್ತು ಹಾಕಿದ್ದಾರೆ. ವೈಟ್ ಕಾಲರ್ ಅಡ್ಮಿನಿಸ್ಟ್ರೇಷನ್ ನಡೆಸುವುದು ಸರಿಯಲ್ಲ. ಅಧಿಕಾರಿಗಳಲ್ಲಿ ಅಹಂಕಾರ ಭಾವನೆ

ಎಂಬುದು ಇದೆ. ಇದೇ ವಿಚಾರದಲ್ಲಿ ಅಲ್ಲಿಯ ಜನರು ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಇದರಿಂದ ಸರ್ಕಾರದ ಮುಖಕ್ಕೆ ಮಸಿ ಬಳಿದಂತಾಗಲಿಲ್ಲವೇ ! ಮೊದಲೇ ಅವರಿಗೆ ಬೇರೆ ಕಡೆ ಸೈಟ್‌ಗಳನ್ನು ಏತಕ್ಕೆ ಕೊಡಬಾರದಾಗಿತ್ತು ! I am telling the Government that it may not to give sites there itself. Let alternative sites be arranged on the outskirts of this City. They are part and parcel of this City. Otherwise, serious consequences will have to be faced in future by the Government. I warn the Government about it. I want that Government should have a separate scheme for them. I don't want that they should be put up in multistoreyed bnildings. The Bombay Multistoried scheme is not practical for Bangalore City. Bombay City circumstances are quite different and sorrounded by sea whereas Bangalore is not. Therefore the Multistoried Building project is not advisable to Bangalore and it will never solve the problems of slum dwellers of this City. So, the site Measuring 30' × 40' should be given to all Sluml dwellers and this will alone solve their problems.

ಇದೇ ರೀತಿ ಟಿಪ್ಪುನಗರದಲ್ಲಿ ಕೂಡ ಕುಡಿಯುವ ನೀರಿನ ಅನುಕೂಲವಿಲ್ಲವಾಗಿದೆ. ಕಳೆದ ಎರಡು ವರ್ಷಗಳಿಂದ ಕೂಡ ನಾನು ಕುಡಿಯುವ ನೀರನ್ನು ಒದಗಿಸಬೇಕೆಂದು ಕಾರ್ಪೊರೇಷನ್ ಅಧಿಕಾರಿಗಳನ್ನು ಭೇಟಿ ಮಾಡಿ ಹೇಳಿದ್ದೇನೆ. ಇದುವರೆಗೆ ನಲ್ಲಿಗಳನ್ನು ಹಾಕಿಲ್ಲ. ಇಲ್ಲಿ 500 ಕುಟುಂಬಗಳು ಹೈದರಾಬಾದ್ ಕಡೆಯಿಂದ ಬಂದವರು ಕಳೆದ 40 ವರ್ಷದಿಂದ ಇದ್ದಾರೆ. ಮುಸಲ್ಮಾನ್ ಜಾತಿಯ ಹೆಣ್ಣುಮಕ್ಕಳು ಗೋಷಾ ಹಾಕುವುದರಿಂದ ಸರಿಯಾದ ನೀರಿನ ಸೌಕರ್ಯವಿಲ್ಲದೆ ರಾತ್ರಿ ಕಾಲದಲ್ಲಿ ಎರಡು ಮೈಲಿ ದೂರದಿಂದ ನೀರನ್ನು ತಂದು ಉಪಯೋಗಿಸುತ್ತಿದ್ದಾರೆ. ಇದೇ ರೀತಿ ಆಂಧ್ರ ಚೌಕದಲ್ಲಿ ಹರಿಶ್ಚಂದ್ರಘಾಟಿನಲ್ಲಿರುವ ಜನರಿಗೂ ಕೂಡ ಕುಡಿಯುವ ನೀರಿನ ಸೌಕರ್ಯ ಇಲ್ಲವಾಗಿದೆ. ಕಾರ್ಪೊರೇಷನ್‌ಗೆ ಚುನಾವಣೆ ಮಾಡದೆ ನಾನಾ ಕಾರಣಗಳನ್ನು ಹೇಳಿ ಮುಂದೆ ಹಾಕುತ್ತಿದ್ದಾರೆ. ಮೂರು ಸಲ ಸೂಪರಸೀಡ್ ಮಾಡಿದ್ದಾಯಿತು. ಕಾರ್ಪೊರೇಷನ್ ಆಡಳಿತಾಧಿಕಾರಿಯವರಾಗಲಿ, ಅಥವಾ ಸರ್ಕಾರವಾಗಲಿ ಇದುವರೆಗೆ ಜನರಿಗೆ ಯಾವ ಸೌಕರ್ಯವನ್ನೂ ಸಹ ಮಾಡಿಕೊಟ್ಟಿಲ್ಲ. ಇವತ್ತಿನ ದಿವಸ ನಾನು ಸರ್ಕಾರಕ್ಕೆ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಗುಡಿಸಲು ವಾಸಿಗಳಿಗೆ ಮೊದಲು ಲೈಟು ಮತ್ತು ನೀರಿನ ಅನುಕೂಲಗಳನ್ನು ಮಾಡಿಕೊಡಬೇಕು. ಅವರದ್ದೇ ಆದ ಬೇರೆ ಸೈಟುಗಳನ್ನು ಅಲಾಟ್ ಮಾಡುವವರೆಗೆ ಅವರ ಗುಡಿಸಲುಗಳನ್ನು ಕೀಳಬಾರದು. ಈ ರೀತಿ ಮಾಡಿದ್ದೇ ಆದರೆ ಬೆಂಗಳೂರು ನಗರಕ್ಕೆ ಒಳ್ಳೆಯ ಶೋಭೆ ಬರುತ್ತದೆ. ಇಲ್ಲವಾದರೆ ಮುಂದೆ ಸರ್ಕಾರಕ್ಕೆ ಬಹಳ ತೊಂದರೆಯಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಬಡವರ ಮೇಲೆ ದಬ್ಬಾಳಿಕೆ ಮಾಡುವುದು ಸರಿಯಲ್ಲ. ಕೇಂದ್ರ ಸರ್ಕಾರದ ಸಹಾಯದಿಂದ ಫೈವ್—ಸ್ಟಾರ್ ಹೊಟೇಲ್ ಕಟ್ಟಿಸುವುದು, ಸ್ಟೇ—ಲಾಂಗರ್‌ನಂತಹ ದೊಡ್ಡ ದೊಡ್ಡ ಹೊಟೇಲ್‌ಗಳನ್ನು ಕಟ್ಟುವುದಕ್ಕೆ ಮಾತ್ರ ಪ್ರೋತ್ಸಾಹ ಕೊಟ್ಟು ಬಡವರನ್ನು ನೆಗ್ಲೆಕ್ಟ್ ಮಾಡುವುದಾದರೆ ಆದರಿಂದ ಸರ್ಕಾರಕ್ಕೆ ಮುಂದೆ ಬಹಳ ತೊಂದರೆ ಬರುತ್ತದೆ. ಸರ್ಕಾರದವರು ಬಡವರ ತೊಂದರೆಗಳನ್ನು ಸಹ ಬಗೆಹರಿಸಬೇಕು. ಇವತ್ತಿನ ದಿವಸ ಮಾಡಿರತಕ್ಕಂಥ ಚುನಾವಣಾ ಪಟ್ಟಿಯಲ್ಲಿ ಶೇಕಡಾ 30ರಷ್ಟು ಹೆಸರುಗಳೇ ಇಲ್ಲವಾಗಿದೆ. ಈ ಬಗ್ಗೆ ಕೂಡಲೇ ಸರ್ಕಾರದವರು ಒಬ್ಬರು ಸ್ಪೆಷಲ್ ಅಧಿಕಾರಿಯನ್ನು ನೇಮಕ ಮಾಡಿ ತನಿಖೆ ಮಾಡಿಸಿ ಸರಿಪಡಿಸಬೇಕು. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಓಟು ಮಾಡುವ ಅಧಿಕಾರ ಎಲ್ಲ 18ರ ಮೇಲೆ ಇರುವ ವಯಸ್ಕರಿಗೂ ಕೂಡ ಇದೆ. ಅದನ್ನು ಕಿತ್ತುಹಾಕುವುದು ಸರಿಯಲ್ಲ. ಇದನ್ನು ಮೊದಲು ಸರಿಪಡಿಸಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳಿಕೊಂಡು, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಮತ್ತೊಮ್ಮೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ನಮ್ಮ ಎದುರಿಗೆ ತಂದಿರತಕ್ಕಂಥ The City of Bangalore Municipal Corporation (Amendment) Bill, 1970, ರ ಕೆಲವು ಭಾಗಗಳನ್ನು ನಾನು ವಿರೋಧಿಸುತ್ತೇನೆ. ಇವತ್ತಿನದಿವಸ ನಮ್ಮ ಎದುರಿಗೆ ತಂದಿರತಕ್ಕಂಥ ಬಿಲ್ ಆರ್ಡಿನೆನ್ಸ್‌ನ್ನು ರೀಪ್ಲೇಸ್ ಮಾಡುವ ರೂಪದಲ್ಲಿ ಬಂದಿದೆ. ಜನತೆಯ ಒತ್ತಾಯಕ್ಕೋಸ್ಕರ ಚುನಾವಣೆಯನ್ನು ಜಾಗ್ರತೆ ಮಾಡಬೇಕಾಗಿ ಬಂದು ಅಸೆಂಬ್ಲಿ ನಡೆಯುವವರೆಗೂ ಕೂಡ ಕಾಯುವುದಕ್ಕಾಗದೆ ಆ ಬಗ್ಗೆ ಆರ್ಡಿನೆನ್ಸ್‌ನ್ನು ಹೊರಡಿಸಬೇಕಾಯಿತೆಂಬ

(ಶ್ರೀ ಕೆ. ಎಚ್. ಪಾಟೀಲ್)

ವಾದವನ್ನು ಮಾನ್ಯ ಮಂತ್ರಿಗಳು ನಮ್ಮ ಮುಂದೆ ಮಾಡಿದ್ದಾರೆ. ಇವತ್ತಿನ ದಿವಸದ ಪರಿಸ್ಥಿತಿಯಲ್ಲಿ ವಿಚಾರ ಮಾಡುವುದಾದರೆ ಅಸೆಂಬ್ಲಿ ಕರೆಯುವವರೆಗೂ ಕಾರ್ಪೊರೇಷನ್ ಚುನಾವಣೆಯ ಯಾವುದೇ ಕಾರ್ಯಕ್ರಮಗಳನ್ನು ನಿರ್ದಿಷ್ಟ ರೂಪದಲ್ಲಿ ಕಾರ್ಯಗತಗೊಳಿಸುವುದು ಕಷ್ಟವಾದ್ದರಿಂದ ಆರ್ಡಿನೆನ್ಸ್ ಹೊರಡಿಸಬೇಕಾಯಿತು ಎಂಬ ಮಾತನ್ನು ಮಾನ್ಯ ಮಂತ್ರಿಗಳು ಹೇಳುವುದಾದರೆ ಸರ್ಕಾರದ ಹಿನ್ನೆಲೆ ಈ ವಿಚಾರದಲ್ಲಿ ಯಾವ ರೀತಿಯಲ್ಲಿದೆ ಎಂಬುದು ಗೊತ್ತಾಗುತ್ತಿದೆ. ಇಲ್ಲಿ ಕೇವಲ ಚುನಾವಣೆಯ ಬಗ್ಗೆ ಮಾತ್ರ ಆರ್ಡಿನೆನ್ಸ್ ಹೊರಡಿಸದೆ ಬೇರೆ ವಿಷಯಗಳ ಬಗ್ಗೆಯೂ ಕೂಡ ಆರ್ಡಿನೆನ್ಸ್ ಹೊರಡಿಸಿ ಈಗ ಬಿಲ್ ರೂಪದಲ್ಲಿ ತಂದಿರುವುದನ್ನು ನೋಡಿದರೆ ಸರ್ಕಾರ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದೆಯೆಂದು ಹೇಳಬಹುದು. ಅಧಿಕಾರ ತನ್ನ ಕೈಯಲ್ಲಿದೆ ಎಂಬುದಾಗಿ ಈ ರೀತಿ ಮಾಡುವುದು ಸರಿಯಲ್ಲ. ಸೆಕ್ಷನ್ 52ನ್ನು ಇಲ್ಲಿ ಅಮೆಂಡ್ ಮಾಡಿದ್ದಾರೆ. ವಿಧಾನಸಭೆಯ ಮತದಾರರ ಪಟ್ಟಿಯನ್ನೇ ಕಾರ್ಪೊರೇಷನ್ ಚುನಾವಣೆಗೂ ಕೂಡ ಉಪಯೋಗ ಮಾಡಬಹುದೆಂದು ಏನು ಈಗ ತಿದ್ದುಪಡಿ ತಂದಿದ್ದಾರೆ ಅದು ಸ್ವಾಗತಾರ್ಹವಾಗಿದೆ. ಇದಕ್ಕೆ ಮೊದಲು ಕಾರ್ಪೊರೇಷನ್‌ನವರು ತಮ್ಮದೇ ಆದ ಒಂದು ಚುನಾವಣಾ ಪಟ್ಟಿಯನ್ನು ತಯಾರುಮಾಡಿ ಅದರಲ್ಲಿ ಕೆಲವೊಂದು ಲೋಪದೋಷಗಳು ಕಂಡು ಬಂದಿದ್ದರಿಂದ ಚುನಾವಣೆಯನ್ನು ಮುಂದಕ್ಕೆ ಹಾಕಿದರು. ಈಗ ಅಸೆಂಬ್ಲಿಯ ಮತದಾರರ ಪಟ್ಟಿಯೇ ಕಾರ್ಪೊರೇಷನ್ ಚುನಾವಣೆಗೂ ಇರಬೇಕೆಂದು ಹೇಳಿ ಬಿಲ್ ತಂದಿದ್ದಾರೆ. ಕಾರ್ಪೊರೇಷನ್ ಆಡಳಿತಾಧಿಕಾರಿಯವರು ಒಂದು ಮಾತನ್ನು ಲಕ್ಷ್ಯದಲ್ಲಿ ಇಡಬೇಕು. ಚುನಾವಣೆಯನ್ನು ಎಲ್ಲ ವಾರ್ಡಿನಲ್ಲಿಯೂ ಕೂಡ ಸೂಕ್ತ ರೀತಿಯಲ್ಲಿ ನಡೆಯುವಂತೆ ತಕ್ಕ ಏರ್ಪಾಡುಗಳನ್ನು ಜಾಗ್ರತೆ ಮಾಡಬೇಕು. ಮೊದಲೇ ಅಸೆಂಬ್ಲಿಯ ಮತದಾರರ ಪಟ್ಟಿಯನ್ನು ಈ ಚುನಾವಣೆಗೂ ಉಪಯೋಗ ಮಾಡಿದ್ದರೆ ಅದಕ್ಕೆ ಯಾವ ರೀತಿಯ ಅಭ್ಯಂತರವೂ ಸಹ ಇರುತ್ತಿರಲಿಲ್ಲ. ಆ ರೀತಿ ಮಾಡದೆ ಬೇರೆ ಮತದಾರರ ಪಟ್ಟಿಯನ್ನು ತಯಾರುಮಾಡುತ್ತೇವೆಂದು ಹೇಳಿಕೊಂಡು ಚುನಾವಣೆಯನ್ನು ಮುಂದಕ್ಕೆ ಹಾಕಿಕೊಂಡು ಬಂದಿದ್ದು ವಾದವಿವಾದಗಳಿಗೆ ಆಸ್ಪದ ಕೊಟ್ಟಂತಾಗಿದೆ. ಮತ್ತು ಇದರ ಹಿನ್ನೆಲೆಯಲ್ಲಿ ಏನೋ ನಡೆದಿದೆ, ಏನೋ ಕೈವಾಡ ಇದೆ ಎಂದು ಅರ್ಥ ಬರುವಂತೆ ಆಗಿದೆ. ಈ ಕಾಯಿದೆಯನ್ನು ಮೊದಲೇ ಮಾಡದೆ ತಡೆಹಿಡಿದು ಈಗ ಮಾಡುತ್ತಿರುವುದನ್ನು ನೋಡಿದರೆ ಇದರ ಹಿಂದೆ ಏನೋ ನಡೆಯುತ್ತಿದೆ ಎಂಬುದು ಸ್ಪಷ್ಟವಾಗಿದೆ. ಇದೇ ಸಂದರ್ಭದಲ್ಲಿ ಒಂದು ಭವಿಷ್ಯವನ್ನು ನುಡಿದರೆ ತಪ್ಪಾಗಲಾರದು ಎಂದು ನಾನು ತಿಳಿದಿದ್ದೇನೆ. ಈ ವರ್ಷದ ಡಿಸೆಂಬರ್ ತಿಂಗಳಲ್ಲಿ ಕಾರ್ಪೊರೇಷನ್ ಚುನಾವಣೆಯನ್ನು ಮಾಡಲು ಸರ್ಕಾರದವರು ಹವ್ಯಾಸ ಇಟ್ಟುಕೊಂಡರೆ ಅದು ಖಂಡಿತ ಸಾಧ್ಯವಿಲ್ಲ. ಆ ಚುನಾವಣೆಯನ್ನು ಯಾವ ರೀತಿಯಿಂದಲಾದರೂ ಮುಂದೂಡುವಂತಹದ್ದು ಸ್ಪಷ್ಟವಾಗಿ ಕಾಣಬರುತ್ತಿದೆ. ಡೆಮಾಕ್ರಸಿಯ ಸಂಪೂರ್ಣವಾದ ಕೊಲೆ ಏನಾದರೂ ಆಗಿದ್ದರೆ ಅದು 1967ರಿಂದೀಚೆಗೆ ಆಡಳಿತಕ್ಕೆ ಬಂದಂಥ ಸರ್ಕಾರದಿಂದ ಆಗಿದೆ ಎಂದು ಸ್ಪಷ್ಟವಾಗಿ ಹೇಳಬಹುದು. ಎ.ಪಿ.ಎಂ.ಸಿ.ಯ ಚುನಾವಣೆ ಯಾವ ರೀತಿ ನಡೆಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ಇಲ್ಲಿ ಸರ್ಕಾರದವರು ಆಡಿದ ನಾಟಕ, ಮತ್ತು ಕುತಂತ್ರವನ್ನು ನೋಡಿದರೆ ಕಾರ್ಪೊರೇಷನ್ ಚುನಾವಣೆಯೂ ಕೂಡ ಅದೇ ರೀತಿ ಆಗಬಹುದೆಂದು ಕಾಣುತ್ತದೆ. ಎ.ಪಿ.ಎಂ.ಸಿ.ಯ ಚುನಾವಣೆಯಲ್ಲಿ ಪ್ರಜಾಪ್ರಭುತ್ವದ ಕೊಲೆ ಮಾಡಿರುವುದರಿಂದ ಈ ಚುನಾವಣೆಯಲ್ಲಿಯೂ ಅದೇ ನೀತಿಯನ್ನು ಅನುಸರಿಸಿದರೆ ನಾವು ಆಶ್ಚರ್ಯ ಪಡಬೇಕಾಗಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ ಚುನಾವಣೆಯ ಸಮಯದಲ್ಲಿ ಮತದಾರರನ್ನು ತಪ್ಪುದಾರಿಗೆಳೆಯುವುದು ಇವರ ಪದ್ಧತಿಯಾಗಿದೆ. ಇದೇ ಸಂದರ್ಭದಲ್ಲಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳ ಗಮನವನ್ನು ಸೆಳೆದು ಒಂದು ಮಾತನ್ನು ಹೇಳುತ್ತೇನೆ, ಏನೆಂದರೆ ಈ ರಾಜ್ಯದಲ್ಲಿರತಕ್ಕಂತಹ ಎಲ್ಲ ನಗರಸಭೆಗಳಿಗೂ ಕೂಡ ಚುನಾವಣೆಯನ್ನು ನಡೆಸುವುದಾದರೆ ಅದಕ್ಕೆ ನಾವು ವಿರೋಧ ಮಾಡುವುದಿಲ್ಲ. ಚುನಾವಣೆಯನ್ನು ನಡೆಸುವ ವಿಚಾರದಲ್ಲಿ ನಾವುಗಳು ಎಲ್ಲ ರೀತಿಯಿಂದಲೂ ಕೂಡ ನಿಮ್ಮ ಕೈಯನ್ನು ಬಲಪಡಿಸುತ್ತೇವೆ ಮತ್ತು ಸಂಪೂರ್ಣವಾದ ಸಹಕಾರವನ್ನು ಕೊಡುತ್ತೇವೆ. ಆದರೆ ನಾನು ನಿಮ್ಮನ್ನು ಇಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ. ಇವೊತ್ತು ಚುನಾವಣೆಗಳನ್ನು ನಡೆಸಲು ಸರಕಾರದಲ್ಲಿ ಎಷ್ಟೋ ಕಾಯಿದೆಗಳು ಇವೆ. ಅದರಂತೆ ಸರಕಾರ ಎಲ್ಲಕಡೆಗಳಲ್ಲೂ ಚುನಾವಣೆಗಳನ್ನು ನಡೆಸುವ ಅಧಿಕಾರವೂ ತಮಗಿದೆ. ಉದಾಹರಣೆಯಾಗಿ ಹೇಳಬೇಕೆಂದರೆ ನನ್ನ ಕ್ಷೇತ್ರವಾದ ಗದಗ್ ನಗರ ಸಭೆ ಯಾವ ರೀತಿ ಕೆಲಸಗಳನ್ನು ಸುಮಾರು ನೂರು ವರ್ಷಗಳಿಂದಲೂ ಮಾಡಿಕೊಂಡು ಬರುತ್ತಿದೆ ಎನ್ನುವುದನ್ನು ಯಾರು ಬೇಕಾದರೂ ಪರಿಶೀಲನೆ ಮಾಡಿ ನೋಡಬಹುದು. ಆದರೆ 67ರ ನಂತರ ಕೆಲವು ಕಾರಣಗಳಿಂದಾಗಿ ಇಲ್ಲಿ ಚುನಾವಣೆಗಳು ಆಗಲಿಲ್ಲ....

ಶ್ರೀ ಬಿ. ಎಂ. ಪಾಟೀಲ್.—ಗದಗ್ ಬೆಟಗೇರಿ ಮುನಿಸಿಪಲ್ ಚುನಾವಣೆಗಳ ಬಗ್ಗೆ ಇಲ್ಲಿ ಬಿಲ್ಲನ್ನು ತಂದಿಲ್ಲ. ಇದು ಹೇಗೆ ಇಲ್ಲಿಗೆ ಸಂಬಂಧಪಡುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರಲ್ಲಿ ಕೇಳಬೇಕಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಯಾವಾಗಲೂ ಅಸಂಬದ್ಧವಾದ ಹಾಗೂ ಅಸಮರ್ಪಕವಾದ ಪ್ರಶ್ನೆಗಳನ್ನು ಇಲ್ಲಿ ಕೇಳುತ್ತಿಲ್ಲ. ಇಲ್ಲಿ ತಂದಿರುವ ಬಿಲ್ಲಿನಲ್ಲಿ ಅಡಗಿರುವ ತತ್ವ ಮತ್ತು ಇದರ ಒಳಗಿರುವ ಹೃದಯ ಯಾವ ರೀತಿ ಇದೆ ಮತ್ತು ಇದನಂತೆ ನೀವು ಮಾಡುವುದಾದರೆ ಇದರಿಂದ ನಿಜವಾಗಿಯೂ ಪ್ರಜಾಪ್ರಭುತ್ವವನ್ನು ಬೆಳೆಸಿದಂತಾಗುತ್ತದೆಯೇ? ಆಡಳಿತವನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳಲು ಅನುಕೂಲವಾಗುವಂತೆ ತಮ್ಮ ಅಧಿಕಾರಿಗಳನ್ನು ಇದರಲ್ಲಿ ನೇಮಿಸಿಕೊಂಡು ಇದರಿಂದ ಬರುವ ಚುನಾವಣೆಗೆ ಸಾಕಷ್ಟು ದುಡ್ಡುಗಳನ್ನು ವಸೂಲು ಮಾಡಿಕೊಳ್ಳಲು ಅನುಕೂಲವಾಗುವಂತೆ ಇಲ್ಲಿ ಚುನಾವಣೆಗಳನ್ನು ಮಾಡುತ್ತೇವೆಂದು ಸುಮ್ಮನೆ ಹೇಳುತ್ತಿದ್ದಾರೆ. ನಾನು ಒಂದು ಎಚ್ಚರಿಕೆ ಮಾತನ್ನು ಇಲ್ಲಿ ಹೇಳಬೇಕಾಗಿದೆ. ಎಲ್ಲಿಯವರೆಗೆ ಶ್ರೀಮಾನ್ ಬಿ. ಎಂ. ಪಾಟೀಲ್‌ರವರು ಅಧಿಕಾರದಲ್ಲಿರುತ್ತಾರೋ ಅಲ್ಲಿಯವರೆಗೆ ಈ ಚುನಾವಣೆಗಳು ಆಗುವುದೇ ಇಲ್ಲ. ವಿರೋಧ ಪಕ್ಷದವರು ಬರೀ ಟೀಕೆಗಾಗಿ ಇದನ್ನು ಹೇಳುತ್ತಿಲ್ಲ. ಮೊದಲಿಂದಲೂ ಸರಕಾರ ಏನು ಮಾಡುತ್ತಾ ಬಂದಿದೆ ಅದನ್ನು ಪುಷ್ಟೀಕರಿಸುವುದಕ್ಕಾಗಿ ನೀವು ನಡೆದುಕೊಂಡ ರೀತಿ ನೀತಿಗಳನ್ನು ಕುರಿತು ಇಲ್ಲಿ ಹೇಳಬೇಕಾಗಿ ಬಂದಿದೆ. ಸರಿಯಾದ ಕಾಯಿದೆ ಇಲ್ಲ ಎಂದು ಹೇಳುತ್ತಾ ಮಂತ್ರಿಮಂಡಲದವರು ನಗರ ಸಭೆಯನ್ನು ಸೂಪರ್‌ಸೀಡು ಮಾಡಿ ನಿಮ್ಮ ಕೈಯಲ್ಲಿ ಅಧಿಕಾರ ಇದೆ ಎಂದು ಒಬ್ಬರು ಕೇರ್ ಟೇಕರ್ ಅಧಿಕಾರಿಗಳನ್ನು ಇಲ್ಲಿ ನೇಮಕ ಮಾಡಿ ಚುನಾವಣೆಗಳನ್ನು ಇನ್ನೂ ಐದು ವರ್ಷಗಳಾದರೂ ಮಾಡಲು ಆಗಲಿಲ್ಲ. ಇದಕ್ಕಾಗಿ ಈ ಮಂತ್ರಿಮಂಡಲದವರು ಅಧಿಕಾರದಲ್ಲಿರಲು ನಾಲಾಯಕ್ಕು ಆಗಿದ್ದಾರೆ ಎಂದು ಹೇಳಬೇಕಾಗಿದೆ. ಇಂತಹ ಸರಕಾರದಿಂದ ಯಾವ ರೀತಿ ಆಡಳಿತ ಮಾಡುತ್ತೀರಿ ಎಂದು ನಾನು ಇಲ್ಲಿ ಪ್ರಶ್ನಿಸುತ್ತೇನೆ. ಐದೈದು ವರ್ಷಗಳಿಗೆ ಒಂದು ಸಾರಿ ಅಧಿಕಾರಿಗಳನ್ನು ಬದಲಾವಣೆ ಮಾಡಿ ನಿಮಗೆ ಬೇಕಾದ ಕೆಲಸಗಳನ್ನು ಮಾಡಿಸಲು ಅವರನ್ನು ಹೆದರಿಸಿ ಬೆದರಿಸಿ ನಿಮ್ಮ ಪಕ್ಷಕ್ಕಾಗಿ ಹಣ ಕೂಡಿಸಿ ಬೆಳಸಲು ನಿಮ್ಮ ಕೈಯಲ್ಲೇ ಅಧಿಕಾರ ಉಳಿಸಿಕೊಳ್ಳಬೇಕೆಂದು ಮಾಡುವುದು ಯಾವ ಧರ್ಮ? ನಿಮ್ಮ ಪಕ್ಷದ ನಿಧಿಗಾಗಿ ಹಣ ಕೂಡಿಸುವ ಸಂಬಂಧದಲ್ಲಿ ಈಚೆಗೆ ಎಂ.ಪಿ.ಸಿ.ಸಿ. ಅಕೌಂಟಿನಲ್ಲಿ ಒಬ್ಬರು ಸುಮಾರು ಲಕ್ಷಾಂತರ ರೂಪಾಯಿಗಳಷ್ಟು ದುರ್ವ್ಯಯ ಮಾಡಿರುವುದು ನಮಗೆ ಈಚೆಗೆ ಕಂಡು ಬಂದಿದೆ. ಈ ಹಣವನ್ನು ಬೇರೆ ಬೇರೆ ರೀತಿಯಾಗಿ ಸೇರಿಸಿಕೊಂಡು ಬರುತ್ತಿದ್ದಾರೆ. ನಿಮ್ಮ ಕೈಯಲ್ಲಿ ಅಧಿಕಾರ ಇರುವುದು ನಿಮ್ಮ ಪಕ್ಷದ ಸಂಘಟನೆಗಾಗಿ ಹೊರತು ಎಲೆಕ್ಷನ್‌ಗಳನ್ನು ಮಾಡುವುದಕ್ಕೆ ಶಕ್ತಿ ಇಲ್ಲ ಎನ್ನುವುದು ನನ್ನ ಮೊದಲನೇ ಚಾರ್ಜು ಎಂದು ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಬಿ. ಎಂ. ಪಾಟೀಲ್.—ಇಲ್ಲಿ ಚುನಾವಣೆಗಳನ್ನು ನಡೆಸಬೇಕು ಎನ್ನುವುದರ ಬಗ್ಗೆ ಇರುವ ಬಿಲ್ಲಿನಲ್ಲಿ ಹಣವನ್ನು ಪಕ್ಷಕ್ಕಾಗಿ ಕೂಡಿಸಬೇಕು ಇದಕ್ಕೆ ಯಾವ ಸಂಬಂಧ ಇದೆ ಮತ್ತು ಅಸಂಬದ್ಧವಾದ ವಿಚಾರಗಳನ್ನು ಹೇಳಿದರೆ ಇದರಲ್ಲಿ ಏನು ಬರುತ್ತದೋ ನನಗಂತೂ ಅರ್ಥವಾಗುತ್ತಿಲ್ಲ. ಮಾನ್ಯ ಸದಸ್ಯರು ಸತ್ಯಕ್ಕೆ ದೂರವಾದ ಮಾತುಗಳನ್ನು ಇಲ್ಲಿ ಹೇಳುತ್ತಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮಂತ್ರಿಗಳು ಸತ್ಯಕ್ಕೆ ದೂರವಾದ ಮಾತನ್ನು ನಾವು ಇಲ್ಲಿ ಹೇಳುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಇಂತಹ ಸತ್ಯವನ್ನು ಸಾಬೀತು ಮಾಡುವ ಕಾಲ ಬಂದೇ ಬರುತ್ತದೆ. ಆಗ ಗೊತ್ತಾಗುತ್ತದೆ. It is just to put dust in the eyes of the public to postpone the Elections. ಶ್ರೀಮಾನ್ ಬಿ. ಎಂ. ಪಾಟೀಲರವರು ಬಹಳ ವೆಹಿಮೆಂಟಾಗಿ ಇಲ್ಲಿ ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳುತ್ತಿದ್ದಾರೆ ಎಂದು ಹೇಳುತ್ತಾರೆ. ನಿಮ್ಮ ಅನುಕೂಲಕ್ಕೋಸ್ಕರವಾಗಿ ನಿಮಗೆ ಬೇಕಾದ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು ಕೆಲಸ ಮಾಡುತ್ತಿದ್ದೀರಿ. ನಾನು 1967 ರಿಂದೀಚೆಗೆ ಇಲ್ಲಿ ಮಾತನಾಡುತ್ತಿದ್ದೇನೆ. ಇದರಲ್ಲಿ ಎಷ್ಟು ನಗರಸಭೆಗಳನ್ನು ಸೂಪರ್‌ಸೀಡು ಮಾಡಿ ನಿಮ್ಮ ಅನುಕೂಲಕ್ಕಾಗಿ ಎಷ್ಟು ಹಣವನ್ನು ನಿಮ್ಮ ಪಕ್ಷದ ಬೆಳವಣಿಗೆಗಾಗಿ ವಸೂಲು ಮಾಡಿದ್ದಾರೆ ಎನ್ನುವುದಕ್ಕೆ ನನ್ನ ಬಳಿ ದಾಖಲೆಗಳಿವೆ. ನಿಮಗೆ ಬೆಂಬಲ ಕೊಡುವ ಅಧಿಕಾರಿ ಜನ ಬೇಕು ಎಂದು ಅಧಿಕಾರವನ್ನು ನಿಮ್ಮ ಅನುಕೂಲಕ್ಕಾಗಿ ಇಟ್ಟುಕೊಂಡಿದ್ದೀರಿ. ಜನರ ಕಣ್ಣಿಗೆ ಮಣ್ಣೆರಚುವುದಕ್ಕಾಗಿ ಸರಕಾರ ಇಲ್ಲಿ ಇಂತಹ ಒಂದು ಕಾಯಿದೆ ತರುತ್ತಿದ್ದಾರೆ. ಮಂತ್ರಿಮಂಡಲದವರು ಒಪ್ಪಿಗೆ ಕೊಡದೇ ಇದ್ದರೂ ಅನ್ಯಾಯವಾಗಿ ಟೆಂಡರುಗಳನ್ನು ಕರೆಯದೇ ನಗರ ಸಭೆಯವರು ಪೈಪುಗಳನ್ನು ಕೊಂಡು ಸರಕಾರಕ್ಕೆ ನಷ್ಟವನ್ನುಂಟು ಮಾಡಿದ್ದಾರೆ. ಇದರಲ್ಲಿ ಅಕ್ರಮ ವ್ಯವಹಾರಗಳಾಗಿವೆ ಎಂದು ಸಾಬೀತು ಮಾಡಿದರೂ ಇದುವರೆಗೂ ಸರಕಾರ ಏಕೆ ತಕ್ಕ ಕಾರ್ಯ

(ಶ್ರೀ ಕೆ. ಎಚ್. ಪಾಟೀಲ್)

ಕ್ರಮ ತೆಗೆದುಕೊಳ್ಳಲಿಲ್ಲ! ಇದರಲ್ಲಿರುವ ಹಿನ್ನಲೆ ಏನು? ಬೆಂಗಳೂರು ಜನತೆಗೆ ಮೋಸ ಮಾಡುವುದಕ್ಕಾಗಿ ಇಂತಹ ಒಂದು ಮಸೂದೆ ತಂದು ಚುನಾವಣೆ ನಡೆಸುತ್ತೇವೆ ಎಂದು ಹೇಳುತ್ತಾ ಜನರಿಗೆ ಮೋಸ ಮಾಡಬಾರದು. ನೀವು ಕಾಯಿದೆ ಮಾಡಿ ತರಬೇಕಾಗಿದ್ದರೆ ಯಾವ ರೀತಿ ವಾರ್ಡುಗಳನ್ನು ಎಲ್ಲೆಲ್ಲಿ ಮಾಡಬೇಕು ಮತ್ತು ಸಮರ್ಪಕವಾಗಿ ಇಷ್ಟೇ ದಿನದಲ್ಲಿ ಇವನ್ನು ಮುಗಿಸಬೇಕು ಎಂದು ನಿರ್ದಿಷ್ಟವಾಗಿ ಒಂದು ರೇಟನ್ನು ಇದರಲ್ಲಿ ನಮೂದು ಮಾಡಬೇಕು. ಹಿಂದೆ ಇಲ್ಲಿ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ನಾಡಗೌಡರು ಮಾರುಕಟ್ಟೆಗಳ ಚುನಾವಣೆಯನ್ನು ಇಂತಿಷ್ಟೇ ದಿನದಲ್ಲಿ ಮಾಡುತ್ತೇವೆಂದು ತಾರೀಖನ್ನು ನಿಗದಿ ಮಾಡಿ ಬಹಳ ಸಾಹಸದಿಂದ ಕೆಲಸಮಾಡಿ ಎಲ್ಲ ಕಡೆಗಳಲ್ಲೂ ಚುನಾವಣೆಗಳಾಗುವಂತೆ ಮಾಡಿದರು. ಇದೇ ರೀತಿ ನಮ್ಮ ಮಾನ್ಯ ಮಂತ್ರಿಗಳಾದ ಪಾಟೀಲರವರೂ ಕೂಡ ಕಾಯಿದೆಯಲ್ಲಿ ಸರಿಯಾಗಿರುವ ಒಂದು ಡೇಟನ್ನು ನಮೂದು ಮಾಡಬೇಕಾಗಿತ್ತು. ಇದನ್ನು ಈಗ ಮಾಡಿಲ್ಲ. ಇದರಿಂದಾಗಿ ಚುನಾವಣೆಗಳು ಯಾವಾಗ ಆಗುತ್ತೆ ಎನ್ನುವುದು ಗೊತ್ತಾಗುತ್ತಿಲ್ಲ. ಜನತಾ ರಾಜ್ಯದಲ್ಲಿ ಜನರಿಗೆ ಅನುಕೂಲವಾಗುವಂತೆ ಒಂದು ಮಸೂದೆಯನ್ನು ಇಲ್ಲಿ ತರಬೇಕಾಗಿತ್ತು. ಆ ರೀತಿ ಮಾಡಿಲ್ಲ. ಇದರಲ್ಲಿ ಕೆಲವು ಕಲಂಗಳಲ್ಲಿ ಟ್ಯಾಕ್ಸ್‌ಗಳನ್ನು ಯಾವ ರೀತಿ ಹಾಕಬೇಕು ಎನ್ನುವುದರ ಬಗ್ಗೆ ಹೇಳಲಾಗಿದೆ. ಇದಕ್ಕೆ ಬದಲು ಬೇಗನೆ ಚುನಾವಣೆಗಳನ್ನು ಮಾಡಿ ಜನತೆಗೆ ಅಧಿಕಾರಗಳನ್ನು ಕೊಡುವಂತೆ ಮಾಡಲು ಅನುಕೂಲವಾದ ಕಾಯಿದೆ ಸಾಧುವಾಗಿರುತಿತ್ತು.

ಶ್ರೀ ಬಿ. ಎಂ. ಪಾಟೀಲ್.—ವೇಕೆಂಟು ಲ್ಯಾಂಡ್ ಮೇಲೆ ಟ್ಯಾಕ್ಸ್ ಹಾಕುವುದನ್ನು ಅಬಾಲಿಷ್ ಮಾಡಬೇಕೆಂದು ಇದರಲ್ಲಿ ಸೇರಿಸಲಾಗಿದೆ. ಇದರಲ್ಲಿ ಪ್ರಾಪರ್ಟೀ ಟ್ಯಾಕ್ಸ್ ಬರುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ವೇಕೆಂಟು ಲ್ಯಾಂಡು ಟ್ಯಾಕ್ಸ್ ಆಗಲೀ ಪ್ರಾಪರ್ಟಿ ಟ್ಯಾಕ್ಸ್ ಆಗಲೀ ಕಾರ್ಪೊರೇಷನ್ ಚುನಾವಣೆಗಳಾದ ಮೇಲೆ ಜನತೆಯ ಪ್ರತಿನಿಧಿಗಳು ಬಂದಮೇಲೆ ಅವರ ಅಭಿಪ್ರಾಯಗಳನ್ನು ಪಡೆದು ಮಾಡುವುದು ಸರಿಯಾಗಿರುತ್ತದೆ. ಇದನ್ನು ಬಿಟ್ಟು ನಿಮಗೆ ಬೇಕಾದ ಒಬ್ಬರು ಅಧಿಕಾರಿಗಳಿದ್ದಾರೆ ಎಂದು ಟ್ಯಾಕ್ಸ್‌ಗಳನ್ನು ಹಾಕಲು ಹೋಗುವುದು ಸರಿಯಲ್ಲ. ಇದು ಸರಕಾರಕ್ಕೆ ಭೂಷಣಪ್ರಾಯವಾದುದೂ ಅಲ್ಲ. ಇಂತಹ ಮಸೂದೆ ಇಲ್ಲಿ ತರುವುದು ಸೂಕ್ತವೂ ಅಲ್ಲ. ಇಲ್ಲಿ ತಂದಿರುವ ಕಾಯಿದೆಯಲ್ಲಿ ಚುನಾವಣೆಗಳಿಗೆ ಸಂಬಂಧಪಟ್ಟ ಕಲಂಗಳನ್ನು ಬಿಟ್ಟು ಉಳಿದ ಕಲಂಗಳನ್ನು ಇಲ್ಲಿ ತರುವ ಪ್ರಮೇಯವೇ ಇರಲಿಲ್ಲ. ಇದರಿಂದ ಸರಕಾರ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಸರಕಾರಕ್ಕೆ ಇರುವ ಅಧಿಕಾರದಲ್ಲೇ ಒಂದು ಸರಕಾರದ ಆರ್ಡರು ಹೊರಡಿಸಿ ಯಾವ ರೀತಿ ವಾರ್ಡುಗಳನ್ನು ಮಾಡಬಹುದು ಮತ್ತು ಒಂದು ನಿರ್ದಿಷ್ಟ ಅವಧಿಯಲ್ಲಿ ವೋಟರುಗಳ ಲಿಸ್ಟನ್ನು ಮಾಡುತ್ತೇವೆ ಎನ್ನುವದನ್ನೆಲ್ಲಾ ಮಾಡಲು ಸರಿಯಾದ ಒಂದು ದಿನವನ್ನು ಗೊತ್ತು ಮಾಡಬಹುದಾಗಿತ್ತು. ಆ ರೀತಿ ಮಾಡದೇ ಇರುವುದರಿಂದ ಇಲ್ಲಿ ಚುನಾವಣೆಗಳು ನಡೆಯುವುದು ಕಷ್ಟವಾಗುತ್ತದೆ. ಆದುದರಿಂದ ಇಲ್ಲಿ ತಂದಿರುವ ಕಾಯಿದೆಯಲ್ಲಿ ಚುನಾವಣೆಗಾಗಿ ತಂದಿರುವ ನಿಯಮಗಳನ್ನು ಮಾತ್ರ ಒಪ್ಪಿ ಇತರ ನಿಯಮಗಳು ಅಗ್ರಾಹ್ಯವಾದುವು ಎಂದು ಹೇಳಿ ಈ ಮಸೂದೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

Mr. DEPUTY SPEAKER.—Now the discussion on this Bill is concluded. The Minister will reply tomorrow. The House will now rise and meet again tomorrow at 1 P. M.

The House adjourned at Six of the Clock to meet again at One of the Clock on Wednesday the 23rd September 1970.

WD 15410—GPB—600—23-11-70